# ನಾನು ನಾನಾಗಲು

## ಸಾಶಿಮ ಆತ್ಮಕಥನ

ಸಂಪಾದಕರು

**ಮಹಾನಂದಾ ಡಿಗ್ಗಾಂವಕರ**

ಪ್ರಕಾಶಕರು

**ಡಾ॥ ಸಾ. ಶಿ. ಮರುಳಯ್ಯ ಪ್ರತಿಷ್ಠಾನ**

ಬೆಂಗಳೂರು

**NAANU NAANAGALU**
Auto-biography of **Sashi Marulaiah**

Edited By
Mahananda S. Diggaonkar

Published by
**Dr. Sa. Shi Marulaiah Prathistana**
'# 3, 'Ragini', Service Road
Hampinagar
Bengaluru - 560 104

© M. Shivaprasad

ಪ್ರಥಮ ಮುದ್ರಣ: 2016

ಉಪಯೋಗಿಸಿದ ಕಾಗದ: 70 ಜಿಎಸ್ಎಂ ಮ್ಯಾಪ್ಲಿಥೋ

ಪುಟಗಳು: 96

ಬೆಲೆ: ರೂ. 80

ಪ್ರಕಾಶಕರು
**ಡಾ|| ಸಾ. ಶಿ. ಮರುಳಯ್ಯ ಪ್ರತಿಷ್ಠಾನ**
ಬೆಂಗಳೂರು

No part of this publication may be reproduced in whole or in part or stored in a retrieval system, or transmitted in any form or by any means, electronic, mechanical or photo copying or otherwise without written permission by the copy right holder/ publisher.

ಮುಖಪುಟ ವಿನ್ಯಾಸ: **ಸುಧಾಕರ ದರ್ಬೆ**

ಪುಟ ವಿನ್ಯಾಸ: **ಶ್ರೀಧರ್**

ಮುದ್ರಣ

**ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್,** ರಾಜಾಜಿನಗರ, ಬೆಂಗಳೂರು

ಎನ್ನ ನಾನರಿಯದಂದು ಮುನ್ನ ನೀನೇಗಾರ್ದೆ ಹೇಳಾ?
ಮುನ್ನ ನೀ ಬಾಯಿ ಮುಚ್ಚಿಕೊಂಡಿರ್ದೆ ಎಂಬುದ
ನಾ ನಿನ್ನ ಕಣ್ಣಿಂದ ಕಂಡೆನು!
ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ
ಅದನೆನ್ನ ಕಣ್ಣಿಂದ ಕಂಡು ನಾಚಿದೆ ನೋಡಾ!
ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ
ಸಂಚದ ನೋಟ ಒಂದೆ ನೋಡಾ!
ಗುಹೇಶ್ವರ, ನಿನ್ನ ಬೆಡಗಿನ ಬಿನ್ನಾಣವರಿದೆ ನೋಡಾ!

**–ಅಲ್ಲಮಪ್ರಭು**

ನಾನು ನಾನಾಗಲು ನಿನ್ನಿಂದ 'ನಾನು' ಬಿಡಿಸಿಕೊಳ್ಳಬೇಕು.
ಅಂದಿನವರೆಗೆ ನಾನಾ ನಾನಾಗಲಾರೆ!
ಕಡೆಯಲ್ಲಿ,
ನಾನು ನೀನೆ
ನೀನು ನಾನೆ,
ನಾವಿಬ್ಬರು ಅಭಿನ್ನರು.

# ನಿವೇದನೆ

ಸುಮಸುಂದರ ತರುಲತೆಗಳ ಬೃಂದಾವನ ಲೀಲೆ
ಸುಪ್ರಬೋಧ ಚಂದ್ರೋದಯ ರಾಗಾರುಣ ಜಾಲೆ॥
ಗಿರಿಸ ಬನ ಸಂಚಾರಿಣಿ ತುಂಗಾಜಲ ನೀರೆ
ದಲ ದಲ ದಲ ಮೆದು ಹಾಸದಿ ಗಾನಸೂಕ್ತ ಲೋಲೆ॥

ಎಂಬ ಮಧುರಾಧಿ ಮಧುರ ಕವಿತೆ ಮೂಲಕ ವಿಶ್ವದ ಸಮಸ್ತ ಕನ್ನಡ ಕುಲಕೋಟಿಯ ಮನಸೂರೆಗೊಂಡಿದ್ದ ಸಾಸಲು ಶಿವರುದ್ರಯ್ಯ ಮರುಳಯ್ಯನವರು ಸಮಕಾಲೀನ ಕನ್ನಡ ಸಾರಸ್ವತ ಲೋಕದ ದಿಗ್ಗಜರುಗಳಲ್ಲಿ ಪ್ರಮುಖರು. ಡಾ॥ ಸಾ. ಶಿ. ಮರುಳಯ್ಯನವರು ಕನ್ನಡ ನಾಡು ಕಂಡ ಹೆಮ್ಮೆಯ ಕವಿ, ಚಿಂತಕ, ಬರೆಹಗಾರ ಮತ್ತು ಸತತ ಅಭ್ಯಾಸಿ.

ಮಾನವೀಯ ಅಂತಃಕರಣವನ್ನು ವಿಶ್ವವ್ಯಾಪಿಗೊಳಿಸಿದ ಸಾಶಿಮ ಅವರು ದಾರ್ಶನಿಕ ಮನೋಸ್ವಾಸ್ಥ್ಯದಿಂದ ತಮ್ಮ ಬದುಕನ್ನು ಮಂದಾರಗೊಳಿಸಿಕೊಂಡಿದ್ದರು, ಅವರೋರ್ವ ಸಂತ ಸಾಹಿತಿ. ಕುವೆಂಪು ಅವರ ಪರಮ ಶಿಷ್ಯಬಳಗದಲ್ಲಿ ಒಬ್ಬರಾಗಿದ್ದ ಸಾಶಿಮ ಪ್ರಖ್ಯಾತ ವಾಗ್ಮಿಗಳಾಗಿದ್ದಂತೆ ಅಪ್ರತಿಮ ಬೋಧಕ ತಪಸ್ವಿಗಳೂ ಅಗಿದ್ದರು.

ನೂರಾರು ಅರ್ಹ ಕನ್ನಡಿಗರನ್ನು ಐ.ಎ.ಎಸ್., ಕೆ.ಎ.ಎಸ್. ಮತ್ತು ಅಲೈಡ್ ಸೇವೆಗೆ ಹುರಿದುಂಬಿಸಿ, ತರಬೇತಿಗೊಳಿಸಿದ ಖ್ಯಾತಿ ಇವರದು. ೨೦೧೩ರಲ್ಲಿ 'ಸತ್ತಮೇಲೂ ಸಮಾಜ ಸೇವೆ!' ಕೃತಿಯ ಮೊದಲ ಅವೃತ್ತಿಗೆ ಅರ್ಥಪೂರ್ಣ ಮುನ್ನುಡಿ ಬರೆದು, ಹರಸಿದ್ದ ಡಾ. ಸಾ ಶಿ. ಮರುಳಯ್ಯನವರು ೨೦೧೬ ಫೆಬ್ರವರಿ ೫ ರಂದು, ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಕೆಲವು ದಿನ ವಯೋಸಹಜ ಅನಾರೋಗ್ಯದಿಂದ ಬಳಲಿ ಶಿವಾಧೀನರಾದರು.

ಸಾಶಿಮ ಅವರ ಮನೋಇಚ್ಛೆಯಂತೆ ಅವರ ಎರಡು ಕಣ್ಣುಗಳನ್ನು ಬೆಂಗಳೂರಿನ ಸಿದ್ದಯ್ಯ ರಸ್ತೆಯ ಲಾಯನ್ಸ್ ವೆಸ್ಟ್ ಐ ಹಾಸ್ಪಿಟಲ್‌ಗೆ ಹಾಗೂ ಅವರ ಪಾರ್ಥಿವ ಶರೀರವನ್ನು ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜಿನ ಬೋಧನಾ ಆಸ್ಪತ್ರೆಗೆ ದಾನ ಮಾಡಲಾಯಿತು.

ದೇಹ ದಾನದ ಮೂಲಕ ವೈಶಿಷ್ಟ್ಯಪೂರ್ಣ ಸಮಾಜ ಸೇವೆಗೆ ಸಮರ್ಪಿಸಿಕೊಂಡ ನಮ್ಮೆಲ್ಲರ ಪ್ರೀತಿಯ 'ಅಣ್ಣಯ್ಯ' ಸಾವಿನ ನಂತರವೂ ಸಾರ್ಥಕ ಬದುಕನ್ನು ಸಾಧಿಸಿದ ಮಹಾನ್ ಸಾಧಕರಾಗಿದ್ದಾರೆ. ಹಾಗೆಯೇ ಸದಾವಕಾಲ ನಮ್ಮೆಲ್ಲರ ಗೌರವಾದರಗಳಿಗೆ ಸಂಪಾತ್ರರಾಗಿದ್ದಾರೆ.

ಡಾ॥ ಸಾಶಿಮ ಅವರಿಗೆ ಎಪ್ಪತ್ತು ವರ್ಷ ತುಂಬಿದ ಜನವರಿ ೨೮, ೨೦೦೧ರ ಸಂದರ್ಭದಲ್ಲಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದಕತ್ವದ "ಅಭಿಜ್ಞ" ಹೆಸರಿನ ಡಾ॥ ಸಾ. ಶಿ. ಮರುಳಯ್ಯ ಅಭಿನಂದನ ಗ್ರಂಥದಲ್ಲಿನ "ನಾನು ನಾನಾಗಲು" ಸಾಶಿಮ ಅತ್ಮಕಥನವನ್ನು ಪ್ರತ್ಯೇಕ ಸ್ವತಂತ್ರ ಕೃತಿಯಾಗಿ ಸಾಶಿಮ ಅವರ ಪ್ರಥಮ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಪ್ರಕಟಿಸಲು ನಿರ್ಧರಿಸಿರುವುದು, ನಿಜಕ್ಕೂ ಸಂತೋಷದ ಸಂಗತಿ.

ಎಂಟು ದಶಕಗಳ ಅವರ 'ಅರ್ಪಣಾ ಬದುಕು' ನಿಜಕ್ಕೂ ಇಂದಿನ ಯುವ ಪೀಳಿಗೆಗೆ ಕೈದೀವಿಗೆಯಾಗಬಲ್ಲದು. ೮೪೬ ಪುಟಗಳ 'ಅಭಿಜ್ಞ' ಸಾಶಿಮ ಸಾಹಿತ್ಯಾಸಕ್ತ ಎಲ್ಲ ಕನ್ನಡ ಓದುಗರ ಕೈಗೆ ದೊರೆತಿಲ್ಲ ಎಂಬುದನ್ನು ತಿಳಿದು, ಅವರ 'ನಾನು ನಾನಾಗಲು' ಆತ್ಮಕಥನ, ಸಾಶಿಮ ಸೂಕ್ತಿಗಳು, ಸಾಶಿಮ ಸಂದರ್ಶನ, ಸಾಹಿತ್ಯ ಸಂಚಾರ, ಉತ್ತರ ಮುಖಿ, ಸಾಧನೆಯ ಮೂರು ಸಂವತ್ಸರಗಳು ಹಾಗೂ ತಮ್ಮ ಗುರು ಕುವೆಂಪು ಕುರಿತಾಗಿ ಸಾಶಿಮ ಬರೆದಿರುವ "ತನ್ನ ಕಾವ್ಯಕ್ಕೆ ತಾಂ ಮಹಾಕವಿ ಮಣಿಯುವಂತೆ!" (ಅನಿಕೇತನ – ಸಂ : ಸಾಶಿಮ) ಮುಂತಾದ ಲೇಖನಗಳನ್ನು ಒಟ್ಟಾಗಿಸಿ ಈ ಸಂಕಲನವನ್ನು ಪ್ರಕಟಿಸಲಾಗುತ್ತಿದೆ. ಇಂಥ ಅನನ್ಯ ಕೃತಿಯನ್ನು ಸಂಪಾದಿಸಲು ಅನುವು ಮಾಡಿಕೊಟ್ಟ ಡಾ॥ ಸಾ. ಶಿ. ಮರುಳಯ್ಯ ಪ್ರತಿಷ್ಠಾನದ ಎಲ್ಲ ಪದಾಧಿಕಾರಿಗಳನ್ನು ಹಾರ್ದಿಕವಾಗಿ ಅಭಿವಂದಿಸುತ್ತೇನೆ.

ಕಲಬುರಗಿ

**ಮಹಾನಂದಾ ಡಿಗ್ಗಾಂವಕರ**

# ಪ್ರಕಾಶಕರ ನುಡಿ

೨೦೧೭ ಫೆಬ್ರವರಿ ೫, ನಮ್ಮ ಪೂಜ್ಯ ತಂದೆ ಡಾ॥ ಸಾಸಲು ಶಿವರುದ್ರಯ್ಯ ಮರುಳಯ್ಯ ಅವರ ಮೊದಲ ಪುಣ್ಯಸ್ಮರಣೆ. ಅಧ್ಯಯನ, ಅಧ್ಯಾಪನ, ಸಾಹಿತ್ಯಕೃಷಿ, ಸಾಂಸ್ಕೃತಿಕ ಸಂಘಟನೆ ಮುಂತಾದ ಸೃಜನಶೀಲ ಕಾರ್ಯಚಟುವಟಿಕೆಗಳಲ್ಲಿ ತಮ್ಮ ಕೊನೆಯ ಉಸಿರಿರುವರೆಗೆ ತೊಡಗಿಕೊಂಡಿದ್ದ ನಮ್ಮ ತಂದೆಯವರ ನೆನಪು ಸದಾ ಹಸಿರಾಗಿರಲು, ಸಾಧ್ಯವಾದಷ್ಟು, ಪ್ರತಿ ವರುಷ ಅವರ ಒಂದೆರೆಡು ಕೃತಿಗಳನ್ನಾದರೂ ಪುನರಪಿ ಸಂಪಾದಿಸಿ – ಪ್ರಕಟಿಸಬೇಕೆಂಬುದು ನಮ್ಮ ಡಾ॥ ಸಾ. ಶಿ. ಮರುಳಯ್ಯ ಪ್ರತಿಷ್ಠಾನದ ಹೆಬ್ಬಯಕೆ.

ಅಂತೆಯೇ, ಈ ವರುಷ ನಮ್ಮ ತಂದೆಯವರ ಆತ್ಮ ಕಥನ 'ನಾನು ನಾನಾಗಲು' ಕೃತಿಯನ್ನು ಈ ದಿಶೆಯಲ್ಲಿನ ಅವರ ಇನ್ನಿತರ ಸಾಂದರ್ಭಿಕ ಲೇಖನಗಳೊಂದಿಗೆ ಪ್ರಕಟಿಸಿ, ತಮ್ಮ ಕೈಗಿಡಲು ನಮಗೆ ತುಂಬಾ ಸಂತೋಷವೆನಿಸುತ್ತಿದೆ.

'ನಾನು ನಾನಾಗಲು' – ಸಾಶಿಮ ಆತ್ಮಕಥನದ ಈ ಕೃತಿಯನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿರುವ ಕಲಬುರಗಿಯ ನಮ್ಮ ಬಂಧು ಪ್ರೊ. ಮಹಾನಂದಾ ಡಿಗ್ಗಾಂವಕರ್ ಅವರಿಗೆ ಅನಂತ ಧನ್ಯವಾದಗಳು

ಈ ಕೃತಿಯ ಲೇಖನಗಳನ್ನು ಡಿಟಿಪಿಗೈದು ಅಂದವಾಗಿ ಪುಟವಿನ್ಯಾಸಗೊಳಿಸಿದ ಶ್ರೀ ಆರ್. ಎಸ್. ಶ್ರೀಧರ ಅವರಿಗೆ ಮತ್ತು ಆಕರ್ಷಕ ಮತ್ತು ಅರ್ಥಪೂರ್ಣ ಮುಖಪುಟವನ್ನು ರಚಿಸಿದ ಶ್ರೀ ಸುಧಾಕರ ದರ್ಬೆ ಅವರಿಗೆ ಹಾರ್ದಿಕ ವಂದನೆಗಳು.

ಹಾಗೆಯೇ, ವ್ಯವಸ್ಥಿತವಾಗಿ ಮುದ್ರಣ ಕಾರ್ಯ ಕೈಗೊಂಡ ಬೆಂಗಳೂರಿನ ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೆ ಧನ್ಯವಾದಗಳು.

ಬೆಂಗಳೂರು
ಡಿಸೆಂಬರ್ ೨೮, ೨೦೧೬

**ಎಂ. ಶಿವಪ್ರಸಾದ್**
ಪ್ರಕಾಶಕರು

# ಅನುಕ್ರಮಣಿಕೆ


- ನಾನು ನಾನಾಗಲು / ೯
- ಸಾಶಿಮ ಸೂಕ್ತಿಗಳು / ೪೯
- ಸಾಶಿಮ ಸಂದರ್ಶನ / ೫೪
- ಸಾಹಿತ್ಯ ಸಂಚಾರ.... / ೬೪
- ಉತ್ತರಮುಖಿ / ೬೭
- ಸಾಧನೆಯ ಮೂರು ಸಂವತ್ಸರಗಳು / ೭೦
- ತನ್ನ ಕಾವ್ಯಕ್ಕೆ ತಾಂ ಮಹಾಕವಿ ಮಣಿಯುವಂತೆ! / ೭೬
- ಸಾಶಿಮ ಸಾಹಿತ್ಯ ಸಂಪದ / ೯೪

# ನಾನು ನಾನಾಗಲು

ಈ ಜಗತ್ತಿಗೆ ನಾನು ಅವತರಿಸಿದ್ದು ತುಂಬ ತಡವಾಗಿ. ಎಂಟು ವರ್ಷಕ್ಕೆ ನನ್ನ ಮಗ ದಂಟು ಅಂತ ಅನ್ನೊ ಹಾಗೆ ನಮ್ಮ ಪಾಪ ಹುಟ್ಟಿದ್ದು ನನ್ನ ಮದುವೆಯಾದ 'ಎಂಟು ವರ್ಷಕ್ಕೆ' ಎನ್ನುತ್ತಿದ್ದರು ನಮ್ಮಮ್ಮ. ನಾನು ನಮ್ಮಮ್ಮನಿಗೆ ಪಾಪ! ಅಯ್ಯೋ ಪಾಪ! ಅಲ್ಲ; ಇದು ತಾವು ಮಾಡಿದ ಪಾಪ ಅಂತಲೂ ಅಲ್ಲ. ನಮ್ಮಮ್ಮನಿಗೆ ಹಾಗೆಂದು ಕರೆಯುವಲ್ಲಿ ತುಂಬಾ ಅಕ್ಕರೆ. ನಾನು ಮದುವೆಯಾಗಿ ಮಕ್ಕಳಾಗಿ ನನ್ನ ಮಗ ಮತ್ತು ಮಗಳಿಗೆ ಮಕ್ಕಳಾಗಿದ್ದರೂ ನಮ್ಮಮ್ಮನಿಗೆ ನಾನು ಪಾಪನೆ! ಅದು ಅವಳ ಒಲವಿನ ಸಂಬೋಧನೆ ಕೂಡ. ನಾನು ನಮ್ಮಮ್ಮನನ್ನು 'ಅಮ್ಮ' ಎಂದು ಕರೆಯುತ್ತಿರಲಿಲ್ಲ. 'ಅವ್ವ' ಎನ್ನುತ್ತಿದ್ದೆ. ನಮ್ಮ ದೊಡ್ಡಮ್ಮನ ಮಕ್ಕಳು ತಮ್ಮ ತಾಯಿಯನ್ನು 'ಅಮ್ಮ' ಎಂದು ಕರೆಯುತ್ತಿದ್ದರು. ನನಗೂ ಹಾಗೆ ಕರೆಯಬೇಕು ಅನ್ನಿಸಿತು. ಏಕೆ ಅಂದರೆ 'ಅವ್ವ' ಎನ್ನೋದು ಹಳ್ಳಿಗರ ಭಾಷೆ; ಅಮ್ಮ ಅನ್ನೋದು ಸುಸಂಸ್ಕೃತರ ನುಡಿ ಎಂಬ ಭಾವನೆ. ಅದರಿಂದಾಗಿ ನಾನು ಎಂಟು ಹತ್ತು ವರ್ಷದವನಾದ ಮೇಲೆ 'ಅಮ್ಮ' ಅನ್ನಲು ಶುರುಮಾಡಿದೆ. ನನ್ನ ತಮ್ಮನಿಗೆ ಹಾಗನ್ನಲು ಕಲಿಸಿದೆ.

ನಮ್ಮ ತಾಯಿ ಸಿದ್ದಮ್ಮನವರು, ತಂದೆ ಶಿವರುದ್ರಯ್ಯನವರು. ನನ್ನ ಹುಟ್ಟೂರು ಸಾಸಲು. ಅದಿರುವುದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟೀಕೆರೆ ಸಮ್ಮತಿನಲ್ಲಿ. ನಮ್ಮೂರು ನಾನು ಚಿಕ್ಕವನಿದ್ದಾಗ ನನ್ನಷ್ಟೇ ಚಿಕ್ಕದು. ಸುಮಾರು ಎಪ್ಪತ್ತು–ಎಂಬತ್ತು ಮನೆಗಳ ಪುಟ್ಟ ಗ್ರಾಮ. ಈಗ ನೂರು–ನೂರೈವತ್ತು ಮನೆಗಳಿವೆ. ಅದರ ಸುತ್ತ ತೆಂಗಿನ ತೋಟಗಳು. ಪೂರ್ವ ದಿಕ್ಕಿನಲ್ಲಿ ಹಬ್ಬಿಗೆ ಗುಡ್ಡ, ದಕ್ಷಿಣದಲ್ಲಿ ಕಾಡು. ನಮ್ಮ

ತೋಟದ ಪಕ್ಕದಲ್ಲೇ ಹಿರೀಹಳ್ಳ. ಅದು ನಮ್ಮ ಜೀವನದಿ. ಕೃಷ್ಣೆ, ಕಾವೇರಿ, ಗೋದಾವರಿ ಎಲ್ಲ! ಊರ ಹತ್ತಿರ ಬಂದಾಗಲೇ ಊರು ಕಾಣಿಸೋದು. ಅಲ್ಲಿನವರೆಗೂ ತೆಂಗು, ಮಾವು ಮೊದಲಾದ ಮರಗಿಡಗಳಿಂದ ಆವೃತವಾದ ಹಸಿರು ದ್ವೀಪ. ಊರಿಗೆ ಮೊದಲು ಸಿಕ್ಕುವುದು ಎಡ–ಬಲ ಭಾಗಗಳಿಗಿರುವ ಎರಡು ಚಿಕ್ಕ ಕಟ್ಟೆಗಳು. ಅವು ಊರಿಗೆ ಬರುವವರಿಗೆ ಎತ್ತುವ ಆರತಿ ತಟ್ಟೆಗಳಿದ್ದಂತೆ! ಊರ ಮುಂದೆ ಒಂದು ಅಶ್ವತ್ಥಕಟ್ಟೆ. ಮಧ್ಯದ ಅರಳೀಮರವನ್ನು ಯಾವ ಪುಣ್ಯಾತ್ಮ ಯಾವಾಗ ಹಾಕಿದನೊ ತಿಳಿಯದು. ಅದೊಂದು ಕಳಶದಂತೆ ಛತ್ರಿ ತೆರೆದುಕೊಂಡು ಬೃಹದಾಕಾರವಾಗಿ ನಿಂತಿದೆ. ಸಾಸಲಿಗೆ ಶೋಭೆ ತಂದಿದೆ ಕೂಡ. ಬನಶಂಕರಿ ನಮ್ಮ ಗ್ರಾಮದೇವತೆ. ಜೊತೆಯಲ್ಲಿ ಶ್ರೀ ಮರುಳುಸಿದ್ದೇಶ್ವರ ಸ್ವಾಮಿಯೂ ಇದ್ದಾನೆ. ಊರಾಚೆ ಮೂಡಣ ದಿಕ್ಕಿನಲ್ಲಿ ಸುಮಾರು ಕಾಲು ಕಿಲೋಮೀಟರ್‌ನಲ್ಲಿ ಒಂದು ಸುಂದರ ಹಿಪ್ಪೆಮರದ ತೋಪು. ಅಲ್ಲಿ ಹಣ್ಣು ಕೊಡುವ ಜಮ್ಮನೇರಿಲೆ ಮರವೂ ಇದೆ. ಅದರ ದಕ್ಷಿಣ ಭಾಗದಲ್ಲಿ ಬನಶಂಕರಿ ಗುಡಿ, ಗುಡಿಯಲ್ಲಿ ಬನಶಂಕರಿಯ ಸ್ಥಾವರ ಮೂರ್ತಿ; ಮರೆಮೂರ್ತಿ (ಉತ್ಸವದೇವತೆ) ಊರೊಳಗಿನ ದೇಗುಲದಲ್ಲಿ. ಅಂದಿನ ಜನಸಂಖ್ಯೆ ಹೆಚ್ಚೇನು ಇಲ್ಲದಿದ್ದರೂ ವೀರಶೈವರು ಬಹುಸಂಖ್ಯಾತರು, ಅಕ್ಕಸಾಲಿಗರು, ನಾಯಕರು, ಸರ್ಪ ಒಕ್ಕಲಿಗರು, ಅಗಸರು, ಗಾಣಿಗರು, ಹೊಲೆಯರು, ಮಾದಿಗರು, ಅಲ್ಪಸಂಖ್ಯಾತರು. ರಾಮೋಜಿರಾವ್ ಎಂಬ ಮರಾಠೆಯವರ ದರ್ಜಿಗಳು ಕುಟುಂಬ ಸಮೇತ ಬಂದು ಬಹಳ ವರ್ಷಗಳಿದ್ದು ಅನಂತರ ಚಿಕ್ಕನಾಯಕನಹಳ್ಳಿ, ತಿಪಟೂರು ಮೊದಲಾದೆಡೆಗಳಿಗೆ ಹೋದರು. ಆದರೆ ಎಲ್ಲಿಂದಲೋ ಬಂದ ಹುಸೇನ್ ಸಾಬರ ಕುಟುಂಬ ನೆಲೆಯೂರಿನಿಂತಿದೆ. ಈಗಲೂ ಇದೆ. ಊರವರೊಡನೆ ಸೌಹಾರ್ದದ ಬಾಳುವೆ ಮಾಡುತ್ತಾ. ಬ್ರಾಹ್ಮಣರದು ಒಂದೇ ಒಂದು ಮನೆ. ಮಕ್ಕಳೆಲ್ಲಾ ನಗರ ಸೇರಿಕೊಂಡ ಮೇಲೆ, ನಾವ್ಯಾಕಿಲ್ಲಿರೋದು ಅಂತಾ ಶ್ಯಾನುಭೋಗ ನಾರಾಯಣಪ್ಪನವರು ನಮ್ಮೂರು ಬಿಟ್ಟು ಕಂದಿಕೆರೆಗೆ ಹೋದದ್ದು ನನಗೆ ಗೊತ್ತು.

ಸಾಸಲು ಚಿಕ್ಕಹಳ್ಳಿಯಾದರೂ ಸ್ವಲ್ಪ ಹೆಚ್ಚು ಕಡಿಮೆ ಹಳೇ ಮೈಸೂರಿನ ಅರ್ಧ ಭಾಗದ ವ್ಯವಹಾರ ಕೇಂದ್ರವಾಗಿತ್ತು. ತುಮಕೂರು, ತಿಪಟೂರು, ಗುಬ್ಬಿ, ಶಿವಮೊಗ್ಗ, ಚಿತ್ರದುರ್ಗ ಮೊದಲಾದ ಕಡೆಯ ವ್ಯಾಪಾರಿಗಳು ಸಾಸಲಿಗೆ ಬಂದು ಕೈಸಾಲ ಪಡೆದುಕೊಂಡು ಹೋಗುತ್ತಿದ್ದರು. ಬಳ್ಳಾರಿ ವ್ಯಾಪಾರ ಮಾಡುವವರ ಲೇವಾದೇವಿ ನಮ್ಮೂರಲ್ಲಿತ್ತು. ಸಾಸಲು ಪುಟ್ಟಣ್ಣ ಶೆಟ್ಟರು, ರೇವಣ್ಣ ಶೆಟ್ಟರು, ಚನ್ನವೀರ ಶೆಟ್ಟರು, ಕೊಟ್ಟೂರ ಶೆಟ್ಟರು, ಗುದ್ಲಪ್ಪ ಶೆಟ್ಟರು – ಇವರೇ ಮೊದಲಾದ ಲಿಂಗಾಯತ ಶೆಟ್ಟರು ಆಗರ್ಭ ಶ್ರೀಮಂತರಿದ್ದರು. ಒಳ್ಳೆ ವ್ಯವಹಾರವಿಟ್ಟುಕೊಂಡಿದ್ದರು. ಊರಿನ ಅಭಿವೃದ್ಧಿ ಕಾರ್ಯಗಳಿಗೆ ಅವರ ನೆರವು ನಿರಂತರ ಇರುತ್ತಿತ್ತು. ಊರಿನ ಅರ್ಧಜನಕ್ಕೆ ಸಾಸಲು ಸಾಹುಕಾರರ ಮನೆಯಿಂದಲೇ ಬೆಳಕು. ಸಂಜೆ ಆಯಿತೆಂದರೆ ಎಲ್ಲರೂ ಅವರ ಮನೆಗೆ ಹೋಗಿ ದೀಪ ಹಚ್ಚಿಕೊಂಡು

ಬಂದು ತಮ್ಮ ತಮ್ಮ ಮನೆಗಳನ್ನು ಬೆಳಗಿಸಿಕೊಳ್ಳುತ್ತಿದ್ದರು. ಬೆಂಕಿ ಕಡ್ಡಿ ಪರಿಚಯ ಇರಲಿಲ್ಲ ಎಂದಲ್ಲ. ಹೆಚ್ಚು ಜನ ಬೆಂಕಿಪೊಟ್ಟಣ ಕೊಳ್ಳಲು ಹಣ ವ್ಯಯ ಮಾಡುತ್ತಿರಲಿಲ್ಲ. ಊರಿನವರಾದರೂ ಹಾಲು ಹಣ್ಣುಗಳನ್ನು ಮಾರಿದ್ದೂ ಇಲ್ಲ, ಕೊಂಡದ್ದೂ ಇಲ್ಲ. ನಮಗೆಲ್ಲಾ ಮರಿಬಸವೇಗೌಡರ ಮನೆಯ ಮಜ್ಜಿಗೆ ನಿರಂತರ ಸಿಗುತ್ತಿತ್ತು.

ಊರ ಪಟೇಲರು ಊರಿಗೆ ಯಜಮಾನರು. ಹಾಗೇ ಉಗ್ರೇಗೌಡರ ಸಿದ್ದಪ್ಪನವರು ನಮ್ಮೂರ ಗೌರವಸ್ಥರು. ಊರ ಜಗಳಗಳಿದ್ದರೆ ಈ ಗಣ್ಯರೇ ತೀರ್ಪು ಕೊಟ್ಟು ಸರಿಪಡಿಸುತ್ತಿದ್ದರು. ಊರಲ್ಲಿ ಕಳ್ಳತನವಾಗಲಿ, ಕೊಲೆಯಾಗಲಿ, ಕುಡಿತ ಜೂಜು ಮೊದಲಾದವುಗಳಾವೂ ಇರಲೇ ಇಲ್ಲ. ಪೊಲೀಸ್‌ನವನೇನಾದರೂ ಬಂದರೆ ಜನ ಹೆದರಿ ಓಡುತ್ತಿದ್ದರು. ಯಾವುದೇ ಕೇಸು ಚಿಕ್ಕನಾಯಕನಹಳ್ಳಿ ಪೊಲೀಸ್ ಸ್ಟೇಷನ್ನಿನಲ್ಲಿ ದಾಖಲಾದದ್ದನ್ನು ನಾನು ಕಾಣೆ. ಆದರೆ ಈಗಿನ ಮಾತು ಬೇರೆ!

ಊರಿನಲ್ಲಿ ಯಾರ ಮನೆಯಲ್ಲಿ ಶುಭ ಅಶುಭ ಕಾರ್ಯಗಳಾದರೂ ಎಲ್ಲರೂ ಪಾಲ್ಗೊಳ್ಳುತ್ತಿದ್ದರು. ನನ್ನ ಮದುವೆಯನ್ನೇ ಹೇಳುವುದಾದರೆ, ಗಾಣಿಗರ ತಿಮ್ಮಪ್ಪ ಎಣ್ಣೆ ತಂದು ದೀಪ ಹಚ್ಚಿದ, ಮಡಿವಾಳರ ಕರಿಯಮ್ಮ ಪತ್ತು ಹಚ್ಚಿಕೊಂಡು ಕುಳಿತರು, ಮಾದಿಗರ ಹಟ್ಟಿಯವರು ಕಾಡಿನಿಂದ ಸೌದೆ ಕಡಿದು ತಂದು ರಾಶಿ ಹಾಕಿದರು. ಹೊಲೆರಟ್ಟಿಯವರು ಓಲಗ ಮಾಡಿದರು. ನಾಯಕರು (ಅವರನ್ನು ಪಾಳೇಗಾರರು ಎಂದನ್ನುತ್ತೇವೆ) ಮದುವೆ ಚಪ್ಪರ ಹಾಕಿದರು. ಕುಳವಾಡಿ ಊರಿ ಬೀದಿ ಗುಡಿಸಿದ, ಊರಿನ ಹೆಣ್ಣುಮಕ್ಕಳು ಹಪ್ಪಳ ಸೊಂಡಿಗೆ ಇಟ್ಟರು, ಯುವಕರು ಬತ್ತ ಕುಟ್ಟಿದರು. ಬಳೆತೊಡಿಸಲು ಬಳೆಗಾರರ ಗುಂಡಪ್ಪನ ಹೆಂಡತಿ ಮತ್ತು ಮದುಮಗನ ಕ್ಷೌರಕ್ಕೆ ವೀರಣ್ಣ–ಇವರು ಮಾತ್ರ ಶೆಟ್ಟೀಕೆರೆಯಿಂದ ಬರಬೇಕು. ಇವರಿಗಾರಿಗೂ ಕೂಲಿ ಕೊಡುವುದಿಲ್ಲ. ಕೇವಲ ಆಯಾ ಕೊಡುವುದು ಅಂದರೆ ವರ್ಷಕ್ಕಿಷ್ಟು ಕಾಳು ಕಡಿ, ತೆಂಗಿನಕಾಯಿ ಇತ್ಯಾದಿ ಇದು ರಿವಾಜು. ಊರಿನ ಕೆಲಸಗಳೂ ಇದೇ ರೀತಿ. ಜಾತ್ರೆಯಾದರೆ ಭೈರಾಚಾರ್ಯರು ಬಂದು ತೇರಿಗೆ ಬೇಕಾಗುವ ಮರದ ಸಾಮಾನುಗಳನ್ನು ಒದಗಿಸಬೇಕು. ಪುಟ್ಟಚಾರ್ಯರು ಕರಡಿವಾದ್ಯ ಬಾರಿಸಬೇಕು. ಮಡಿವಾಳರ ಗಿರಿಯಪ್ಪ ಪತ್ತು ಹಿಡಿಯಬೇಕು, ಕರಿಯಪ್ಪ ನಡೆಮುಡಿ ಹಾಸಬೇಕು.

ಹೀಗೆ ಊರು ಬಿಟ್ಟಿ, ದೇವರ ಬಿಟ್ಟಿ ಮೊದಲಾಗಿ ಊರಿನ ಯಾವುದೇ ಕೋಮಿನ ಯಾವುದೇ ಕಾರ್ಯ ಸಹಕಾರ ಮನೋಭಾವದಿಂದಲೇ ನಡೆಯುತ್ತಿತ್ತು.

ಆದರೆ ಈಗ, ಕಾಲ ಬದಲು, ಬದುಕು ಸಂಕೀರ್ಣ, ಸಮಸ್ಯೆಗಳು ಬಹಳ, ಮನೋಧರ್ಮಗಳೂ ಭಿನ್ನ. ಆದರೂ ಬೇರೆ ಊರುಗಳಿಗೆ ಹೋಲಿಸಿದರೆ ನಮ್ಮೂರು ಸಾವಿರಪಾಲು ಉತ್ತಮ.

ಸಾಸಲು ಶಿವರುದ್ರಯ್ಯನವರು ಮತ್ತು ಸಿದ್ದಮ್ಮನವರ ಜೇಷ್ಠ ಪುತ್ರನಾದ ನಾನು ಹುಟ್ಟಿದ್ದು ಜನವರಿ ೨೮, ೧೯೩೧. ನಾಲ್ಕು ವರ್ಷಗಳ ಮೇಲೆ ಒಬ್ಬ ತಮ್ಮ, ಹೆಸರು ಶಾಂತಮೂರ್ತಿ. ನಾವಿಬ್ಬರೇ ಮಕ್ಕಳು. ಅನಂತರ ಶಾಂತಮೂರ್ತಿ ಹೆಸರಿಗೆ ತಕ್ಕ ಶಾಂತಸ್ವಭಾವದವನು. ನಾನಂತೂ ಮರುಳ, ದುರುಳನಲ್ಲ, ಆದರೆ ಅರೆ ಮರುಳ.

ನನ್ನ ಪ್ರಾಥಮಿಕ ಶಿಕ್ಷಣ ನಮ್ಮೂರಲ್ಲೇ ನಡೆಯಿತು. ರಾಮಚಂದ್ರಯ್ಯನವರು, ಗುಂಡೂರಾಯರು, ರಾಮಣ್ಣ ಮೇಷ್ಟು ಇವರೇ ಮೊದಲಾದ ಸದ್ಗುರುಗಳ ಶಿಷ್ಯ ನಾನು. ಆದರೆ ನನ್ನ ತಂದೆಯೇ ನನ್ನ ಮೊದಲ ಗುರು. ನಮ್ಮದು ಓಚಯ್ಯಗಳ ಮನೆತನ. ನಮ್ಮ ದೊಡ್ಡಪ್ಪ, ನನ್ನ ತಂದೆ, ನಮ್ಮ ಸೋದರಮಾವ (ಶೆಟ್ಟೀಕೆರೆಯಲ್ಲಿದ್ದರು) ಎಲ್ಲರೂ ಓಚಯ್ಯಗಳೇ. ನನ್ನ ತಂದೆಯ ಶಾಲೆ ಊರ ಮುಂದಿನ ಬಸವಣ್ಣನ ಗುಡಿಯ ಪಡಸಾಲೆಯಲ್ಲಿ, ಹಗಲೆಲ್ಲಾ ಹೊಲ ತೋಟಗಳಲ್ಲಿ ಕೆಲಸ ಮಾಡಿ ಬಂದ ರೈತರ ಮಕ್ಕಳು ಸಂಜೆ ಅಲ್ಲಿ ಸೇರುತ್ತಿದ್ದರು. ನನ್ನ ತಂದೆ ಒಂದು ಲಾಟೀನು ಹಚ್ಚಿ ಪ್ರಾರ್ಥನೆ ಮಾಡಿಸಿ, ಪಾಠ ಶುರು ಮಾಡುತ್ತಿದ್ದರು. ಅಕ್ಷರ ಕಲಿಯಬೇಕಾದರೆ ಎಲ್ಲರೂ ನೆಲದ ಮೇಲೆ ಹಾಸಿದ ಮರಳಿನ ಮೇಲೆ ಬರೆಯಬೇಕಾಗಿತ್ತು. ಬರೆಯುವ ಬೆರಳು ಗಾಯವಾಗದಿರಲಿ ಎಂದು ಅದಕ್ಕೆ ಗೆಜ್ಜುಗವನ್ನು ಕೊರೆದು ಒಂದು ಟೋಪಿ ಮಾಡಿ ತರ್ಜನಿ ಬೆರಳಿಗೆ ಹಾಕಿಕೊಳ್ಳುತ್ತಿದ್ದುಂಟು. ಅಕ್ಷರಾಭ್ಯಾಸದ ನಂತರ 'ಅಮರಕೋಶ' ಬಾಯಿಪಾಠ. ತದನಂತರ ಜೈಮಿನಿ ಭಾರತ, ರಾಜಶೇಖರ ವಿಳಾಸ, ಹರಿಭಕ್ತಿಸಾರ, ನಳಚರಿತ್ರೆ ಮೊದಲಾದ ಕಾವ್ಯಗಳ ಓದು, ಅರ್ಥ. ಪಾಠದ ಕಡೆಯಲ್ಲಿ ಮಗ್ಗಿ, ಕೋಷ್ಟಕ ಇತ್ಯಾದಿಗಳ ಬಾಯಿಪಾಠ.

ನನ್ನ ತಂದೆ ನನ್ನನ್ನು ತಮ್ಮ ಶಾಲೆಗೆ ನಿತ್ಯವೂ ಕೈ ಹಿಡಿದು ನಡೆಸಿಕೊಂಡು ಹೋಗುತ್ತಿದ್ದರು. ನಾನವರ ಪಕ್ಕದಲ್ಲಿ, ಅವರ ತೊಡೆಗೆ ಒರಗಿಕೊಂಡು ಕುಳಿತುಕೊಳ್ಳುತ್ತಿದ್ದೆ. ಇತರರಂತೆ ನಾನೂ ಮರಳಿನ ಮೇಲೆ ಅಕ್ಷರ ಬರೆಯಲು ಯತ್ನಿಸುತ್ತಿದ್ದೆ. ನನ್ನ ತಂದೆ ಕಾವ್ಯಗಳನ್ನು ಓದುವ, ವ್ಯಾಖ್ಯಾನಿಸುವ ವೈಖರಿ ನನ್ನನ್ನು ಬೆರಗುಗೊಳಿಸುತ್ತಿತ್ತು. ಆಗ ಕೇಳುತ್ತಿದ್ದೆ 'ಅಯ್ಯಾ (ನನ್ನ ತಂದೆಯನ್ನು 'ಅಯ್ಯ' ಎದು ಕರೆಯುತ್ತಿದ್ದೆವು.) ಈ ಕಾವ್ಯಗಳನ್ನು ದೇವರು ಬರೆಯುತ್ತಾನೋ ಅಥವಾ ಮನುಷ್ಯರೋ' ಎಂದು. ಅದಕ್ಕೆ ಅಯ್ಯಾ ಹೇಳಿದರು 'ದೇವರಲ್ಲ, ಬರೆಯೋರು ಮನುಷ್ಯರೆ' ಎಂದು. 'ಹಾಗಾದರೆ ನಾನು ಮನುಷ್ಯ ನಾನೂ ಬರೆಯಬಹುದೋ?' 'ಓಹೋ, ಖಂಡಿತ ಬರೆಯಬಹುದು. ಆದರೆ ದೇವರ ಕೃಪೆ ಇರಬೇಕು; ಅಷ್ಟೇ. ನನಗೆ ಖುಷಿ ಆಯಿತು. ಜೊತೆಯಲ್ಲೇ 'ಅಹುದು ದೇವರ ಕೃಪೆ ಹೇಗೆ' ಎನ್ನುವ ಚಿಂತೆಯೂ ಬಂತು. ಆಗ ಅದು ನನಗೆ ಅರ್ಥವಾಗಲಿಲ್ಲ. ಅದನ್ನು ಅಲ್ಲಿಗೇ ಬಿಟ್ಟು ಅಮರ ಕಲಿಯಲು ಪ್ರಾರಂಭಿಸಿದೆ.

ನನಗೆ ಪ್ರಾಥಮಿಕ ಶಾಲೆಯಲ್ಲಿ ಪ್ರವೇಶ ಸಿಕ್ಕಿದ್ದು, ನಾನು ಆರೂವರೆ ವರ್ಷದವನಾಗಿದ್ದಾಗ. ಎಲ್ಲಾ ಮಕ್ಕಳಿಗೂ ಅಷ್ಟು ವಯಸ್ಸಾಗಿರಬೇಕು ಎಂದು ಹೇಳುತ್ತಿತ್ತು

ಸರ್ಕಾರದ ಕಾನೂನು. ಆ ಮೊದಲ ತರಗತಿ ಎರಡು ವರ್ಷದ ಅವಧಿಯುಳ್ಳದ್ದಾಗಿತ್ತು. ಮೊದಲ ವರ್ಷ 'ಎ' ಕ್ಲಾಸ್, ಎರಡನೆ ವರ್ಷ 'ಬಿ' ಕ್ಲಾಸ್. ಅವೆರಡರಲ್ಲಿ ತೇರ್ಗಡೆಯಾದರೆ ಮುಂದಿನ ತರಗತಿಗೆ ಪ್ರವೇಶಾವಕಾಶವಿತ್ತು. ನಾನು ನನ್ನ ಪ್ರಾಥಮಿಕ ಶಾಲೆಯ ಪ್ರಥಮ ಪ್ರವೇಶದ ಹೊತ್ತಿಗೆ ತ್ರಿಕಾಂಡ ಅಮರಕೋಶದಲ್ಲಿ ಬಹು ಭಾಗವನ್ನು ಬಾಯಿಪಾಠ ಮಾಡಿದ್ದೆ. ನಮ್ಮಮ್ಮನ ಮಾತಿನಲ್ಲಿ ಹೇಳುವುದಾದರೆ–ಹುರುಳೀ ಕಾಳು ಹುರಿದ ಹಾಗೆ ಪಟಪಟ ಹೇಳುತ್ತಿದ್ದೆ! ನನಗೆ 'ಎ' ಕ್ಲಾಸ್, 'ಬಿ' ಕ್ಲಾಸ್‌ಗಳ ಲೆಕ್ಕ ಇರಲಿಲ್ಲ. ನಾಲ್ಕನೇ ತರಗತಿಗಿಟ್ಟಿದ್ದ ಕನಕದಾಸರ 'ಹರಿಭಕ್ತಸಾರ'ದ ಅನೇಕ ಪದ್ಯಗಳನ್ನು ಹಾಡುತ್ತಿದ್ದೆ. ಮೊದಲ ವರ್ಷದ ರಜಾ ದಿನದಲ್ಲಿ ನನಗೆ ಶಿವದೀಕ್ಷೆ ಆಯಿತು. ಕುಪ್ಪೂರು ಗದ್ದಿಗೆ ಮಠಾಧೀಶರಾದ ಷಟ್‌ಸ್ಥಲ ಬ್ರಹ್ಮ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ನನಗೆ, ನನ್ನಂತೆ ಅನೇಕ ಜಂಗಮ ವಟುಗಳಿಗೆ ಶಿವದೀಕ್ಷೆ ದಯಪಾಲಿಸಿದರು. ಶೆಟ್ಟೀಕೆರೆಯಲ್ಲಿ, ಅದೇ ಬೇಸಗೆಯಲ್ಲಿ ನನಗೊಂದು ಸುವರ್ಣಾವಕಾಶ ಸಿಕ್ಕಿತು. ಕೆಲವರು ಶ್ರೀಮಂತರು ಉತ್ತರ ಭಾರತ ಪ್ರವಾಸ ಕೈಕೊಂಡರು. ಅವರಲ್ಲಿ ಯವನಡು ಶಿವನಂಜಪ್ಪ ಶೆಟ್ಟರು ಒಬ್ಬರು. ಅವರು ಶುದ್ಧ ಪ್ರಸಾದಿಗಳು. ಅವರ ಮನೆಯಲ್ಲಿ ಪ್ರತಿದಿನವೂ ಜಂಗಮಾರಾಧನೆ ಆಗಲೇಬೇಕು. ಪಾದೋದಕ ಪ್ರಸಾದವಾದ ಮೇಲೆ ಅವರು ಊಟ ಮಾಡುತ್ತಿದ್ದುದು. ಅವರ ನಿತ್ಯ ಜಂಗಮ ಸೇವೆಗೆ ಬಾಲದೀಕ್ಷಾ ವಟುವಾದ ನನ್ನನ್ನು ನಮ್ಮ ದೊಡ್ಡಪ್ಪನವರು ಆಯ್ಕೆ ಮಾಡಿದರು. ನಮ್ಮ ದೊಡ್ಡಪ್ಪನವರು ಸಿದ್ಧಾಂತಿ ಗುರುಬಸವಶಾಸ್ತ್ರಿಗಳು. ಬೆಂಗಳೂರು ಚಿಕ್ಕಪೇಟೆಯಲ್ಲಿ, ದಿವಾನ್ ಖಾನಾ ಲೇನ್‌ನಲ್ಲಿ ಕರಿಸಿದ್ಧ ದೇವರ ಮಠದ ಒಡೆಯರಾಗಿದ್ದರು. ಜಾತಕ, ಕುಂಡಲಿ ಇತ್ಯಾದಿಗಳನ್ನು ಬರೆಯುವುದರಲ್ಲಿ ತುಂಬಾ ಹೆಸರಾಗಿದ್ದರು. ಅವರ ಸಲಹೆಯಂತೆ ನನಗೆ ಭಾರತ ದರ್ಶನದ ಅವಕಾಶ ಸಿಕ್ಕಿತು. ಅದರಲ್ಲಿ ನನಗೆ ಸಿಕ್ಕ ಅತ್ಯಂತ ಹೆಚ್ಚಿನ ಲಾಭವೆಂದರೆ ಮಹಾತ್ಮಾ ಗಾಂಧೀಜಿಯವರ ದರ್ಶನ. ಸಬರಮತಿ ಆಶ್ರಮದಲ್ಲಿ ಅವರ ದರ್ಶನ ಪಡೆದರು ಎಲ್ಲರೂ. ನಮ್ಮ ದೊಡ್ಡಪ್ಪನವರು ಗಾಂಧೀಜಿಯ ಮುಂದೆ ನನ್ನನ್ನು ನಿಲ್ಲಿಸಿ ನಮಸ್ಕಾರ ಮಾಡು ಅಂದರು. ನಾನು ದೂರದಿಂದಲೇ ಅಡ್ಡಬಿದ್ದೆ. ಗಾಂಧಿ ಯಾರು? ಅವರ ಮಹಾತ್ಮೆ ಎಂಥದು. ನನಗೊಂದೂ ಗೊತ್ತಿರಲಿಲ್ಲ. ನೋಡಿದಷ್ಟು ಮಾತ್ರ ನನ್ನ ನೆನಪಿನಲ್ಲಿ ಉಳಿದಿದೆ. ಅದು ನನ್ನ ಜೀವಿತದ ಅತ್ಯಂತ ಪುಣ್ಯದಿನ ಎಂದು ಆನಂತರ ವರ್ಷಗಳಲ್ಲಿ ನನಗೆ ಭಾಸವಾಯಿತು.

ನನ್ನಲ್ಲಿ ಸ್ವಾಭಿಮಾನವನ್ನು ತುಂಬಿದವರು ನಮ್ಮಮ್ಮ; ಕಲಾಭಿರುಚಿ ಮೂಡಿಸಿದವರು ನಮ್ಮಯ್ಯ. ನಾನು ಏಳೆಂಟು ವರ್ಷದ ಹುಡುಗ, ನಮ್ಮೂರಿನಲ್ಲಿ ಪ್ರಹ್ಲಾದ ಚರಿತ್ರೆ ನಾಟಕ, ನಾನು ಪ್ರಹ್ಲಾದ. ನಾನೊಬ್ಬನೇ ಚಿಕ್ಕವನು. ಮಿಕ್ಕವರೆಲ್ಲಾ ತುಂಬಾ ವಯಸ್ಸಾದವರು. ಹಿರಣ್ಯಕಶಿಪು ಪಾತ್ರಧಾರಿ ಕಪಿನಯ್ಯನನ್ನು ಕಂಡರೆ ನನಗೆ ಭಯವಾಗುತ್ತಿತ್ತು. ಖಯಾದು ಪಾತ್ರಧಾರಿ ಬೊಮ್ಮಣ್ಣ, ನನ್ನನ್ನು ತುಂಬಾ ಮುದ್ದು ಮಾಡುತ್ತಿದ್ದರು. ಪ್ರಹ್ಲಾದ ನಾಟಕದ ಒಂದು ದೃಶ್ಯದಲ್ಲಿ ಹಿರಣ್ಯಕಶಿಪು ಹೇಳಿಕೊಟ್ಟದ್ದನ್ನು ಪ್ರಹ್ಲಾದ ಹೇಳದಿದ್ದಾಗ, ಮಗನನ್ನು

ತಿರಸ್ಕರಿಸಿ ದೂರಬಿಸಾಡುತ್ತಾನೆ ಕಶಿಪು. ಕಪಿನಯ್ಯ (ಹಿರಣ್ಯ ಕಶಿಪು) ನನ್ನನ್ನು ಎತ್ತಿಕೊಂಡು ಮುದ್ದಾಡಿ 'ಓಂ ನಮಃ ಶಿವಾಯ' ಅನ್ನು ಅಂದರು. ನಾನು (ಪ್ರಹ್ಲಾದ) 'ಓಂ ನಮೋ ನಾರಾಯಣಾಯ' ಅಂದೆ. ಏಕ್‌ದಂ ಎಸೆದುಬಿಟ್ಟರು. ನಾನು ರಂಗಭೂಮಿಯ ಒಂದು ಮೂಲೆಗೆ ಹೋಗಿ ಬಿದ್ದೆ. ಬಿದ್ದವನು ಎದ್ದು ಓಡಿಬಿಟ್ಟೆ. ಸ್ಟೇಜ್ ಹಾಕಿದ್ದು ನಮ್ಮ ಮನೆಯ ಮುಂದೆಯೇ. ಓಡಿಹೋಗಿ ನಮ್ಮಮ್ಮನ ತೊಡೆಯ ಮೇಲೆ ಮಲಗಿಕೊಂಡ ನಾನು ಸ್ಟೇಜಿಗೆ ಹೋಗೋಲ್ಲ ಅಂತಾ ಅಳ್ತಾ ಮಲಗಿದೆ. ಪೆಟ್ಟಿ ಮಾಸ್ತರು, ನಿರ್ದೇಶಕರು ಎಲ್ಲ ಆಗಿದ್ದ ಆಲೂರು ಸಂಗಯ್ಯನವರು ಮತ್ತಿತರರು ಬಂದು ನನ್ನನ್ನು ಮುದ್ದಿಸಿದರು. ನಮ್ಮಯ್ಯ ಶುಂಠಿ ಪೆಪ್ಪರ್‌ಮೆಂಟ್ ಕೊಟ್ಟು ರಮಿಸಿ ಎತ್ತಿಕೊಂಡು ಹೋದರು. ಮುಖದ ಬಣ್ಣ ಅಳಿಸಿತ್ತು. ಮತ್ತೆ ಮೇಕಪ್ ಆಯಿತು. ಕಪಿನಯ್ಯ 'ಹೆದರಬೇಡ ನಾನು ನಿನ್ನನ್ನು ಏನೂ ಮಾಡುವುದಿಲ್ಲ ಮರೀ' ಎಂದು ಪುಸಲಾಯಿಸಿದರು. ಅಂತೂ ನಾಟಕ ಆಯಿತು. ಅದು ಬೆಳಕು ಹರಿಯುವತನಕ, ಸೂರ್ಯೋದಯ ಆದಾಗ ಕಂಬವನ್ನು ಭೇದಿಸಿಬಂದ ನರಸಿಂಹನ ದರ್ಶನ. ನಿದ್ದೆ ಬಂದಂತಾದಾಗಲೆಲ್ಲಾ ನಮ್ಮಯ್ಯ ಸ್ಟೇಜಿನ ಹೊರಗಡೆ ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದುದು, ನನದೆ ಶುಂಠಿ ಪೆಪ್ಪರ್‌ಮೆಂಟ್ ಕೊಡುತ್ತಿದ್ದುದು ನನಗೀಗಲೂ ನೆನಪಿದೆ.

ನಮ್ಮಮ್ಮ ಕಲಿಸಿದ ಸ್ವಾಭಿಮಾನಕ್ಕೆ ಒಂದು ನಿದರ್ಶನ: ನಮ್ಮ ದೊಡ್ಡಪ್ಪ ನಮ್ಮಯ್ಯನಿಗೆ ಪಾಲು ಕೊಟ್ಟು ಕಳುಹಿಸಿದರು. ನಾನು ನಮ್ಮಜ್ಜಿ (ರುದ್ರಮ್ಮಜ್ಜಿ) ಮೊರ, ಕುಕ್ಕೆ, ಕುಡಿಕೆ ಮಡಿಕೆ ಹಿಡಿದುಕೊಂಡು ಒಂದು ಸಣ್ಣ ಮನೆಗೆ ವಲಸೆ ಹೋದೆವು. ನಮ್ಮಮ್ಮ ನನ್ನ ತಮ್ಮನನ್ನು ಕೊಂಕುಳಲ್ಲಿ ಎತ್ತಿಕೊಂಡು ಕೈಯಲ್ಲಿ ರಾಗಿ ಚೀಲ ಹಿಡಿದುಕೊಂಡು ಬಂದರು.

ಹೊಸದಾಗಿ ಒಲೆ ಹೊತ್ತಿಸಲು ನಮ್ಮಮ್ಮನ ಚಿಕ್ಕಪ್ಪನ ಮಗ ನಂಜುಂಡಯ್ಯ ಎಂಬುವರು ಶನಿವಾರ, ಭಾನುವಾರ ಬಂದು ಒಲೆ ಹಾಕುವುದು, ಗೋಡೆ ಕಟ್ಟುವುದು, ನೆಲ ಸರಿಮಾಡುವುದು ಇತ್ಯಾದಿ ಕೆಲಸಗಳಲ್ಲಿ ನೆರವಾಗುತ್ತಿದ್ದರಂತೆ. ನಾನು ನಂಜಮಾಮನನ್ನು ಬಹಳ ಹಚ್ಚಿಕೊಳ್ಳುತ್ತಿದ್ದೆ. ಅವರು ತಿಪಟೂರು ಹೈಸ್ಕೂಲ್‌ನಲ್ಲಿ ಓದುತ್ತಿದ್ದರು. ವಾರಕ್ಕೆ ಎರಡು ದಿನ ಊರಿಗೆ ಬರುತ್ತಿದ್ದರು. ಅವರ ಬರವನ್ನೇ ಕಾಯುತ್ತಿದ್ದೆ. ಏಕೆಂದರೆ ಅವರು ಕಿತ್ತಲೆತೊಳೆ ಆಕಾರದ ಪೆಪ್ಪರ್‌ಮೆಂಟ್ ತರುತ್ತಿದ್ದರು ನನಗಾಗಿ. ಆ ವರ್ಷ ನಮ್ಮಯ್ಯ ತಿಪಟೂರು ಅರಸೀಕೆರೆ ಬಳಿಯಿರುವ ಗುಂಡಕಾನಹಳ್ಳಿಯಲ್ಲೋ, ಮೈಲನಹಳ್ಳಿಯಲ್ಲೊ ಕೂಲಿಮಠ ನಡೆಸುತ್ತಿದ್ದರು. ಅವರಿಗೆ ವರ್ಷಕ್ಕೆ ೧೦–೧೫ ರೂಪಾಯಿ ಸಂಬಳ. ಆದರೆ ಭತ್ತ, ರಾಗಿ ಇತ್ಯಾದಿಗಳು ಬೇರೆ ಆಯಾ ಬರುತ್ತಿತ್ತು. ಇಷ್ಟಾದರೂ ಸಂಸಾರವನ್ನು ಸಾಗಿಸುವುದು ಕಷ್ಟವಾಗುತ್ತಿತ್ತು ನಮ್ಮಮ್ಮನಿಗೆ. ಅದನ್ನು ತುಂಬಲು ಆಕೆ ಹೊಲದ ಕೆಲಸಕ್ಕೆ ಕೂಲಿ ಹೋಗುತ್ತಿದ್ದರಂತೆ. ಆ ದಿನಗಳಲ್ಲಿ ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೬ ಗಂಟೆಯವರೆಗೆ ಹೊಲದಲ್ಲಿ ಕೆಲಸ ಮಾಡಿದರೆ ಹೆಣ್ಣಾಳಿಗೆ ಒಂದೂವರೆ ಆಣೆ (ಸುಮಾರು

೧೦ ಪೈಸೆ), ಗಂಡಾಳಿಗೆ ನಾಲ್ಕಾಣೆ (ಸುಮಾರು ೨೫ ಪೈಸೆ) ದಿನಗೂಲಿ ಎಂಬುದು. ನಮ್ಮಮ್ಮ ಹಾಗೆ ದುಡಿದು ಎಂಬತ್ತು ಮನೆಗಳಿರೊ ನಮ್ಮೂರಿನಲ್ಲಿ ನಮ್ಮದೂ ಒಂದು ಒಕ್ಕಲು ಅಂತಾ ಅನ್ನಿಸಿದಳು.

ಆ ವರ್ಷದ ಯುಗಾದಿ ಹಬ್ಬಕ್ಕೆ ನಮ್ಮಯ್ಯ ಊರಿಗೆ ಬರಲಿಲ್ಲ. ನಮ್ಮಮ್ಮ ಹಬ್ಬ ಮಾಡುವುದಕ್ಕೆ ಮನೆಯಲ್ಲಿ ಏನೇನೂ ಇರಲಿಲ್ಲ. ನಮ್ಮಮ್ಮ, ನಮ್ಮಜ್ಜಿ ಮತ್ತು ಚಿಕ್ಕಮಕ್ಕಳಾದ ನಾನು, ನನ್ನ ತಮ್ಮ ಆ ದಿನ ರಾಗಿ ಅಂಬಲಿಗೆ ತೆಂಗಿನಕಾಯಿ ಬೆಲ್ಲದ ಚಟ್ನಿ ಬೆರಸಿ ತಿಂದೆವು. ಅಮ್ಮ ರಾಗಿ ರೊಟ್ಟಿ ಸುಟ್ಟು ಕೊಟ್ಟಿದ್ದರು. ಅದನ್ನು ತಿಂದು ತೃಪ್ತರಾದೆವು. ನನಗದನ್ನು ಕೊಡುತ್ತಾ ನಮ್ಮಮ್ಮ 'ಪಾಪು, ಯಾರೇ ಕರೆಯಲಿ ಆ ದಿನ ಅವರ ಮನೆಗೆ ಊಟಕ್ಕೆ ಹೋಗಬೇಡ. ನಮ್ಮ ಮನೆಯಲ್ಲಿ ಭಾರಿ ಊಟ ಮಾಡಿದೆ ಅಂತಾ ಹೇಳಬೇಕು' ಅಂತಾ ಹೇಳಿಕೊಟ್ಟರು. ನಮ್ಮ ಬಡತನ ತಿಳಿದಿದ್ದ ದಾಯಾದಿ ಬಂದು ನನ್ನನ್ನು, 'ಬಾ ಹೋಳಿಗೆ ಉಂಡು ಬರುವೆಯಂತೆ' ಎಂದು ಕರೆದಾಗ, 'ಇಲ್ಲ ಚಿಕ್ಕಪ್ಪಾ, ನಾನು ಹೊಟ್ಟೆ ಬಿರಿಯುವಂತೆ ಹೋಳಿಗೆ ತಿಂದಿದ್ದೇನೆ' ಅಂತ ಹೇಳಿ ತಪ್ಪಿಸಿಕೊಂಡೆ. ನನಗಾಗ ನಾಲ್ಕೈದು ವರ್ಷ ವಯಸ್ಸು.

'ಬಡತನಕ್ಕೆ ಉಂಬುವ ಚಿಂತೆ' ಎಂಬ ಅಂಬಿಗರ ಚೌಡಯ್ಯನ ಮಾತು ಸತ್ಯ ಎಂಬುದಕ್ಕೆ ಒಂದು ನಿದರ್ಶನ: ಸ್ಕೂಲಿನಿಂದ ಬಂದ ನನಗೆ ಹೊಟ್ಟೆ ಹಸಿದಿತ್ತು. ಕೊಟ್ಟೂರು ಶೆಟ್ಟರ ಹೊಸ ಮನೆಯ ಗೃಹಪ್ರವೇಶ ಕಾರ್ಯಕ್ರಮ. ಅಲ್ಲಿ ಊಟ ಹಾಕ್ತಾರೆ ಅಂತಾ ತಿಳೀತು, ನಾನೂ ಊಟ ಮಾಡುವ ಆಸೆಯಿಂದ ಹೋದೆ. ದೊಡ್ಡ ಶ್ರೀಮಂತರು ಅನ್ನದಾನ ಬಹಳ ಮಾಡುವರು. ಆದರೆ ಊಟಕ್ಕೆ ಬಡಿಸುವವರ ಬಡಾಯಿ ತುಂಬಾ. ನಾವು ಸುಮಾರು ೨೫–೩೦ ಹುಡುಗರು ಗಿಜಿಬಿಜಿ ಮಾತನಾಡುತ್ತ ಮುತ್ತುಗದ ಎಲೆಗೆ ನೀರು ಹಾಕಿ ತಟ್ಟುತ್ತಾ ಕುಳಿತೆವು ಸಾಲಾಗಿ. ಒಬ್ಬ ವ್ಯಕ್ತಿ ಬಂದವನೆ, 'ಲ್ರೋ, ಪೀಡೆಗಳ ಗಲಾಟೆ ಮಾಡ್ತೀರಾ' ಅಂತಾ ಹೇಳಿ ನನ್ನ ಕೆನ್ನೆಗೆ ಹೊಡೆದ. ಹಸಿದ ಹೊಟ್ಟೆ ಅನ್ನಕ್ಕೆ ಬದಲು ಒದೆ ತಿಂದು ತೃಪ್ತವಾಯಿತು! ಕಣ್ಣಲ್ಲಿ ನೀರು ಬಂತು. ಎಲೆ ಬಿಟ್ಟು ಎದ್ದು ನೇರವಾಗಿ ಮನೆಗೆ ಹೋಗಿ ನಮ್ಮಮ್ಮನಿಗೆ ನಡೆದದ್ದು ಹೇಳಿದೆ. ಅಮ್ಮನಿಗೆ ಅಳು ತಡೆಯಲಾಗಲಿಲ್ಲ. ನನ್ನಪ್ಪಿ ಸಂತೈಸಿ ಕೂಡಲೇ ರಾಗಿ ರೊಟ್ಟಿ ಮಾಡಿಕೊಟ್ಟರು. ತಿನ್ನಿಸುತ್ತಾ, 'ಪಾಪು ಎಂದೂ ಯಾರ ಮನೆಗೂ ಕರೆಯದೇ ಹೋಗಬೇಡ. ಹೋಗುವ ಆಸೆ ಇದ್ದರೂ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಳ್ಳಬೇಡ' ಎಂದರು. ನಾನು ಅಳುತ್ತಲೆ, 'ನಾನೇನೂ ಗಲಾಟೆ ಮಾಡಲಿಲ್ಲ ಅಮ್ಮ. ಆದರೆ ಗಲಾಟೆ ಮಾಡಿರುವವರನ್ನು ಬಿಟ್ಟು ನೇರವಾಗಿ ಬಂದು ನನ್ನನ್ನೇ ಹೊಡೆದುಬಿಟ್ಟ ಆತ' ಅಂದೆ. ಅದೇ ನಾ ಹೇಳಿದ್ದು. ಅವನಿಗೆ ನೀನು ಹೊಟ್ಟೆಗಿಲ್ಲದವನು ತಿನ್ನಲಿಕ್ಕಾಗಿಯೇ ಬಂದಿರೋನು ಅನ್ನಿಸಿತ್ತು ಅದಕ್ಕೆ ಹೊಡೆದ. ಹೊಟ್ಟೆ ಕೆಟ್ಟದ್ದು, ಮಾನ ದೊಡ್ಡದು, ಅದನ್ನು ಉಳಿಸಿಕೊಳ್ಳಬೇಕಾದರೆ 'ಬಡವ ನೀನು ಮಡಗಿದ

ಹಾಗಿರು' ಅನ್ನುತ್ತೆ ಗಾದೆ. ಹೋಗ್ಲಿ ಬಿಡು. ದೇವ್ರು ನಮಗೇನು ಕಡಿಮೆ ಮಾಡಿದ್ದಾನೆ. ಬಾ, ಹಿಟ್ಟೋ, ರೊಟ್ಟಿನೊ ತಿಂದು ಹಾಯಾಗಿರೋಣ. ಸರ್ವಜ್ಞ ಅನ್ನೋ ಕವಿ ಹೇಳಿದ್ದಾನೆ: 'ಬಂಗಪಟ್ಟುಂಬ ಬಿಸಿ ಅನ್ನಕ್ಕಿಂತಲೂ ತಂಗುಳನ್ನವೇ ಲೇಸು' ಎಂದು. ನಮ್ಮಮ್ಮ ಕನ್ನಡ ಓದಿದವಳು. ಹಾಡು ಹಾಡುತ್ತಿದ್ದಳು ಕೂಡ. ಜಾನಪದ ಗೀತೆಗಳನ್ನು ಕಟ್ಟುತ್ತಿದ್ದಳು. ಅವಳ ಮಾತು ನನ್ನಲ್ಲಿ ಸಮಾಧಾನ ತಂದಿತು. ನನ್ನಲ್ಲಿ ಸ್ವಾಭಿಮಾನವನ್ನು ಹುಟ್ಟು ಹಾಕಿತು.

ಪುಟ್ಟಣ್ಣ ಶೆಟ್ಟರು ನಮ್ಮೂರಿನ ಆಗರ್ಭ ಶ್ರೀಮಂತರು. ಅವರನ್ನು ಹೊಸಮನೆಯವರು ಎಂದು ಕರೆಯುತ್ತಿದ್ದರು. ಹಳೇ ಮನೆಯಾಗಿದ್ದರೂ ಈಗಲೂ ಅದನ್ನು ಹೊಸಮನೆಯವರ ಮನೆ ಎಂದೇ ಕರೆಯುತ್ತಾರೆ. ಅವರ ಮನೆಯ ಗ್ರಾಮಫೋನ್ ನಮ್ಮೂರ ಜನರ ಮನರಂಜನೆಯ ವಸ್ತು. ತಿಂಗಳಿಗೊ, ಎರಡು ತಿಂಗಳಿಗೊಮ್ಮೆ ಅವರು ರಾತ್ರಿ ಊಟ ಆದಮೇಲೆ ತಮ್ಮ ಮನೆಯ ಪಡಸಾಲೆಯಲ್ಲಿ ದೊಡ್ಡ ಜಮಖಾನ ಹಾಸಿಸಿ, ಒಂದು ಗ್ಲಾಸ್‌ಲೈಟ್ ಹಚ್ಚಿಸಿ, ಗ್ರಾಮಫೋನ್ ಹಾಕೋರು. ಆ ದಿನ ಊರ ಜನ ಸುಮಾರು ಅರ್ಧ ಭಾಗ ಅವರ ಮನೆ ಮುಂದೆ ನೆರೆಯುತ್ತಿತ್ತು. ನಮ್ಮೂರವರು ಅಷ್ಟೇ ಅಲ್ಲ ನಮ್ಮೂರ ಸುತ್ತಮುತ್ತಲ ಹಳ್ಳಿ ಜನರು ಗ್ರಾಮಫೋನ್ ಕಾರ್ಯಕ್ರಮ ಕೇಳಲು ಬರುತ್ತಿದ್ದರು. ಸುಮಾರು ಅರ್ಧ ರಾತ್ರಿವರೆಗೆ ಆ ಮನೋರಂಜನಾ ಕಾರ್ಯಕ್ರಮ ನಡೆಯುತ್ತಿತ್ತು. ಹಿಸ್ ಮಾಸ್ಟರ್ಸ್ ವಾಯ್ಸ್‌ನ ಗ್ರಾಮಫೋನ್ ರೆಕಾರ್ಡ್‌ಗಳು ಅನೇಕವು. ಬಿಡಾರಂ ಕೃಷ್ಣಪ್ಪನವರ ಹಾಡುಗಾರಿಕೆವು ಕೆಲವು. ರೆಕಾರ್ಡ್‌ನ ಒಂದು ಹಾಡು ಮುಗಿದ ಕೂಡಲೆ 'ಬಿ. ಕೃಷ್ಣಪ್ಪ ಮೈಸೂರು' ಎಂದು ಹಾಡುಗಾರರೇ ತಮ್ಮ ಹೆಸರು ಹೇಳುತ್ತಿದ್ದುದು ಉಂಟು. ಅದನ್ನು ಕಂಡು ನಮಗೆಲ್ಲಾ ಆಶ್ಚರ್ಯ. ಸಣ್ಣ ಸೂಜಿಯ ಒಂದು ಪುಟ್ಟ ಕುಡಿಕೆಯನ್ನು ಗ್ರಾಮಫೋನ್ ತಟ್ಟೆಯ ಮೇಲೆ ಇಟ್ಟರೆ ಅದು ಹಾಡುತ್ತೆ ಹೇಗೆ? ಎಂಬುದು ನಮ್ಮ ಹಳ್ಳಿಯವರಿಗೆ ಸಮಸ್ಯೆ. ಒಬ್ಬ ಹೇಳ್ತಿದ್ದ ಬಿ. ಕೃಷ್ಣಪ್ಪ ಅಂತ ಹೇಳಲಿಲ್ವೆ ಅವನೇ ಅದರೊಳಗಿದಾನೆ. ಇವರು ಹಾಕಿದ ಮುಳ್ಳಿನಂಥ ಸೂಜಿ ಅವನ ತಲೆ ಕುಕ್ಕುತ್ತೆ. ಆಗ ಅವನು ಹಾಡ್ತಾನೆ ಅನ್ನುತ್ತಿದ್ದ. ಅಂತೂ ಅದೊಂದು ಯಾರಿಗೂ ಅರ್ಥವಾಗದ ಆಶ್ಚರ್ಯಗಳಲ್ಲಿ ಒಂದಾಗಿತ್ತು. ಗ್ರಾಮಫೋನ್ ಬಿಟ್ಟರೆ ಮೀಸೆ ರಂಗಪ್ಪ, ದಾಸನಾಯಕ, ಶಂಕರನಾಯಕ ಮೊದಲಾದವರು ಒಂದು ವರ್ಷಕ್ಕೊ, ಎರಡು ವರ್ಷಕ್ಕೊ ಆಡುತ್ತಿದ್ದ 'ಮ್ಯಾಳ' ಅಥವಾ ಬಯಲಾಟ ಊರ್ನಲ್ಲಿ ಹಬ್ಬದ ವಾತಾವರಣ ತರುತ್ತಿತ್ತು. ನಾನು ಕೆಲವು ಬಯಲು ನಾಟಕಗಳಲ್ಲಿ ಗಣೇಶನ ಪ್ರವೇಶ ಪೂಜೆಯ ಮೊದಲ ದೃಶ್ಯದಲ್ಲಿ ಪೂಜಾರಿ ಪಾತ್ರ ಮಾಡುತ್ತಿದ್ದೆ. ತಾಲೀಮು ಹನುಮಂತರಾಯನ ನುಡಿಯಲ್ಲಿ ನಡೆಯುತ್ತಿತ್ತು. ಅಲ್ಲಿಗೆ ಬರುತ್ತಿದ್ದ ನನ್ನ ಸಹಪಾಠಿ ಹೊಲೆಯರ ನರಸಿಂಹ ಬೀಡಿ ಸೇದುವುದನ್ನು ಕಲಿತಿದ್ದ. ನಮ್ಮಮ್ಮನ ಸಲಹೆಯಂತೆ ನಮ್ಮಯ್ಯ ಒಂದು ಚಿಕ್ಕ ಚಿಲ್ಲರೆ ಅಂಗಡಿ ಆರಂಭಿಸಿದ್ದರು. ನರಸಿಂಹ ಬೀಡಿ ತಗೊಂಡು ಬಾ ಅನ್ನುತ್ತಿದ್ದ. ನಾನು ಕೊಟ್ಟದ್ದನ್ನು ಸೇದಿ, ನನಗೂ ಒಂದು ದಿನ ಅದರ

ರುಚಿ ತೋರಿಸಿದ, 'ಯಪ್ಪಾ ಇಂಗ್ ಹಚ್ಕಾ, ಒಳೀಕೆ ಒಗೆ ಎಳ್ಕಾ' ಅಂತ ನನ್ನನ್ನು ನೋಡು ಅಂದ. ಅವನು ಹೇಳಿದ ಹಾಗೆ ಮಾಡಿ ಎಳೆದೆ. ಕೆಮ್ಮು ಬಂತು; ಕಣ್ಣಲ್ಲಿ ನೀರು ಬಂತು. ತಡೆಯಲಾರಗೆ ಮನೆಗೆ ಓಡಿದೆ. ನಮ್ಮಮ್ಮ ನನ್ನ ಬಾಯಿನ ಬೀಡಿ ವಾಸನೆ ಹಿಡಿದು ಬಡಿದರು. ಅಲ್ಲಿಗೆ ನರಸಿಂಹನ ಸಹವಾಸ ಬಿಟ್ಟೆ.

ಹುಟ್ಟೂರು ಸಾಸಲಿನ ಪ್ರೈಮರಿ ವಿದ್ಯಾಭ್ಯಾಸ ಮುಗಿದ ಮೇಲೆ ನಮ್ಮೂರಲ್ಲಿ ಮಿಡಲ್‌ಸ್ಕೂಲ್ ಇಲ್ಲ. ಅದಿದ್ದದ್ದು ಶೆಟ್ಟೀಕೆರೆಯಲ್ಲಿ. ನಮ್ಮಯ್ಯ ಶೆಟ್ಟೀಕೆರೆ ಮಾಧ್ಯಮಿಕ ಶಾಲೆಗೆ ಸೇರಿಸಿ ಬಂದರು. ನಿತ್ಯವೂ ನಮ್ಮೂರಿಂದ ಆ ಊರಿಗೆ ನಡೆದು ಹೋಗಿ ಬರಬೇಕಾಗಿತ್ತು. ನಮ್ಮೂರಿನವರೇ ಸುಮಾರು ಇಪ್ಪತ್ತೈದು ಹುಡುಗರು ಶೆಟ್ಟೀಕೆರೆ ಮಿಡಲ್‌ಸ್ಕೂಲ್‌ಗೆ ಹೋಗುತ್ತಿದ್ದೆವು. ರಸ್ತೆಯಲ್ಲಿ ನಮ್ಮ ಹುಡುಗಾಟ ಚೆನ್ನಾಗಿರುತ್ತಿತ್ತು. ಒಂದು ದಿನ ಬೆಂಗಳೂರಿನಿಂದ ನೆಟ್ಟಕಲ್ಲಪ್ಪನವರು ಹುಲಿ ಬೇಟೆಗೆ ನಮ್ಮೂರ ಕಾಡಿಗೆ ಬಂದರು. ಬೇಟೆ ಸಿಕ್ಕಿತೊ ಇಲ್ಲವೊ ಗೊತ್ತಿಲ್ಲ. ಆದರೆ ಶೆಟ್ಟೀಕೆರೆಗೆ ಅವರ ಜೀಪು ಹೋಗುವಾಗ ಹೊಲದ ಬದುವಿನಲ್ಲಿ ಸಿಕ್ಕಿಹಾಕಿಕೊಂಡಿತು. (ರಸ್ತೆ ಇರಲಿಲ್ಲವಾದ್ದರಿಂದ ಹಾಗೆ ಹೊಲಗಳ ಮೇಲೆ ನುಗ್ಗಿಸಿಕೊಂಡು ಬಂದರು.) ನಾವು ೨೦–೨೫ ಹುಡುಗರು, ವ್ಯಾನನ್ನು ತಳ್ಳಿಕೊಟ್ಟೆವು. ಆಗ ಹರ್ಷಿತರಾದ ವ್ಯಾನ್ ಯಜಮಾನರು ನಮ್ಮೆಲ್ಲರನ್ನೂ ತಮ್ಮ ವ್ಯಾನ್‌ನಲ್ಲಿ ಕೂರಿಸಿಕೊಂಡು ಹೋಗಿ, ನಮ್ಮ ಶಾಲೆ ಮುಂದೆ ಇಳಿಸಿದರು. ಅದೇ ನಾನು ಮೋಟಾರ್ ವಾಹನವನ್ನು ಮೊದಲು ಕೈಯಿಂದ ಮುಟ್ಟಿದ್ದು ಮತ್ತು ಹತ್ತಿ ಕುಳಿತಿದ್ದು. ಆ ದಿನ ನನಗಾದದ್ದು ಪುಷ್ಪಕವಿಮಾನದಲ್ಲಿ ಹೋದಂತಹ ಅನುಭವ!

ನಮ್ಮಯ್ಯ ಓಚಯ್ಯನ ಕೆಲಸ ಬಿಟ್ಟು, ವ್ಯಾಪಾರಿಯಾದ ಮೇಲೆ ನಮ್ಮ ಬಡತನ ಬಯಲಾಗಿತ್ತು. 'ಹಿಟ್ಟು ಬಟ್ಟೆಗೆ ನೇರೂಪಾಗಿದ್ದೆವು!' ಆ ದಿನಗಳ ಎರಡು ಘಟನೆಗಳು ನನಗೆ ನೆನಪಿವೆ:

ನಾನಾಗ ಶೆಟ್ಟೀಕೆರೆ ಮಿಡಲ್‌ಸ್ಕೂಲಿನ ಒಂದನೇ ತರಗತಿ ವಿದ್ಯಾರ್ಥಿ. ನಮ್ಮ ತರಗತಿ ಉಪಾಧ್ಯಾಯರು ಶ್ರೀ ಬಿಳಿಗೆರೆ ಸಿದ್ಧಲಿಂಗಯ್ಯನವರು ತರಗತಿಗೆ ಬಂದು ಒಂದು ಸರಕಾರಿ ಆದೇಶ ಓದಿ, ಯಾರಾದರೂ ಬಡ ವಿದ್ಯಾರ್ಥಿಗಳಿದ್ದರೆ ಕೈಯೆತ್ತಿ. ನಿಮಗೆ ಅರ್ಜಿ ಫಾರಂ ಕೊಡುತ್ತೇನೆ. ಅದನ್ನು ಭರ್ತಿ ಮಾಡಿಕೊಡಿ. ಫೀಜು ವಜಾ ಆಗುತ್ತೆ. ಕೆಲವರಿಗೆ ಸ್ಕಾಲರ್‌ಶಿಪ್ ಕೂಡ ಬರುತ್ತೆ ಎಂದು. ನನ್ನ ಸಹಾಧ್ಯಾಯಿಗಳು ಅನೇಕರು ಪಡೆದರು. ಅವರಲ್ಲಿ ಕೆಲವರು ಶ್ರೀಮಂತರ ಮಕ್ಕಳೂ ಇದ್ದರು. ನಾನು ಕೈಯೆತ್ತಲಿಲ್ಲ. ಅರ್ಜಿ ಫಾರಂ ಪಡೆಯಲಿಲ್ಲ. ಏಕೆಂದರೆ ನಾವು ಬಡವರು ಎಂಬ ಭಾವನೆ ನನಗಿರಲಿಲ್ಲ. ನಮ್ಮೂರಿಗೂ ಶೆಟ್ಟೀಕೆರೆ ಶಾಲೆಗೂ ಸುಮಾರು ೨ ಕಿ.ಮೀ. ದೂರ. ನಾನು ಸಂಜೆ ಮನೆಗೆ ಬರುವಷ್ಟರಲ್ಲೇ ನನಗಿಂತಲೂ ಮುಂಚೆ ಬಂದ ನಮ್ಮ ದೊಡ್ಡಪ್ಪನ ಮಗ ಪಂಚಣ್ಣ ನಮ್ಮಮ್ಮನ ಮುಂದೆ ನಿಂತು ಫ್ರೀಶಿಪ್, ಸ್ಕಾಲರ್‌ಶಿಪ್ ಬಗ್ಗೆ (ಅದರರ್ಥವೇ ನಮಗಾಗ

ತಿಳಿದಿರಲಿಲ್ಲ) ವರ್ಣಿಸಿ ಹೇಳಿ, ನಾನು ಅರ್ಜಿ ಫಾರಂ ಪಡೆಯಲಿಲ್ಲ ಎಂದು ದೂರು ಹೇಳಿದ್ದ. ಮನೆಗೆ ಬಂದ ಕೂಡಲೆ ನಿತ್ಯವೂ ರೊಟ್ಟಿ ಇಲ್ಲವೆ ರಾಗಿಮುದ್ದೆಗೆ ಉಪ್ಪಿನಕಾಯಿ ಮಿದ್ದು ಉಂಡೆ ಕಟ್ಟಿ ಕೊಡುತ್ತಿದ್ದ ನಮ್ಮಮ್ಮ ಆ ದಿನ ಏನನ್ನೂ ಕೊಡಲಿಲ್ಲ. ಕೇಳಿದೆ. ಗುರ್ ಅಂದಳು. 'ಯಾಕಮ್ಮಾ' ಅಂದೆ. 'ಏನೋ ನೀ ಎಲ್ಲರ ಹಾಗೆ ಫೀಜು ವಜಾ ಆಗೋ ಅರ್ಜಿ ಫಾರಂ ತಗೊಳ್ಳಿಲ್ಲವಂತೆ!' ಅಂದಳು. 'ಹೌದಮ್ಮಾ', 'ಏಕೆ ನಾವೇನು ಸಾಹುಕಾರರೇ?' 'ಅಲ್ಲವೇ? ನಾವು ಬಡವರೇ?' ಪ್ರಶ್ನೆಗೆ ಪ್ರತಿಪ್ರಶ್ನೆಯನ್ನು ನಮ್ಮಮ್ಮ ನಿರೀಕ್ಷಿಸಿರಲಿಲ್ಲಾ ಅಂತಾ ಕಾಣುತ್ತೆ. ಮಾತೇ ಆಡಲಿಲ್ಲ. ನಾನೇ ಮುಂದುವರೆದು 'ಅಲ್ಲಮ್ಮಾ, ದೇವ್ರು ನಮಗೇನು ಕಡಿಮೆ ಮಾಡಿದ್ದಾನೆ? ನನ್ನ ಜೊತೆಯಲ್ಲಿ ಬರೋ ೨೫ ಹುಡುಗರಲ್ಲಿ ೧೬–೧೮ ಹುಡುಗರಿಗೆ ಮಧ್ಯಾಹ್ನದ ತಿಂಡಿಗೆ ರಾಗಿರೊಟ್ಟಿ ಕೂಡ ಗತಿಯಿಲ್ಲ. ನನಗೆ ನೀನು ದಿನಾಲು ಮೊಸರನ್ನ, ರೊಟ್ಟಿ ಈರುಳ್ಳಿ ಎಲ್ಲಾ ಕಟ್ಟಿ ಕೊಡ್ತೀಯಾ ಅಂದ ಮೇಲೆ ನಾವು ಅವರಿಗಿಂತ ಉತ್ತಮ ಅಲ್ಲವೆ? ಅವರಿಗೆ ಹೋಲಿಸಿದಾಗ, ಶ್ರೀಮಂತರಲ್ಲವೆ? ಆದ್ದರಿಂದ ಅರ್ಜಿ ಫಾರಂ ಪಡೆಯಲಿಲ್ಲ' ಅಂದೆ. ನನ್ನ ಮಾತು ನಮ್ಮಮ್ಮನಿಗೆ ಹಿಡಿಸಿತು. ಸ್ವಲ್ಪ ಹೊತ್ತು ಸುಮ್ಮನಿದ್ದು ಹುರಿದ ಹುರುಳಿಕಾಳು, ಕೊಬ್ಬರಿ–ಬೆಲ್ಲ ಕೊಟ್ಟು, 'ಹೋಗಲಿ ಬಿಡು. ನಮ್ಮ ಅನ್ನ ನಮ್ಮ ಮಡಿಲಲ್ಲೈತೆ. ಅದನ್ಯಾಕೆ ಇಲ್ಲಾ ಅನ್ನಾನ. ಇನ್ನೊಬ್ಬರ ತುತ್ತನ್ನು ನಾವ್ಯಾಕೆ ಕಿತ್ಕೋಬೇಕು' ಅಂದಳು. ನನ್ನ ಬಗ್ಗೆ, ನಾನು ನಡೆದುಕೊಂಡದ್ದರ ಬಗ್ಗೆ ತುಂಬ ಅಭಿಮಾನ ಮೂಡಿತು ನನ್ನ ತಾಯಿಗೆ.

ಆದರೆ ಒಂದು ಅನ್ಯಾಯ ಆಯಿತು. ಅದು ಕ್ವಿಟ್ ಇಂಡಿಯಾ ಚಳವಳಿಯ ದಿನ ತಿಪಟೂರು, ತುಮಕೂರುಗಳಲ್ಲಿ ಓದುತ್ತಿದ್ದ ಶೆಟ್ಟೀಕೆರೆ, ಕುಪ್ಪೂರು, ಚಿಕ್ಕನಾಯಕನಹಳ್ಳಿ ಮೊದಲಾದ ಊರುಗಳ ನಮ್ಮ ಹಿರಿಯ ಅಣ್ಣಗಳು, 'ಮಹಾತ್ಮ ಗಾಂಧೀಕಿ ಜೈ..., ಬೋಲೋ ಭಾರತ್ ಮಾತಾ ಕೀ ಜೈ...' ಎಂದು ಘೋಷಿಸುತ್ತ ಶೆಟ್ಟೀಕೆರೆಗೂ ಬಂದರು. ನಾವು ಅನೇಕರು ಅವರ ಹಿಂದೆ ಹೋದೆವು. ಅವರು ಯಾವ ಯಾವದೋ ಊರುಗಳಿಗೆ ಕರೆದುಕೊಂಡು ಹೋದರು. ಕೊನೆಗೆ ತಿಪಟೂರು ಗುಡ್‌ಶೆಡ್‌ಗೆ ಬೆಂಕಿ ಹಚ್ಚುವುದರಲ್ಲೂ ನಮಗೆ ಪಾಲು ಕೊಟ್ಟರು. ಪೊಲೀಸರು ಹಿಡಿದು, ಬಡಿದು ಒಂದು ಲಾರಿಯಲ್ಲಿ ತುಂಬಿಕೊಂಡು ಹೋಗಿ ಯಾವುದೊ ಕಾಡಿನಲ್ಲಿ ನಮ್ಮನ್ನು ಸುರಿದುಬಿಟ್ಟರು. ನಾವು ಬೆಳಗಾಗುವ ತನಕ ಮರದಡಿ ಬಿದ್ದುಕೊಂಡಿದ್ದು, ಬೆಳಗಾದ ಮೇಲೆ ಕರಡಿ ರೈಲ್ವೆ ಸ್ಟೇಷನ್ ಮಾರ್ಗವಾಗಿ ಕಾಡು–ಮೇಡು ತುಳಿದು ಮಧ್ಯಾಹ್ನದ ಹೊತ್ತಿಗೆ ಊರು ಮುಟ್ಟಿದೆವು. ಹತ್ತಿಪ್ಪತ್ತು ದಿನಗಳಿಂದಲೂ ಮಗನ ಮುಖ ಕಾಣದಿದ್ದ ನಮ್ಮಮ್ಮ ಅತ್ತು ಕರೆದು ಅನೇಕ ದಿನ ಊಟ ಬಿಟ್ಟಳಂತೆ. ಊರಿಗೆ ಬಂದೆ, ಕೆಟ್ಟ ಸುದ್ದಿ ಬಂತು. ನಮ್ಮ ಚಳವಳಿಯ ದಿನಗಳಲ್ಲಿ ವಾರ್ಷಿಕ ಪರೀಕ್ಷೆ ನಡೆದು, ನಾನು ಗೈರುಹಾಜರಾದ್ದರಿಂದ ಫೇಲಾಗಿದ್ದೆ. ನಮ್ಮಮ್ಮನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. 'ನನ್ನ ಮಗ ಇಡೀ ಶಾಲೆಗೇ ಬುದ್ಧಿವಂತ. ಅವನು ಫೇಲಾಗೋದು ಅಂದರೇನು?' ಅಂತಾ ಆರ್ಭಟಿಸಿದಳು. ಆಗ

ಆಕೆಗೆ ಯಾರೋ ಹೇಳಿದರಂತೆ ಚಿಕ್ಕನಾಯಕನಹಳ್ಳಿ ಆಸ್ಪತ್ರೆ ಡಾಕ್ಟರಿಂದ ಒಂದು ಮೆಡಿಕಲ್ ಸರ್ಟಿಫಿಕೇಟ್ ತಂದರೆ ಪಾಸ್ ಮಾಡ್ತಾರೆ ಅಂತಾ. ನಮ್ಮಯ್ಯ ೭ ಮೈಲಿ (ಸುಮಾರು ೧೨ ಕಿ.ಮೀ.) ದೂರ ನಡೆದು ಹೋಗಿ ನಿರಾಶರಾಗಿ ಬಂದರು. ಡಾಕ್ಟರ್ ಮುಂದೆ ನಮ್ಮಯ್ಯ ಸತ್ಯಸಂಗತಿ ಹೇಳಿದರಂತೆ. ಅದಕ್ಕೆ ಡಾಕ್ಟರು, 'ನೋಡಿ, ಸುಳ್ಳ ಸರ್ಟಿಫಿಕೇಟ್ ಕೊಡಬಹುದು. ಆದರೆ ನಿಮ್ಮ ಹುಡುಗ ರಾಜಕೀಯ ಖೈದಿ ಆಗಿದ್ದ, ಅರೆಸ್ಟ್ ಆಗಿದ್ದ. ಇಂಥವನು, ಇಂಥಾ ತಾರೀಖು ಚಿಕ್ಕನಾಯಕನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೇಗೆ ಪಡೆಯುತ್ತಿದ್ದ ಎಂದೆಲ್ಲಾ ತನಿಖೆ ನಡೆದರೆ ನಾನು ಮನೆಗೆ ಹೋಗಬೇಕಾಗುತ್ತೆ. ನಾನು ಸರ್ಟಿಫಿಕೇಟ್ ಕೊಡಕಾಗೋಲ್ಲ' ಅಂದರಂತೆ. ನಾನು ಫೇಲಾದೆ. 'ಏನಾಗಬೇಕೊ ಅದು ಆಗದೇ ಇರುವುದಿಲ್ಲ' ಅಂದರು ನಮ್ಮಯ್ಯ.

ನನ್ನ ಜೊತೆಯವರೆಲ್ಲಾ ಮುಂದಿನ ತರಗತಿಗೆ ಹೋದರು. ನಾನು ಅದೇ ತರಗತಿಯಲ್ಲಿ ಓದಬೇಕೆ? ನಾಚಿಕೆಯಾಯಿತು. ನಾನು ಓದೋದಿಲ್ಲ ಎಂದು ಹಟ ಹಿಡಿದೆ. ಆ ಸಮಯದಲ್ಲಿ ನಮ್ಮ ದೂರದ ಸಂಬಂಧಿಗಳಾದ ಶೆಟ್ಟೀಕೆರೆ ಭದ್ರಯ್ಯನವರು ಇದ್ದರು. ಅವರು ನನ್ನನ್ನು ಸಮಾಧಾನ ಮಾಡಿ, 'ಬಾ, ನಮ್ಮೂರಿಗೆ ಕರೆದುಕೊಂಡು ಹೋಗ್ತೇನೆ. ನಿನಗೆ ನಿಮ್ಮೂರಿನ ಸಹಪಾಠಿಗಳ ಜೊತೆಗೆ ಶಾಲೆಗೆ ಬರಲು ನಾಚಿಕೆಯಾದರೆ ನಮ್ಮ ಮನೆಯಿಂದ ಹೋಗುವಿಯಂತೆ' ಎಂದು ನನ್ನನ್ನು ಕರೆದೊಯ್ದರು. ಬಟ್ಟೆ, ಪುಸ್ತಕ ತೆಗೆದುಕೊಂಡು ಅವರ ಜೊತೆ ಹೊರಟೆ. ನಮ್ಮಮ್ಮನಿಗೆ ಅದೆಷ್ಟೋ ಸಮಾಧಾನ ಆಯಿತು.

ಶೆಟ್ಟೀಕೆರೆ ನನ್ನನ್ನು ಬಹಳ ಮಟ್ಟಿನ ನಾಗರಿಕನನ್ನಾಗಿಸಿತು. ನಾನು ಅಲ್ಲಿ ಕಾಫಿ ಕುಡಿಯುವುದನ್ನು ಕಲಿತೆ. ಹೋಟೆಲ್ ಪ್ರವೇಶ ಕಲಿತೆ, ಅಜ್ಜನ ಕೆರೆಯಲ್ಲಿ ಈಜು ಕಲಿತೆ, ತೆಂಗಿನಮರ ಹತ್ತೋದು, ಸೈಕಲ್ ಹೊಡೆಯೋದು, ನಾಟಕ ಆಡೋದು, ಏನೇನೋ ಕಲಿತೆ. ವರ್ಷದ ಕೊನೇ ಹೊತ್ತಿಗೆ ನನ್ನಲ್ಲಿ ಸಾಕಷ್ಟು ಮಾರ್ಪಾಟಾಗಿತ್ತು. ಒಂದು ರೀತಿಯಲ್ಲಿ ಮುಗ್ಧತೆಯ ಕೋಶದಿಂದ ಜ್ಞಾನದ ಬೆಳಕಿನೆಡೆಗೆ ಬಂದಂತೆ ಭಾಸವಾಗುತ್ತಿತ್ತು.

೬ ರೂಪಾಯಿ ಪರೀಕ್ಷಾ ಶುಲ್ಕ ಕಟ್ಟಿ, ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತೆ. ಶ್ರೀ ವೆಂಕಟರಮಣಯ್ಯನವರೆಂಬ ಶಾಲೆಯ ಮುಖ್ಯೋಪಾಧ್ಯಾಯರು, ಬಿಳಿಗೆರೆ ಸಿದ್ದಲಿಂಗಯ್ಯನವರು, ನಾಗಪ್ಪ ಮೇಸ್ಟ್ರು ಇವರೇ ಮೊದಲಾದ ಶ್ರೇಷ್ಠ ಗುರುಗಳ ಬೋಧನೆ ಆಶೀರ್ವಾದಗಳಿಂದ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದೆ.

ಹೈಸ್ಕೂಲ್ ಇದ್ದದ್ದು ತಿಪಟೂರಿನಲ್ಲಿ ಮಾತ್ರ. ದಾವಣಗೆರೆ ಬಿಟ್ಟರೆ ತಿಪಟೂರು, ತಿಪಟೂರು ಬಿಟ್ಟರೆ ತುಮಕೂರು. ಅನಂತರ ಬೆಂಗಳೂರು–ಇಷ್ಟೇ ಕಡೆಗಳಲ್ಲಿ ಹೈಸ್ಕೂಲ್‌ಗಳಿದ್ದುದು. ನಮ್ಮಮ್ಮನಿಗೆ ತನ್ನ ಮಗ ವಿದ್ಯಾವಂತನಾಗಬೇಕು ಎಂಬ ಹಂಬಲ,

ಅಪ್ಪಾಜಿಗೂ ಆಸೆ ಇತ್ತು. ಮೂರು ವರ್ಷ ಹೇಗೋ ಕಳೆದು ಹೋಗುತ್ತವೆ. ಮಗ ಓದಲಿ ಎಂದಂದುಕೊಂಡು ನನ್ನನ್ನು ತಿಪಟೂರಿಗೆ ಕರೆದುಕೊಂಡು ಹೋದರು. ಶಾಲೆಗೆ ಸೇರಿದ್ದಾತಿಯು. ಆದರೆ ಊಟ, ವಸತಿ? ಸಾಸಲಿಂದ ತಿಪಟೂರಿಗೆ ೯ ಮೈಲಿ ಯಾವುದೇ ವಾಹನ ಸೌಕರ್ಯ ಇರಲಿಲ್ಲ. ನಿತ್ಯವೂ ನಡೆದುಹೋಗಿ ಬರುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ತಿಪಟೂರು ಜಯದೇವ ವಿದ್ಯಾರ್ಥಿ ನಿಲಯಕ್ಕೆ ಸೇರಿಸಲು ನಮ್ಮಯ್ಯ ಪ್ರಯತ್ನಿಸಿದರು. ಆದರೆ ಹಾಸ್ಟೆಲಿನ ಆವರಣದ ಒಂದು ಕಟ್ಟೆ ಮೇಲೆ ನನ್ನನ್ನು ಕೂರಿಸಿಕೊಂಡು, ಬಹಳ ಯೋಚಿಸಿ, 'ಏನ್ ಮಾಡೋಣೊ' ಅಂದರು. 'ಅಯ್ಯಾ, ತಿಂಗಳಿಗೆ ಐದು ರೂಪಾಯಿಯಷ್ಟು ಹಣವನ್ನು ಎಲ್ಲಿಂದಾ ತರುತ್ತೀರಿ. ಬೇಡಿ. ನಾನು ಓದಲೇಬೇಕು ಅಂತ ಅಮ್ಮನ ಒತ್ತಾಸೆ ನನಗೂ, ನಿಮಗೂ ಅದೇ ಭಾವನೆ ಇದೆ. ನೀವು ಏಳು ಮನೆಗಳನ್ನು ವಾರಾನ್ನಕ್ಕೆ ಗೊತ್ತು ಮಾಡಿಕೊಡಿ. ನಾನು ಹೇಗೋ, ನಮ್ಮ ಸ್ನೇಹಿತರ ಕೊಠಡಿಗಳಲ್ಲಿದ್ದುಕೊಂಡು ಕಲೀತೇನೆ' ಎಂದೆ. ನಮ್ಮಯ್ಯನಿಗೆ ಖುಷಿ ಆಯಿತು. ಆದರೆ ಏಳು ಮನೆಗಳನ್ನು ಹುಡುಕಬೇಕಲ್ಲ. ಮೊದಲು ಒಂದು ಮನೆಗೆ ಹೋದೆವು. ಅವರು ನಮ್ಮ ಹತ್ತಿರದ ಬಂಧುಗಳಂತೆ. ನಮ್ಮಯ್ಯ ಮನೆಯ ಯಜಮಾನಿ ಕುರಿತು, 'ಅಕ್ಕಾ, ಮಧ್ಯಾಹ್ನ ಮೀರ್ತಾ ಇದೆ ಊರಲ್ಲಿಷ್ಟು ತಿಂಡಿ ತಿಂದು ಬಂದದ್ದು. ನನಗೆ ಬೇಡ ನಮ್ಮ ಮಗುವಿಗೆ ಸ್ವಲ್ಪ ಊಟಕ್ಕೆ ಹಾಕ್ತೀಯಾ?' ಆಕೆ, 'ಅಯ್ಯೋ, ಶಿವರುದ್ರಯ್ಯ ಇವತ್ತು ನಾವು ಅಡಿಗೇನೇ ಮಾಡಿಲ್ಲ' ಅಂದಳು ಎಂಜಲು ತಟ್ಟೆ ತೊಳೆಯುತ್ತಾ. ನನಗೆ ನಮ್ಮಯ್ಯನ ಮೇಲೆ ಸಿಕ್ಕಾಪಟ್ಟೆ ಸಿಟ್ಟು ಬಂತು. 'ಅಯ್ಯಾ, ಬನ್ನಿ ಹೋಗೋಣ ನಿಮಗಿಲ್ಲದ ಹಸಿವು ನನಗಾಗಿದೆಯೆ? ನಡೆಯಿಸಿ ಸುಮ್ಮನೆ' ಎಂದು ಸ್ವಲ್ಪ ಒರಟಾಗಿ ಅಂದೆ.

ಕೊಬ್ಬರಿ ಮಂಡಿ ವರ್ತಕರ ಐದು ಮನೆಗಳು ಮತ್ತು ನಮ್ಮ ದಾಯಾದಿ ನಂಜಯ್ಯನವರ ಮನೆ ಆರನೆಯ ಮನೆ ಸಿಕ್ಕಿದವು. ಇನ್ನೊಂದು ಬೇಕಾಗಿತ್ತು. ನಮ್ಮಯ್ಯನ ಬಾಲ್ಯ ಸ್ನೇಹಿತನಂತೆ ಆತ ತಿಪಟೂರಿನಲ್ಲಿ ಓರ್ವ ಸರಕಾರಿ ಉನ್ನತಾಧಿಕಾರಿಯಾಗಿದ್ದರು. ಅವರ ಮನೆ ಕೃಷ್ಣರಾಜೇಂದ್ರ ಬಡಾವಣೆಯ ಹೈಸ್ಕೂಲ್ ಬಳಿ ಇತ್ತು. ಅಲ್ಲಿಗೆ ನಡೆದು ಹೊರಟೆವು. 'ನೋಡ್ ಪಾಪು, ನಾವಿಷ್ಟೆಲ್ಲಾ ಕಷ್ಟಪಡಬೇಕಾಗಿಲ್ಲ. ನಾನು ಮರೆತಿದ್ದೆ. ನನ್ನ ಬಾಲ್ಯಸ್ನೇಹಿತ ಒಳ್ಳೆ ಹುದ್ದೆಯಲ್ಲಿದ್ದಾನೆ. ಕೈತುಂಬಾ ಸಂಬಳ. ಬಂಗಲೆಯಂಥಾ ಮನೆ. ಅವರನ್ನು ಕೇಳಿದರೆ ನಿನ್ನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಓದಿಸುತ್ತಾನೆ. ವಾರಾನ್ನದ ತಾಪತ್ರಯವೇ ಬೇಡ' ಅಂತಾ ಒಂದು ಸುಂದರ ಆಶಾಗೋಪುರವನ್ನು ಕಟ್ಟಿ ನನ್ನ ಮುಂದಿಟ್ಟರು. ಅದು ಗಾಳಿಗೋಪುರ ಎಂದು ಅವರಿಗೆ ಆಗ ತಿಳಿಯಲಿಲ್ಲ. ನನಗೂ ತಿಳಿಯಲಿಲ್ಲ. ನಾನು ಖುಷಿಯಿಂದ ಅವರ ಹಿಂದೆ ಹೋದೆ. ನಮ್ಮಯ್ಯ ತಮ್ಮ ಬಾಲ್ಯ ಸ್ನೇಹಿತರ ಮನೆ ಬಾಗಿಲು ತಟ್ಟಿದರು. ಸ್ನೇಹಿತರು ಬಂದರು. ಹಸನ್ಮುಖಿಗಳಾಗಿ ಬೋಲ್ಟ್ ಸರಿಸಿ, ಬಾಗಿಲು ಮುಂದೆ ನಿಂತು, 'ಏನು ಶಿವರುದ್ರಯ್ಯ ಅಪರೂಪಕ್ಕೆ ಬಂದೆ. ಏನ್

ಸಮಾಚಾರ, ಇವನಾರು ಮಗನೊ?' ಎಂದು ಪ್ರಶ್ನಿಸಿದರು. ನಮ್ಮ ತಂದೆ 'ಹು ಹು ಹು... ನನ್ಮಗ' ಎಂದು ಹಲ್ಲು ಕಿರಿದರು. 'ಏನ್ ಬಂದೆ?' 'ಏನಿಲ್ಲ, ನಮ್ಮ ಹುಡುಗನನ್ನು ಹೈಸ್ಕೂಲಿಗೆ ಸೇರಿಸಿದೆ. ಅವನಿಗೆ ಊಟಕ್ಕೆ ಸ್ವಲ್ಪ ಸಹಾಯ ಮಾಡಬೇಕು. ನಿಮ್ಮನ್ನು ಕೇಳೋಣ ಅಂತ ಬಂದೆ' ಅಂದ ಕೂಡಲೇ ಆ ಪುಣ್ಯಾತ್ಮರು ಸರಿಸಿದ ಬೋಲ್ಟನ್ನು ಮೇಲಕ್ಕೇರಿಸಿ, 'ನಾನೇನಪ್ಪ ಮಾಡ್ಲಿ? ನಮ್ಮಲ್ಲಿ ಅಂಥ ವ್ಯವಸ್ಥೆ ಇಲ್ಲಪ್ಪಾ' ಅಂದರು. 'ದಿನಾ ಬೇಡ ವಾರಕ್ಕೊಂದಿನ ಬರ್ತಾನೆ. ವಾರಾನ್ನವಾದರೂ ಕೊಡಿ' ದಯವಿಟ್ಟು ಅವೆಲ್ಲಾ ಕೇಳಬಾರ್ದು ನೀನು. ಹೋಗು ಹೋಗು' ಎಂದು ಬಾಗಿಲು ಬಡಿದುಕೊಂಡು ಒಳಗೆ ಹೋಗೇಬಿಟ್ಟರು. ನಮ್ಮಯ್ಯ ಮೆಟ್ಟಿಲ ಕೆಳಗಿಳಿದು ನಿಂತು ಗಳಗಳ ಅತ್ತುಬಿಟ್ಟರು. ನನಗೂ ತಡೆಯಲಾರದಷ್ಟು ದುಃಖ ಆಯಿತು. ರಸ್ತೆ ಬದಿಯ ಗೋಣಿಮರದ ಕೆಳಗೆ ಸ್ವಲ್ಪ ಹೊತ್ತು ಇಬ್ಬರೂ ಒದ್ದೆಗಣ್ಣವರಾಗಿ ಕುಳಿತೆವು. ಆಮೇಲೆ ಚೇತರಿಸಿಕೊಂಡು ನಾನೇ ಹೇಳಿದೆ, 'ಅಯ್ಯಾ, ಒಂದು ದಿನ ಸಿಗದಿದ್ದರೆ ಚಿಂತೆಯಿಲ್ಲ. ನಾನು ಉಪವಾಸ ಮಾಡ್ತೀನಿ. ಇಲ್ಲವೇ ಎಲ್ಲಿಯಾದರೂ ಒಂದು ಮನೆ ಹುಡುಕಿಕೊಳ್ತೀನಿ' ಎಂದು. ಅಯ್ಯನಿಗೆ ಧೈರ್ಯ ಬಂತು. ನಾನು ತಿಪಟೂರು ಗುರುಕುಲ ಹಾಸ್ಟೆಲ್‌ನ ಮ್ಯಾನೇಜರ್‌ರವರನ್ನು ಕಂಡೆ. ಅವರು ತುಂಬಾ ಸಂತೋಷದಿಂದ ವಾರಕ್ಕೊಂದು ದಿನ ಊಟ ಕೊಡಲು ಒಪ್ಪಿದರು. ಆದರೆ ವಸತಿಗೆ ಅಭಾವ. ಅದರಿಂದಾಗಿ ನಾನು ನಮ್ಮೂರಿನ ನನ್ನ ಬಾಲ್ಯದ ಗೆಳೆಯ ಮಂಡಿ ವರ್ತಕರ ಮಗ ಎಸ್. ಎಂ. ಸೋಮಶೇಖರಪ್ಪನ ಕೊಠಡಿಯಲ್ಲಿ ಉಳಿದೆ. ಆತ ಕೊಟ್ಟ ಆಶ್ರಯವನ್ನು ನಾನೆಂದಿಗೂ ಮರೆಯಲಾರೆ. ಮುಂದಿನ ವರ್ಷ ಬೆಲಗೂರು ಚನ್ನಬಸಪ್ಪ ತನ್ನ ಕೊಠಡಿಗೆ ನನ್ನನ್ನು ಕರೆದುಕೊಂಡು ಹೋದ. ಅಲ್ಲಿ ಸಿ.ವಿ. ವೆಂಕಟಾಚಲಯ್ಯ ಎಂಬ ಓರ್ವ ಪ್ರತಿಭಾವಂತ ಶಿಕ್ಷಕರು ಚನ್ನಬಸಪ್ಪನಿಗೆ ಇಂಗ್ಲಿಷ್ ಪಾಠ ಹೇಳಲು ಬರುತ್ತಿದ್ದರು. ಸಿ.ವಿ.ವಿ. ಈಗ ದಿವಂಗತರು. ಚಲಚ್ಚಿತ್ರ ರಂಗದ ಖ್ಯಾತ ನಿರ್ದೇಶಕ ಸಿ.ವಿ. ಶಿವಶಂಕರ್‌ರವ ಹಿರಿಯ ಅಣ್ಣ. ಇಂಗ್ಲಿಷ್ ಭಾಷೆಯ ಬನಿ ಅವರ ಬಾಯಲ್ಲಿ ರಸಪೂರಿತ. ನಾನು ಬಡವ ಟ್ಯೂಷನ್ ಫೀ ಕೊಡಲಾರದವನು ಎಂದು ತಿಳಿದ ಅವರು ಒಂದು ದಿನ 'ನೋಡು ಚನ್ನಬಸಪ್ಪ ಈ ಹುಡುಗ ಪ್ರತಿಭಾವಂತ. ಇವನು ನನ್ನಲ್ಲಿ ಪಾಠ ಕೇಳಲಿ. ಫೀ ಕೊಡುವುದು ಬೇಡ. ಇವನನ್ನು ನೀನು ಕೈಬಿಡಬೇಡ, ನಾನು ಬಿಡುವುದಿಲ್ಲ' ಎಂದು ಹೇಳಿದ್ದನ್ನು ನಾನು ಕದ್ದು ಕೇಳಿದ್ದುಂಟು. ಅವರಿತ್ತ ಇಂಗ್ಲಿಷ್ ಶಿಕ್ಷಣ ನನಗಿನ್ನೂ ನೆನಪಿನಲ್ಲಿ ಉಳಿದಿದೆ. ವಿಜ್ಞಾನವನ್ನು ಹೊನ್ನವಳ್ಳಿಯ ಹೆಚ್. ಎನ್. ವೆಂಕಟರಾಮಯ್ಯನವರು ಹೇಳಿಕೊಟ್ಟರು. ಅನೇಕ ಜನ ತಾಯಂದಿರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ನನ್ನನ್ನು ಕಂಡು ವಾರ ವಾರ ೨ ಊಟ ಕೊಟ್ಟು ಸಲಹಿದರು. ಅವರಿತ್ತ ಅನ್ನ ನನ್ನ ಧಮನಿಯಲ್ಲಿ ರಕ್ತವಾಗಿದೆ. ತಿಂಡಿ ಆಗಾಗ ಸಾಸಲು ಮುರಿಗೆಪ್ಪನವರ ಮನೆಯಲ್ಲಿ ಸಿಗುತ್ತಿತ್ತು. ತಾಯಿ ಗಂಗವ್ವ ತಿಂಡಿ ಕೊಡುತ್ತಿದ್ದರು. ನಾನು ಅವರ ಮನೆಗೆ ನೀರು ಸೇದಿ ಹಾಕುತ್ತಿದ್ದೆ. ಆಗ ದೇವರ ಪೂಜೆ ಮಾಡುತ್ತಿದ್ದೆ. ಬೇರೊಬ್ಬ ವರ್ತಕರ ಮನೆಯಲ್ಲಿ ಅವರ ಇಬ್ಬರು

ಹೆಣ್ಣುಮಕ್ಕಳುಗಳಿಗೆ ಸಂಜೆ ಪಾಠ ಹೇಳುತ್ತಿದ್ದೆ. ತಿಂಗಳಿಗೆ ೩ ರೂಪಾಯಿ ಸಂಭಾವನೆ ಸಿಗುತ್ತಿತ್ತು. ಅದಷ್ಟೂ ಶಾಲಾ ಫೀಜಿಗೆ ಹೋಗುತ್ತಿತ್ತು. ಬಡವರಿಗೆ ಯಾರೂ ನೆರವಾಗುವುದಿಲ್ಲ. ನನಗೆ ಫೀಜು ಕೂಡ ವಜಾ ಆಗಲಿಲ್ಲ. ಓದುವುದಕ್ಕೆ ಪುಸ್ತಕಗಳಿಲ್ಲ. ನೋಟ್ಸ್ ಬರೆದುಕೊಳ್ಳಲು ಸಹ ಕಾಗದ ಇಲ್ಲ. ಶಾಲೆಯಲ್ಲಿ ಗುರುಗಳು ಹೇಳಿದ್ದರ ನೆನಪು ಮಾತ್ರ ನನಗೆ ಪರೀಕ್ಷೆಯಲ್ಲಿ ಸಹಾಯ ಮಾಡುತ್ತಿತ್ತು. ಹೀಗಾಗಿ ಪ್ರತಿಭೆ ಇದ್ದರೂ ಹೆಚ್ಚು ಅಂಕ ಪಡೆಯಲು ವಿಫಲನಾದೆ. ಆದರೆ ತಪ್ಪದೆ ಪ್ರತಿ ವರ್ಷವೂ ಪಾಸು ಮಾಡುತ್ತಿದ್ದೆ. ಎಸ್ಸೆಸ್ಸೆಲ್ಸಿ ಕೂಡ ಯಶಸ್ವಿಯಾಗಿ ಮುಗಿಯಿತು. ಉತ್ತಮ ವರ್ಗದಲ್ಲೇ ಪಾಸು ಮಾಡಿದೆ.

ಅನೇಕ ಜನ ಬಡವರಿಗೆ ಶಿಕ್ಷಣ ಬಹಳ ದುಬಾರಿ ವ್ಯಾಪಾರ. ಕೆಲವರ ಪಾಲಿಗೆ ಅದು ಮರದ ಕೊಂಬು. ಆದರೆ ಸಾಹಸಿಗೆ ಸಾಧ್ಯ ಎಂಬುದು ನನ್ನ ಅನಿಸಿಕೆ. ಪ್ರಯತ್ನಪಟ್ಟರೆ ಫಲ ಸಿಕ್ಕಿಯೇ ಸಿಕ್ಕುತ್ತೆ. ನನ್ನ ಜೀವಿತದಲ್ಲಿ ಆದ ಘಟನೆ ಅದಕ್ಕೆ ನಿದರ್ಶನ. ನಾನು ಎಸ್ಸೆಸ್ಸೆಲ್ಸಿ ಪಾಸ್ ಮಾಡಿದ ಮೇಲೆ ಆಗಿನ ಇಂಟರ್‌ಮೀಡಿಯಟ್ ಕಾಲೇಜು ಶಿಕ್ಷಣ ಕೊಡಿಸುವುದು ನನ್ನ ತಂದೆಗೆ ಸಾಧ್ಯವಿರಲಿಲ್ಲ. ಅವರು ಆ ಬಗ್ಗೆ ಕೈ ಚೆಲ್ಲಿ ಕುಳಿತರು. ಅದರೆ ನಮ್ಮಮ್ಮನಿಗೆ ಮಗನನ್ನು ಪದವೀಧರನನ್ನಾಗಿ ಮಾಡಬೇಕೆಂಬ ಹಂಬಲ. ಆದರೆ ಅದು ನಮ್ಮ ಪಾಲಿಗೆ ನುಂಗಲಾರದ ತುತ್ತಾಗಿತ್ತು. ನಾವು ಅದೃಷ್ಟವನ್ನು ನಂಬಿದವರಾದ್ದರಿಂದ ಒಂದು ಅಮೃತ ಘಳಿಗೆ ಬಂತು. ದೇವರು ನೇರವಾಗಿ ಬಂದು ನಮ್ಮ ಕೈಹಿಡಿದು ನಡೆಸುವುದಿಲ್ಲ. ಮನುಷ್ಯ ರೂಪದಲ್ಲಿ ಬಂದು ಮಾರ್ಗದರ್ಶನ ಮಾಡುತ್ತಾನೆ, ನೆರವಾಗುತ್ತಾನೆ. ಅದಕ್ಕೆ ನನ್ನ ಬದುಕಿನ ಒಂದು ಘಟನೆ ಸಾಕ್ಷಿ. ನಮ್ಮೂರಿನಲ್ಲಿ ನೀಲಕಂಠಪ್ಪನವರ ತಂಗಿ ಮದುವೆ. ನನ್ನ ಅದೃಷ್ಟ ದೇವತೆ ಬಿ.ಎಸ್. ಶಂಕರಪ್ಪನವರ ರೂಪದಲ್ಲಿ ಆ ಮದುವೆಗೆ ಬಂದರು. ಶಂಕರಪ್ಪನವರು ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲುಕು ಬೆಲಗೂರು ಗ್ರಾಮದವರು. ತುಂಬಾ ಜನಪ್ರಿಯ ವ್ಯಕ್ತಿ; ಕಾರುಣ್ಯಮೂರ್ತಿ. ದೀನದಲಿತರಿಗೆ ಅನ್ನವಾಗಿದ್ದವರು. ನಮ್ಮೂರ 'ಸಾಸಲು ಬ್ರದರ್ಸ್' ಕೊಬ್ಬರಿ ಮಂಡಿ ವರ್ತಕರ ಅಂದರೆ ನೀಲಕಂಠಪ್ಪನವರು, ಸಿದ್ದಲಿಂಗಪ್ಪನವರು, ಗಂಗಾಧರಪ್ಪನವರು–ಇವರ ಸೋದರಿ ರುದ್ರಮ್ಮನವರನ್ನು ಅವರಿಗೆ ಕೊಟ್ಟು ಲಗ್ನ ಮಾಡಿತ್ತು. ಅವರಿಗೆ ಹೆಣ್ಣು ಗಂಡು ನಾಲ್ಕು ಮಕ್ಕಳು. ಬೇಕಾದಷ್ಟು ಆಸ್ತಿ ಪಾಸ್ತಿ ಬೆಲಗೂರಲ್ಲಿ. ಸಗ್ಗಕ್ಕೆ ಕಿಚ್ಚು ಹಚ್ಚು ಎನ್ನುವಂತಹ ಸಂಸಾರ. ಹೊಸದುರ್ಗ–ಅಷ್ಟೇಕೆ ಇಡೀ ಚಿತ್ರದುರ್ಗ ಜಿಲ್ಲೆಯಲ್ಲೇ ದೇವಮಾನವ ಎಂಬ ಗೌರವಕ್ಕೆ ಪಾತ್ರರಾಗಿದ್ದರು ಶಂಕರಪ್ಪನವರು. ೧೯೪೯ರಲ್ಲಿ ಅವರು ಚಿತ್ರದುರ್ಗದ ಜಿಲ್ಲಾ ಬೋರ್ಡ್‌ನ ಉಪಾಧ್ಯಕ್ಷರಾಗಿದ್ದರು. ಅನಂತರ ಶಾಸಕರು ಆಗಿ, ರಾಜ್ಯ ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾಗಿದ್ದರು. ಆದರೆ ರಾಜಕೀಯದಲ್ಲಿ ಅವರು ದುಡಿದುಕೊಂಡದ್ದು ಹೊರಲಾರದ ಸಾಲದ ಹೊರೆಯನ್ನು. ಶುದ್ಧ ಹಸ್ತರಾದ ಇವರು ಪ್ರಜಾಹಿತಕ್ಕಾಗಿ, ಸಮಾಜಕ್ಕಾಗಿ, ದೀನದಲಿತರಿಗಾಗಿ ಶ್ರೀಗಂಧದಂತೆ ತೇಯ್ದುಕೊಂಡವರು. ಇಂತಹ ಮಹಾಮಾನವರು ನಮ್ಮ ತಂದೆಯ ಬಾಲ್ಯ ಸ್ನೇಹಿತರು. ಮೇಲಾಗಿ ಅನಾದಿ ಕಾಲದಿಂದಲೂ

ನಮ್ಮ ಹಿರಿಯರು ಅವರ ಹಾಗೂ ಅವರ ಸಾಸಲಿನ ನೆಂಟರ ಮನೆಯ ಗುರುಗಳು. ಭಿನ್ನ–ಬಿಡುಗಡೆಗಳಿಗಾಗಿ ನಮ್ಮವರು ಅವರ ಮನೆಗಳಿಗೆ ಹೋಗುತ್ತಿದ್ದರು ಮನೆಯ 'ಅಯ್ಯ'ಗಳಾಗಿ (ಜಂಗಮರಾಗಿ). ಈ ಬಾಂಧವ್ಯದಿಂದಾಗಿ ನಮ್ಮ ತಂದೆಯವರ ಬಗೆಗೆ ಅಪಾರ ಭಕ್ತಿ ಶಂಕರಪ್ಪನವರಿಗೆ. ಅವರು ಧಾರಾಮುಹೂರ್ತವಾದ ಮೇಲೆ ನಮ್ಮ ಮನೆಗೆ ಬಂದರು. ಬಂದವರೇ ನಮ್ಮ ತಂದೆಯ ಪಾದಕ್ಕೆ ನಮಸ್ಕಾರ ಮಾಡಿ ಯೋಗಕ್ಷೇಮ ವಿಚಾರಿಸುತ್ತಾ, 'ಮಕ್ಕಳು ಎಷ್ಟು ಜನ ಸ್ವಾಮಿ' ಅಂದರು. ನಮ್ಮ ತಂದೆ ಇಬ್ಬರೇ ಗಂಡುಮಕ್ಕಳು ಎಂದರು. ಏನು ಮಾಡುತ್ತಿದ್ದಾರೆ ಅಂದಾಗ ಚಿಕ್ಕವನು ಶೆಟ್ಟೀಕೆರೆ ಸ್ಕೂಲಿಗೆ ಹೋಗಿಬರ್ತಾ ಇದಾನೆ. ದೊಡ್ಡವನು ತಿಪಟೂರು ಹೈಸ್ಕೂಲ್ ಮುಗಿಸಿದ ಅಂದರು. ಶಂಕರಪ್ಪನವರ ಕರುಣಾದೃಷ್ಟಿ ನನ್ನ ಮೇಲೆ ಬಿತ್ತು. ಮಾರ್ಕ್ಸ್‌ಕಾರ್ಡ್ ತರಿಸಿ ನೋಡಿದರು. 'ಕಾಲೇಜಿಗೆ ಸೇರಿಸಿದಿರಾ?' ಅಂದರು. ನಮ್ಮ ತಂದೆ ತಮ್ಮ ಅಸಹಾಯಕತೆ ಸೂಚಿಸಿ, 'ನೀವು ಚಿತ್ರದುರ್ಗ ಜಿಲ್ಲೆಯಲ್ಲಿ ದೊಡ್ಡ ಸ್ಥಾನದಲ್ಲಿದ್ದೀರಿ. ನಾನು ಓದಿಸೋಕಾಗೊಲ್ಲ. ನಮ್ಮ ಹುಡುಗನಿಗೆ ಒಂದು ಕೆಲಸ ಕೊಡಿಸಿ' ಅಂದರು. ಶಂಕರಪ್ಪನವರಿಗೆ ಏನನ್ನಿಸಿತೋ ಮುಂದಿನ ಭಾನುವಾರ ಚಿತ್ರದುರ್ಗಕ್ಕೆ ನಿಮ್ಮ ಮಗನನ್ನು ಕಳುಹಿಸಿ ಎಂದು ಹೇಳಿ, ಹಾಲು ಕುಡಿದು ಹೋದರು.

ನಾನು ಶನಿವಾರ ಬೆಲಗೂರಿಗೆ ಹೋಗಿ ಭಾನುವಾರ ಚಿತ್ರದುರ್ಗ ಸೇರಿದೆ. ಶಂಕರಪ್ಪನವರು ಕೇಳಿದರು, 'ಮರಿ, (ನನ್ನನ್ನು ಮರಿ ಎಂದೇ ಸಂಬೋಧಿಸುತ್ತಿದ್ದರು) ಕೆಲಸ ಕೊಡಿಸಬಹುದು. ಆದರೆ ಕೇವಲ ೫೦ ರೂಪಾಯಿ ಸಂಬಳ, ೬ ರೂಪಾಯಿ ಭತ್ಯ. ನೀವು ಜೀವನ ಮಾಡಬಹುದು. ಆದರೆ ಓದುವುದು ಒಳ್ಳೆಯದು. ನಿಮ್ಮಿಚ್ಛೆ ಏನು?' ಎಂದರು. 'ನಾನು ಓದಲೆಂದೇ ಬಂದವನು. ನಮ್ಮ ತಂದೆ ಓದಿಸಲು ಶಕ್ತರಲ್ಲ. ಆದರೂ ನೀವು ನನಗೆ ಹಾಸ್ಟೆಲ್‌ನಲ್ಲಿ ಸೀಟ್ ಕೊಡಿಸಿದರೆ ಖಂಡಿತ ಓದುತ್ತೇನೆ. ನಿಮಗೆ ಒಳ್ಳೆಯ ಹೆಸರು ತರುತ್ತೇನೆ' ಅಂದೆ. ಅವರು ಕೂಡಲೇ 'ಹಾಗಾದರೆ ಇದೇ ದಿನ ಜಯದೇವ ವಿದ್ಯಾರ್ಥಿ ನಿಲಯದ ಮೀಟಿಂಗ್ ಇದೆ. ಹೋಗಿ ಅರ್ಜಿಕೊಟ್ಟು ಬನ್ನಿ. ನಾನು ಮ್ಯಾನೇಜರ್‌ರವರಿಗೆ ಹೇಳುತ್ತೇನೆ' ಎಂದರು. ಅದೇ ರೀತಿ ಮಾಡಿದೆ. ಸೋಮವಾರ ಬೆಳಗ್ಗೆ ಫ್ರೀಬೋರ್ಡಿಂಗ್ ಸಿಕ್ಕಿದೆ ಎಂದು ನನ್ನ ಹೆಸರು ಪ್ರಕಟವಾಗಿತ್ತು. ಆಗ ಸುಮಾರು ೯ ಗಂಟೆ. ಓಡಿಬಂದು ಶಂಕರಪ್ಪನವರಿಗೆ ಹೇಳಿದೆ. ಅವರು ೫೦ ರೂಪಾಯಿ ಕೊಟ್ಟು 'ಕಾಲೇಜಿಗೆ ಹೋಗಿ ಅರ್ಜಿ ಕೊಟ್ಟು ಸೇರಿಕೊಳ್ಳಿ' ಎಂದರು. ಕಾಲೇಜಿಗೆ ಹೋದೆ. ಅರ್ಜಿಫಾರಂ ಕೊಡಲಿಲ್ಲ. 'ಕೇಳಿದೆ ಪ್ರವೇಶದ ಅವಧಿ ಮುಗಿದಿದೆ' ಎಂದರು. ನೇರವಾಗಿ ಸೂಪರಿಂಟೆಂಡೆಂಟ್‌ರವರನ್ನು (ಇಂಟರ್ ಮೀಡಿಯೇಟ್ ಕಾಲೇಜಿನ ಮುಖ್ಯಸ್ಥರನ್ನು ಆಗ ಪ್ರಿನ್ಸಿಪಾಲ್ ಎಂದು ಕರೆಯುತ್ತಿರಲಿಲ್ಲ) ಕಂಡೆ. ಅವರೂ ಸಹ 'ಆಗುವುದಿಲ್ಲ. ಪ್ರವೇಶದ ಕಡೆಯ ತಾರೀಖು ೧೪. ನೀವು ಬಂದಿರುವುದು ೨೯. ೧೫ ದಿನ ತಡ. ನಾವು ಅಡ್ಮಿಷನ್ ಮುಗಿಸಿದ್ದೇವೆ' ಅಂದರು. ನಾನು ವಿನೀತನಾಗಿ ಕೇಳಿಕೊಂಡೆ. ನನ್ನ ಮಾರ್ಕ್ಸ್‌ಕಾರ್ಡ್

ನೋಡಿದರು. ಬಹುಶಃ ದಯೆಬಂತು ಅವರಿಗೆ ಅಂದುಕೊಂಡೆ. ಆದರೆ ಅವರು 'ನೀವು ತುಮಕೂರು ಜಿಲ್ಲೆಯಿಂದ ಬಂದವರು. ನೀವು ಅಲ್ಲಿಯೇ ಹೋಗಿ ಸೇರಿಕೊಳ್ಳಿ, ಇಲ್ಲಿ ಆಗುವುದಿಲ್ಲ' ಅಂದರು. 'ನನಗಲ್ಲಿ ಅನುಕೂಲ ಇಲ್ಲದ್ದಕ್ಕೇ ಓರ್ವರು ದಯಾಳುಗಳ ಕರುಣೆಯಿಂದ ನಾನಿಲ್ಲಿಗೆ ಬಂದಿದ್ದೇನೆ' ಎಂದೆ. ಅವರು ತಲೆಯಲ್ಲಾಡಿಸಿದರು. ನಾನು ಕಡೆಯದಾಗಿ ಬೇಡಿಕೊಂಡೆ, 'ಸಾರ್, ನೀವು ಈ ಅವಕಾಶ ಕೊಡದಿದ್ದರೆ ನನ್ನ ವಿದ್ಯೆ ಮಣ್ಣು ಪಾಲು, ಕೊಟ್ಟರೆ ಆ ಪುಣ್ಯ ನಿಮ್ಮದು ಅಂತ ಭಾವಿಸ್ತೇನೆ. ನನಗೆ ಅನುಕೂಲವಿದ್ದಿದ್ದರೆ ಅಲ್ಲಿಯೇ ಎಂದೋ ಸೇರುತ್ತಿದ್ದೆ. ನನ್ನ ಶಿಕ್ಷಣ ಎಸ್.ಎಸ್.ಎಲ್.ಸಿ.ಗೆ ಮುಗಿಯಿತು ಎಂದು ಭಾವಿಸಿ ಅದರ ಯೋಚನೆಯನ್ನೇ ಬಿಟ್ಟಿದ್ದೆ. ಒಬ್ಬರು ಪುಣ್ಯಾತ್ಮರು ದಯೆ ತೋರಿದರು. ನಾನು ಬಡವ. ನನ್ನ ಬಾಳಿಗೆ ಒಂದು ಬೆಳಕು ಕೊಡಿ' ಅಂದೆ. ನನ್ನ ಆಗಿನ ಮಾತು ಕಾವ್ಯಮಯವಾಗಿಯೇ ಇತ್ತು. ಸೂಪರಿಂಟೆಂಡೆಂಟ್ ಶ್ರೀ ಎಂ.ಎಂ. ನಾರಾಯಣಸ್ವಾಮಿ ಅಯ್ಯರ್‌ರವರಿಗೆ ಕರುಣೆ ಬಂತು. 'ಆಗಲಿ, ಫೀಜುಕಟ್ಟಿ ಹೋಗಿ. ಆದರೆ ನಮ್ಮಲ್ಲಿ ಆರ್ಟ್ಸ್‌ಗೆ ಮಾತ್ರ ಅವಕಾಶವಿದೆ, ಸೈನ್ಸಿಗಿಲ್ಲ' ಎಂದು ಹೇಳಿ ಸಹಿ ಮಾಡಿ ಕೊಟ್ಟರು. ಯಾವುದೋ ಸಿಕ್ಕಿದ್ದೇ ಸಾಕು ಎಂದು ಒಪ್ಪಿ ಬಂದೆ.

ಹೀಗೆ ನನ್ನ ಭಾಗದ ದೈವಸ್ವರೂಪರಾದ ಶ್ರೀ ಬಿ. ಎಸ್. ಶಂಕರಪ್ಪನವರಿಂದ ನನ್ನ ಶಿಕ್ಷಣ ಮುಂದುವರಿಯಿತು. ಇಂಟರ್ ಪಾಸು ಮಾಡಿದೆ ಯಶಸ್ವಿಯಾಗಿ.

ಚಿತ್ರದುರ್ಗ ಕಾಲೇಜು ಜೀವನ ಅವಿಸ್ಮರಣೀಯವಾದದ್ದು. ಅದಕ್ಕೆ ಕಾರಣದಾರವರು ನುರಿತ ಉತ್ತಮ ಅಧ್ಯಾಪಕರು ಮತ್ತು ನನ್ನ ಆತ್ಮೀಯ ಮಿತ್ರರು. ನನ್ನ ಸ್ನೇಹಿತರೆಲ್ಲರೂ ಓದುವ ಗೀಳುಳ್ಳವರಾಗಿದ್ದರು. ಅವರ ಸಹವಾಸದಿಂದ ನಾನು ಅನೇಕ ಪಠ್ಯೇತರ ಕನ್ನಡ, ಇಂಗ್ಲಿಷ್ ಪುಸ್ತಕಗಳನ್ನು ಓದಿದೆ. ಒಂದು ಬಗೆಯ ಸ್ಪರ್ಧೆಯೇ ನಡೆಯುತ್ತಿತ್ತು ಓದುವುದರಲ್ಲಿ. ಅಂತಹವರಲ್ಲಿ ನನ್ನ ಆತ್ಮದಾತ ಆಗಿದ್ದವರು ತುರುವನೂರು ಜಿ. ಎಸ್. ಈಶ್ವರಪ್ಪ ಮತ್ತು ಶ್ರೀರಾಂಪುರದ ಪಿ. ಈಶ್ವರಾಚಾರಿ (ಈತ ಈಗ ದಿವಂಗತ) ನಾವು ಮೂವರೂ ಕ್ಲಾಸ್‌ಮೇಟ್‌ಗಳು, ಈಶ್ವರಪ್ಪ ನಾನು ಜಯದೇವ ಹಾಸ್ಟೆಲ್‌ನಲ್ಲಿದ್ದೆವು. ಈಶ್ವರಾಚಾರಿ ನಮ್ಮ ಹಾಸ್ಟೆಲಿನ ಎದುರಿಗಿದ್ದ ಅನಾಥಾಲಯದಲ್ಲಿದ್ದ. ಈಶ್ವರಾಚಾರಿ ತುಂಬಾ ಮೇಧಾವಿ ವಿಶ್ವಕರ್ಮ; ಪ್ರತಿಭಾವಂತ. ಅವನ ಅಕ್ಷರಗಳು ಇಂಗ್ಲಿಷ್ ಕನ್ನಡ ಎರಡೂ ಮುತ್ತಿನಂತೆ; ಕಣ್ಣಿಗೆ ಒತ್ತಿಕೊಳ್ಳುವಂತೆ ಇರುತ್ತಿದ್ದವು. ಆತನೇ ನನ್ನ ಕಾವ್ಯಗುರು! ನನ್ನಲ್ಲಿನ ಪ್ರತಿಭೆ ಗುರುತಿಸಿ ಕವನ ರಚಿಸಲು ಪ್ರೋತ್ಸಾಹಿಸಿದ. ಅದಕ್ಕೊಂದು ಘಟನೆ ಕಾರಣವಾಯಿತು.

ನಾವು ಹಾಸ್ಟೆಲ್ ವಿದ್ಯಾರ್ಥಿಗಳು ವಾರಕ್ಕೊಮ್ಮೆ ಭಾನುವಾರ ಊರಾಚೆ ಇದ್ದ ಕುರುವರ್ತಿಗೆ (ಅದೊಂದು ಕೊಳವಿದ್ದ ಸ್ಥಳ) ಹೋಗುತ್ತಿದ್ದೆವು. ಬಟ್ಟೆ ತೊಳೆದುಕೊಂಡು ಚೆನ್ನಾಗಿ ಸ್ನಾನ ಮಾಡಿ ಬರುತ್ತಿದ್ದೆವು. ಒಂದು ಭಾನುವಾರ ನನ್ನ ಸಹಪಾಠಿ ಹಾಸ್ಟೆಲ್‌ನ ಊಟಾಟಿ ನಂಜುಂಡಪ್ಪ ಎಂಬುವನು ಬಟ್ಟೆ ತೊಳೆದು ಒಣಗಹಾಕಿ, ಸ್ನಾನ ಮಾಡಿ

ಬಂದವನೆ ಬೀಡಿ ಹಚ್ಚಿದ. ಅವನಿಗೆ ಬೀಡಿ ಸೇದೋ ಚಟ ಇತ್ತು. ಕಡ್ಡಿ ಕೆರೆದು ಬೀಡಿ ಹಚ್ಚಿ ಉರಿಯುತ್ತಿದ್ದ ಕಡ್ಡಿಯನ್ನು ದೂರ ಎಸೆದ. ಅದು ಅವನ ಒಣಹಾಕಿದ ಬಟ್ಟೆ ಮೇಲೆ ಬಿದ್ದು ಬಟ್ಟೆ ಸುಡಹತ್ತಿತು. ನಾವು ಮೂರುನಾಲ್ಕು ಜನ ಸ್ನೇಹಿತರು ಸ್ನಾನ ಮಾಡಿ ಬಂದು 'ಏನು ಬಟ್ಟೆ ಸುಟ್ಟ ವಾಸನೆ ಬರುತ್ತಿದೆಯಲ್ಲಾ' ಎಂದು ನೋಡಿದೆವು. ನೋಡಿದರೆ ಅವನ ಬಟ್ಟೆಗಳೆಲ್ಲಾ ಸುಟ್ಟಿದ್ದು ಕಂಡಿತು. ನಂಜುಂಡಿಗೆ ಅಳು ಬಂತು. ಆದರೆ ನನಗೆ ನಗು. ಹಾಸ್ಟೆಲಿಗೆ ಬಂದವನೆ ಕಂಡ ಆ ಬಟ್ಟೆಸುಟ್ಟ ಸನ್ನಿವೇಶ, ನಂಜುಂಡಿಯ ಮನಸ್ಥಿತಿ ಕುರಿತು ಒಂದು ಪದ್ಯ ಬರೆದು, ಹಾಸ್ಟೆಲಿನ ನೋಟೀಸ್ ಬೋರ್ಡಿಗೆ ಅಂಟಿಸಿದೆ. ರಾತ್ರಿ ಊಟಕ್ಕೆ ಬಂದಾಗ ಹಾಸ್ಟೆಲ್‌ನ ಎಲ್ಲಾ ಮಿತ್ರರು ಓದಿಕೊಂಡು ನಂಜುಂಡಿಯನ್ನು ಗೇಲಿ ಮಾಡ ಹತ್ತಿದರು. ನಂಜುಂಡಿಗೆ ಬಟ್ಟೆಗಳು ಸುಟ್ಟುಹೋದ ಹೊಟ್ಟೆ ಉರಿ, ಇಲ್ಲಿ ನನ್ನ ಪದ್ಯದಿಂದಾದ ಪ್ರಚಾರ ಇವುಗಳಿಂದಾಗಿ ಸಿಟ್ಟುಬಂತು. ನನ್ನ ಕವಿತೆಯನ್ನು ಕಿತ್ತುಕೊಂಡು ದೊಡ್ಡಪೇಟೆಯಲ್ಲಿದ್ದ ಹಾಸ್ಟೆಲಿನ ಕಾರ್ಯದರ್ಶಿ ಮನೆಗೆ ಹೋಗಿ ದೂರು ಕೊಟ್ಟ. ಕಾರ್ಯದರ್ಶಿಗಳು ನನಗೆ ಮೂರು ದಿನ ಹಾಸ್ಟೆಲ್ ಊಟ ಕೊಡಕೂಡದೆಂದು ಆಜ್ಞೆ ಮಾಡಿದರು. ನಡೆದ ವಿಚಾರವನ್ನು ಈಶ್ವರಾಚಾರಿಗೆ ಹೇಳಿದೆ. ಅವನು ಆ ಕವನ ಓದಿ ಬೈದ. 'ಮರುಳಯ್ಯ, ನಿನ್ನಲ್ಲಿ ಪ್ರತಿಭೆ ಇದೆ. ಅದನ್ನು ಸದುಪಯೋಗ ಮಾಡಿಕೊ. ಈ ರೀತಿ ವ್ಯಂಗ್ಯ, ವಕ್ರಗೀತೆ ಬೇಡ, ಒಳ್ಳೊಳ್ಳೆಯ ವಸ್ತು ಚಿಂತನೆ ಮಾಡಿ. ನಿನಗೆ ಆಗ ಏನನ್ನಿಸುತ್ತೋ ಅದನ್ನು ಬರೆ. ಬರೆಯುವಾಗ ಗಣ ಪ್ರಾಸ ಅಂತಾ ಒದ್ದಾಡಬೇಡ. ಕ್ರಮೇಣ ನಿನ್ನದೇ ಹಾದಿ ನಿನಗೆ ಸಿಗುತ್ತೆ ಬರಿ' ಅಂದ. ಈಶ್ವರಾಚಾರಿಯ ಮಾತು ನನಗೆ ಹಿಡಿಸಿತು. ಅದೇ ಉಪದೇಶ ಎಂದು ಭಾವಿಸಿದೆ. ಅಂದಿನಿಂದ ಬರೆಯತೊಡಗಿದೆ.

ನಾನು ನನ್ನ ವಿದ್ಯಾರ್ಥಿ ಜೀವನದಲ್ಲಿ ವ್ಯರ್ಥ ಕಾಲಹರಣ ಮಾಡುತ್ತಿರಲಿಲ್ಲ. ತಿಪಟೂರು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಹಿಂದಿ ಶಿಕ್ಷಣ ಪಡೆದು ರಾಷ್ಟ್ರಭಾಷಾ ಪರೀಕ್ಷೆ ಪಾಸು ಮಾಡಿದ್ದೆ. ಚಿತ್ರದುರ್ಗಕ್ಕೆ ಬಂದಾಗ ಟೈಪ್‌ರೈಟಿಂಗ್ ಕಲಿತು ಜೂನಿಯರ್ ಪಾಸು ಮಾಡಿದ್ದೆ. ಇವು ನನಗೆ ಮುಂದೆ ಸಹಾಯವಾದವು. ರಜಾ ದಿನಗಳಲ್ಲಿ ನಾನು ಕೆಲಸ ಹುಡುಕಿಕೊಂಡು ಹೋಗುತ್ತಿದ್ದೆ. ಜೂನಿಯರ್ ಇಂಟರ್ ಪರೀಕ್ಷೆ ಆದ ಮೇಲಿನ ಬೇಸಿಗೆ ರಜೆಯಲ್ಲಿ ಜೋಗ್‌ಗೆ ಹೋದೆ. ಯಾರೋ ಹೇಳಿದರು. ಅಲ್ಲಿ ಹಂಗಾಮಿ ಕೆಲಸ ಸಿಗುತ್ತೆ ಎಂದು. ನಾನು ನೇರವಾಗಿ ಹೀರೇಭಾಸ್ಕರ್ ಡ್ಯಾಂ ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಹೋದೆ. ಓರ್ವ ಇಂಜಿನಿಯರ್ ಅಲ್ಲಿನ ಕೆಲಸ ಮುಗಿದಿದೆ. ನೀವು ಜೋಗಿಗೆ ಹೋಗಿ ಎಂದು ಹೇಳಿ ತಮ್ಮ ಮನೆಯಲ್ಲಿ ಊಟ ಹಾಕಿ, ಇಲಾಖೆಯ ಲಾರಿಯೊಂದರಲ್ಲಿ ಕೂರಿಸಿ ಕಳುಹಿಸಿದರು. ಜೋಗ್ ಗೊತ್ತಿಲ್ಲದ ಜಾಗ. ಬಂದೆ. ಎರಡು ದಿನ ಅಲೆದು ನದಿಯ ಮಡಿಲಲ್ಲಿದ್ದ ಜನರೇಟಿಂಗ್ ಸ್ಟೇಷನ್‌ನಲ್ಲಿ ಒಂದು ಕೆಲಸ ಗಿಟ್ಟಿಸಿಕೊಂಡೆ. ಒಬ್ಬರು ಇಂಜಿನಿಯರ್‌ರವರ ಕೈಕೆಳಗೆ ದಿನಗೂಲಿ (Daily wages) ಒಂದೂವರೆ

ರೂಪಾಯಿಯಂತೆ ಕೆಲಸ ಮಾಡತೊಡಗಿದೆ. ಭಾನುವಾರ ರಜಾ ಇದ್ದದ್ದರಿಂದ ಆ ದಿನ ಕೂಲಿ ಇಲ್ಲ. ವಾರಕ್ಕೆ ಕೇವಲ ಆರು ದಿನ ಮಾತ್ರ. ಸಾಮಾನ್ಯ ರಜೆಗಳಲ್ಲೂ ಕೂಲಿ ಇರುತ್ತಿರಲಿಲ್ಲ. ಆದರೂ ಕೆಲವು ಪುಡಿಗಾಸು ಕೂಡಿಸಿಕೊಂಡು ಸೀನಿಯರ್ ಇಂಟರ್ ಮೀಡಿಯೇಟ್ ಓದಲು ಬಂದೆ. ಸೀನಿಯರ್ ಪರೀಕ್ಷೆ ಆದಮೇಲೆ ಬೇಸಗೆಯಲ್ಲಿ ಎಲ್ಲೂ ಕೆಲಸ ಸಿಗಲಿಲ್ಲ. ಒಬ್ಬರು ನಿವೃತ್ತ ಶೇಕ್‌ದಾರರು ತಮ್ಮ ತೋಟಕ್ಕೆ ಕರೆದುಕೊಂಡು ಹೋದರು. ಅವರ ತೋಟ ನಮ್ಮೂರಿಗೆ ಸುಮಾರು ೨೦–೩೦ ಕಿ.ಮೀ. ದೂರದಲ್ಲಿತ್ತು. ಅವರ ತೋಟದಲ್ಲಿ ತೋಟದ ಕೆಲಸ, ಉಳುವುದು, ಹೊಲ ಕೊಯ್ಯುವುದು, ತೆಂಗಿನ ಕಾಯಿ ಕೀಳಿಸಿ ಅಟ್ಟಕ್ಕೆ ತುಂಬಿಸುವುದು – ಇದೇ ಮೊದಲಾದ ಕೆಲಸ ಮಾಡಿದೆ. ಅವರು ಸಂಬಳ ಕೊಡಲಿಲ್ಲ. ಒಂದು ಜೊತೆ ಬಟ್ಟೆ ಕೊಟ್ಟರು. ಊರಿಗೆ ಹೋಗ್ತೇನೆ ಅಂತಾ ಹೇಳಿ ಬಂದೆ. ನಾನು ಒಣಗಿದ ಸೀಗೆಕಾಯಿಯಂತಾಗಿದ್ದೆ. ನಮ್ಮಮ್ಮ ನನ್ನನ್ನು ಅಪ್ಪಿಕೊಂಡು ಗೋಳೋ ಅಂತಾ ಅತ್ತಳು. ತನ್ನ ಮಗ ತುಂಬಾ ಸೊರಗಿದ್ದಾನೆ ಎಂದು ಅಂದುಕೊಂಡು ಅತ್ತಳು. ಮಗ ಎಲ್ಲೂ ಯಾರ ಬಳಿಗೂ ಕೂಲಿಯಾಳಾಗಿ ಹೋಗುವುದು ಬೇಡ ಅಂದಳು. ನಾನು ಇಂಟರ್‌ಮೀಡಿಯೇಟ್ ಪಾಸಾಗಿದ್ದೆ. 'ಮುಂದೆ ಓದು ನಾನಿದ್ದೇನೆ ಎಲ್ಲಿಯಾದರೂ ಭಿಕ್ಷೆ ಬೇಡಿ ನಿನ್ನನ್ನು ಓದಿಸುತ್ತೇನೆ' ಅಂದಳು ಅಮ್ಮ. ನಮ್ಮಯ್ಯನಿಗೆ ಕ್ಷಯರೋಗ ಕಾಲು ಹಾಕಿಕೊಂಡಿತು. ಕ್ಷಯ ಆ ದಿನಗಳಲ್ಲಿ ಗುಣಕಾಣದ ರೋಗವಾಗಿತ್ತು. ನಮ್ಮಮ್ಮ ಕೂಲಿನಾಲಿ ಮಾಡಿ, ತಲೆಮೇಲೆ ಎಲೆ ಅಡಿಕೆ ಹೊಗೆಸೊಪ್ಪು ಹೊತ್ತುಕೊಂಡು ಸಾಸಲು ಗೊಲ್ಲರಹಟ್ಟಿ, ಕೆಲವು ಪಾಳ್ಯಗಳಿಗೆ ಹೋಗಿ ಮಾರಿಕೊಂಡು ಬಂದ ದುಡ್ಡಿಗೆ ಬೆಣ್ಣೆ ತರುತ್ತಿದ್ದಳು. ಆ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡಿ ಸೋಮವಾರ ಚಿಕ್ಕನಾಯಕನಹಳ್ಳಿಯಲ್ಲಿ ಸಂತೆ ಸೇರುವ ಮೊದಲು ಪೇಟೆಯೊಳಗೆ ಮಾರಿಕೊಂಡು ಬಂದು, ಬಂದ ಹಣದಲ್ಲಿ ಅಂಗಡಿ ಸಾಮಾನು ತಂದು ವ್ಯಾಪಾರ ಮಾಡುತ್ತಿದ್ದಳು. ನಮ್ಮ ಜೀವನ, ನನ್ನ ತಂದೆಯ ರೋಗಕ್ಕೆ ಮಾತ್ರ ಔಷಧಿಗಳು ಹೇಗೋ ನಡೆಯುತ್ತಿದ್ದವು.

ನಾನು ಶೇಕ್‌ದಾರರ ತೋಟದಲ್ಲಿ ಹೆಚ್ಚು ದಿನ ಇರಲಿಲ್ಲ. ಇಂಟರ್‌ಮೀಡಿಯೇಟ್ ಪರೀಕ್ಷೆ ಆದ ಮೇಲೆ ಸಾಕಷ್ಟು ದಿನಗಳ ಬಿಡುವು ಇದ್ದದ್ದರಿಂದ ನಾನು ಚಿಕ್ಕನಾಯಕನಹಳ್ಳಿಗೆ ಹೋದೆ. ಅಲ್ಲಿ ನಮ್ಮ ಸೋದರ ಮಾವ ಎಸ್. ನಾಗಪ್ಪನವರು ಇದ್ದರು. ಅವರು ಮ್ಯಾಂಗನೀಸ್ ಗಣಿ ಕಂಟ್ರಾಕ್ಟರಾಗಿದ್ದರು. ಚಿಕ್ಕನಾಯಕನಹಳ್ಳಿಯ ಮೂಡಲಗುಡ್ಡದ ತುಂಬಾ ಮ್ಯಾಂಗನೀಸ್ ಸಿಗುತ್ತಿತ್ತು. ನಾನು ಅವರಲ್ಲಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡೆ. ನೂರಾರು ಜನ ಗಣಿ ಕೆಲಸದವರ ಲೆಕ್ಕ ಬರೆಯುವುದು, ಅವರಿಗೆ ವಾರಕ್ಕೊಮ್ಮೆ ಬಟವಾಡೆ ಮಾಡುವುದು ನನ್ನ ಭಾಗದ ಕೆಲಸ. ನಾಗಪ್ಪ ಮಾವನವರ ಮನೆಯಲ್ಲೇ ಊಟ, ವಸತಿ, ತಿಂಗಳಿಗೊಮ್ಮೆ ಸಂಬಳ, ಇಷ್ಟೆಲ್ಲ ಇದ್ದ ಮೇಲೆ ನೀನು ಧೈರ್ಯವಾಗಿ ಮೈಸೂರಿಗೆ ಹೋಗು. ಎಂ.ಎ. ಪಾಸು ಮಾಡಿಕೊಂಡು ಬಾ ಅಂದರು ಅಮ್ಮ. ಆಗಿದ್ದದ್ದು

ಮೈಸೂರು ವಿಶ್ವವಿದ್ಯಾಲಯ ಮಾತ್ರ. ಬಿ.ಎಸ್‌ಸಿ., ಎಂ.ಎಸ್.ಸಿ. ಬೆಂಗಳೂರು, ಬಿ.ಎ., ಎಂ.ಎ. ಮೈಸೂರು – ಇವೆರಡೇ ಕಡೆ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆ ಇದ್ದದ್ದು. ನನಗೆ ಕನ್ನಡದಲ್ಲಿ ಎಂ.ಎ. ಪಾಸು ಮಾಡಬೇಕು; ಶ್ರೀ ಕುವೆಂಪು ಅವರ ಶಿಷ್ಯನಾಗಬೇಕು ಎಂಬ ಆಸೆ, ಚಿತ್ರದುರ್ಗದಲ್ಲಿ ಓದುವಾಗ ಹಲವು ಪಠ್ಯೇತರ ಪುಸ್ತಕಗಳನ್ನು ಓದಿದಾಗಿನಿಂದಲೂ ತುಂಬಿತ್ತು. ನನ್ನ ಆಸೆಯನ್ನು ನನ್ನ ಪೂಜ್ಯ ತಂದೆ ತಾಯಿಯರ ಮುಂದಿಟ್ಟೆ. ಅಯ್ಯ ನಿಸ್ಸಹಾಯಕರಾದ್ದರಿಂದ ಅಮ್ಮನ ಮೇಲೆ ಹಾಕಿದರು. ಅಮ್ಮ ಒಪ್ಪಿ ಕಳುಹಿಸಿದರು.

ನನಗೆ ಚಿಕ್ಕಂದಿನಲ್ಲಿ ಗಾಂಧಿ ದರ್ಶನ ಮಾಡಿಸಿದ ನಮ್ಮ ದೊಡ್ಡಪ್ಪನವರ ಬಳಿಗೆ ಕಳುಹಿಸಿದರು ನಮ್ಮಯ್ಯ. ನಾನು ಬೆಂಗಳೂರಿಗೆ ಬಂದು ನಮ್ಮ ದೊಡ್ಡಪ್ಪ ಸಿದ್ಧಾಂತಿ ಗುರುಬಸವ ಶಾಸ್ತ್ರಿಗಳನ್ನು, ಚಿಕ್ಕಪೇಟೆ ದಿವಾನ್‌ಖಾನೆಯಲ್ಲಿದ್ದ ಅವರ ಮನೆಯಲ್ಲಿ ಕಂಡೆ. ಅದೇ ನಾನು ಬೆಂಗಳೂರನ್ನು ಮೊದಲು ಕಂಡದ್ದು. ಅವರು ಚೆನ್ನಾಗಿ ಕಂಡು, 'ಭೇಷ್, ನೀನು ಮೈಸೂರಿಗೆ ಹೋಗು. ಅಲ್ಲಿ ನನ್ನ ಶಿಷ್ಯ ಹೆಚ್. ಎನ್. ಪಾಳೇಗಾರ್ ಅಂತಾ ಇದಾರೆ. ಅವರು ಜಿಲ್ಲಾಧಿಕಾರಿಗಳಾಗಿದ್ದರು. ಈಗ ಮೈಸೂರು ಮಹಾರಾಜರಿಗೆ ಹುಜೂರ್ ಸೆಕ್ರೆಟರಿ ಆಗಿದ್ದಾರೆ. ಅವರಿಗೆ ಈ ಪತ್ರ ಕೊಡು, ನಿನ್ನ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡ್ತಾರೆ' ಎಂದು ಹೇಳಿ ಒಂದು ಪತ್ರ ಕೊಟ್ಟರು. ನಾನು ಮಾರನೇ ದಿನವೇ ಮೈಸೂರಿಗೆ ಹೋದೆ. ಪಾಳೇಗಾರರ ಮನೆ ಹುಡುಕಿಕೊಂಡು ಹೋದೆ. ಮನೆಯಲ್ಲಿ ಸಾಹೇಬರಿರಲಿಲ್ಲ. ಮನೆಯ ಮಂದೆ ಕಾವಲುಗಾರ ಇದ್ದ. 'ಬುದ್ದಿಯವರು ಸ್ವಲ್ಪ ಹೊತ್ತಿನಲ್ಲಿ ಬರ್ತಾರೆ ಇಲ್ಲೇ ಮರದ ಕೆಳಗೆ ಕೂತಿರಿ. ಕಾರು ಬಂದ ಕೂಡಲೇ ನಿಮಗೆ ಸಂಜ್ಞೆ ಮಾಡ್ತೇನೆ. ಬಂದು ನೋಡಿ' ಅಂದ. ಸುಮಾರು ಒಂದು ಅಥವಾ ಒಂದೂವರೆ ಗಂಟೆ ಕಾದೆ. ಬುದ್ದಿಯವರ ಕಾರು ಬಂತು. ಸಂಜ್ಞೆ ಮಾಡಿದ ಜವಾನ. ಕಾರಿನ ಡೋರ್ ತೆರೆದ. ನಾನು ಸರಸರ ಹೋಗಿ, 'ಸಾರ್, ನಾನು ಬೆಂಗಳೂರಿಂದ...' ಅಂದೆ. ಪಾಳೇಗಾರರು ನನ್ನ ಮುಖ ನೋಡಿ ಯಾವನೋ ಭಿಕ್ಷುಕ ಅಂತಾ ತಿಳಿದರೋ ಏನೋ! 'ಲೋ ಯಾಕೋ ಇವರನ್ನೆಲ್ಲ ಮನೆ ಹತ್ರಾ ಬಿಡ್ತೀಯ. ಕಳಿಸೋ ಆಚ್ಗೆ' ಅಂತ ಆಜ್ಞೆ ಮಾಡಿ ಒಳಗೆ ಹೊರಟರು. ನಾನು ಬಿಡಲಿಲ್ಲ, 'ಸ್ವಾಮಿ, ನಾನು ಭಿಕ್ಷುಕ ಅಲ್ಲ, ಓರ್ವ ವಿದ್ಯಾರ್ಥಿ. ನಮ್ಮ ದೊಡ್ಡಪ್ಪ ಕಾಗದ ಕೊಟ್ಟಿದ್ದಾರೆ. ದಯವಿಟ್ಟು ನೋಡಿ' ಅಂದೆ. ಅವರಿಗೆ ನನ್ನ ಗಟ್ಟಿ ಮಾತು ಸಿಟ್ಟು ತಂದಿತೆಂದು ತೋರುತ್ತೆ ಅಥವಾ ವೈಯಕ್ತಿಕ ಕಾರಣವೊ ಏನೋ ರೇಗಿ 'ಲೋ ಇವನನ್ನು ಒದ್ದು ಆಚೆಗೆ ನೂಕೋ' ಎಂದು ಅಪ್ಪಣೆ ಕೊಡಿಸಿ ಒಳಗೆ ದಯಮಾಡಿಸಿದರು. (ಇಂಥದೇ ಒಂದು ಅನುಭವ ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರಿಗೂ ಆಗಿದ್ದನ್ನು ನಾನು ಇತ್ತೀಚೆಗೆ ಓದಿದ್ದೇನೆ.) ನಾನು ಪೆಚ್ಚಾಗಿ ನಿಂತಲ್ಲೇ ನಿಂತೆ. ಜವಾನ ಬಂದು, 'ಅಪ್ಪಾ, ಬಡವನ ಕೋಪ ದವಡೆಗೆ ಮೂಲ ಅಂತಾ ಗಾದೆ. ಹೆಚ್ಚೇನೂ ಮಾತಾಡಬೇಡ. ಹೋಗು

ದೇವರಿದ್ದಾನೆ. ನಮ್ಮ ಬುದ್ಧಿಯೋರು ದೇವರಂಥಾ ಮನುಷ್ಯರು. ಆದರೆ ಇವೊತ್ತು ಯಾಕೋ ಕೆಂಡ ಆಗಿಬಿಟ್ಟಿದ್ದಾರೆ. ನಿನ್ನ ಗ್ರಾಚಾರ ಚೆನ್ನಾಗಿಲ್ಲ ಅಂತಾ ಕಾಣುತ್ತೆ. ನೀನು ವಿದ್ಯಾರ್ಥಿ ಅಂದೆ. ವಿದ್ಯಾಭ್ಯಾಸ ಮಾಡೋದು ಮಾತ್ರ ಬಿಡಬೇಡ. ದೇವರು ಒಳ್ಳೇದು ಮಾಡಲಿ' ಎಂದು ತಲೆದಡವಿ ಕಳುಹಿಸಿದ. ನಾನು ಒದ್ದೆಗಣ್ಣವನಾಗಿ ಮೈಸೂರಿನ ನೂರಡಿ ರಸ್ತೆ ಪಕ್ಕದ ಡಿ. ಸುಬ್ಬಯ್ಯ ರೋಡಿನ ಶೆಟ್ಟೀಕೆರೆ ಶಂಕರಲಿಂಗಪ್ಪನವರ ಮನೆ ಹುಡುಕಿಕೊಂಡು ಹೋದೆ. ಮನೆ ಸಿಕ್ಕಿತು. ಶಂಕರಲಿಂಗಪ್ಪನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿಗಳಾಗಿದ್ದರು. ಅವರೂ ಶೆಟ್ಟೀಕೆರೆಯವರು. ನನ್ನ ತಾಯಿಯ ತವರುಮನೆಯ ಪಕ್ಕದ್ದೇ ಅವರ ಮನೆ. ಅವರನ್ನು ಚಿಕ್ಕಂದಿನಲ್ಲಿ ಎಂದೋ ನೋಡಿದ ನೆನಪು. ಹೋದೆ. ಅವರನ್ನು ಕಂಡು ಕಥೆ ಹೇಳಿದೆ. ಅವರು ಕನಿಕರಿಸಿ, ಕಾಲೇಜಿಗೆ ಸೇರಿಕೊಳ್ಳಿ. ಸುತ್ತೂರು ಜಗದ್ಗುರುಗಳಿಗೆ ಹೇಳಿ ಒಂದು ಹಾಸ್ಟೆಲ್ ಸೀಟು ಕೊಡಿಸೋಣ. ಆದರೆ ಹಾಸ್ಟೆಲ್ ಆರಂಭವಾಗುವುದು ಇನ್ನೂ ಎರಡು ಮೂರು ತಿಂಗಳು ಆಗುತ್ತೆ. ಗವಿಮಠದ ಪೂಜ್ಯ ಶ್ರೀ ಗೌರಿಶಂಕರ ಸ್ವಾಮಿಗಳಿಗೆ ಕ್ಯಾನ್ಸರ್ ಆಗಿ ವೆಲ್ಲೂರು ಆಸ್ಪತ್ರೆ ಸೇರಿದ್ದಾರೆ. ನಮ್ಮ ಸುತ್ತೂರು ಜಗದ್ಗುರುಗಳು ಅವರ ಆರೋಗ್ಯದ ಬಗ್ಗೆ ತುಂಬಾ ಹಚ್ಚಿಕೊಂಡು ವೆಲ್ಲೂರಿನಲ್ಲೇ ಇದ್ದಾರೆ. ಹಾಸ್ಟೆಲ್ ಆರಂಭ ತಡವಾಗುತ್ತೆ. ಅಲ್ಲಿಯವರೆಗೆ ಊಟ, ವಸತಿ ಏನು ಮಾಡಿಕೊಳ್ಳುತ್ತೀರಿ?' ಅಂದರು. 'ಸಾರ್ ನನಗೆ ವಾರಾನ್ನ ಮಾಡಿ ಉಂಡ ಅನುಭವವಿದೆ. ತಮಗೆ ಗೊತ್ತಿರುವ ಏಳು ಮನೆಗಳ ವಿಳಾಸ ಕೊಡಿ, ಪತ್ರ ಕೊಡಿ' ಅಂದೆ. ಪತ್ರ ಕೊಟ್ಟರು. ಅವರದೂ ಒಂದು ಮನೆ ಸೇರಿ ಏಳು ಮನೆ ಸಿಕ್ಕಿದವು. ಚಾಮುಂಡಿಪುರದಲ್ಲಿ ಒಂದು, ಸರಸ್ವತಿಪುರದಲ್ಲಿ ಒಂದು. ಹೀಗೆ ದಿಕ್ಕು ದಿಕ್ಕುಗಳಲ್ಲಿ ವಾರಾನ್ನ. ಎಲ್ಲಾ ಮನೆಯ ತಾಯಂದಿರು ತಮ್ಮ ಮಗನಂತೆ ನೋಡಿಕೊಂಡರು. ಒಂದು ಮನೆಯ ಅಜ್ಜಿ ತಮ್ಮ ಸೊಸೆಗೆ ಹೇಳಿತ್ತಂತೆ. 'ಅಮ್ಮ, ವಾರಾನ್ನದ ವಿದ್ಯಾರ್ಥಿ ನಾಡಿದ್ದು ಬರ್ತಾನೆ. ಅವನಿಗೆ ಈ ದಿನದ ಹಬ್ಬದ ಸಿಹಿ ತೆಗೆದಿಡಮ್ಮ ಮರೆಯಬೇಡ, ಪಾಪ, ಎಲ್ಲಿ ತಿನ್ನಬೇಕು ಬಡಮಕ್ಕಳು!' ಎಂದಂದು ತೆಗೆಸಿಟ್ಟಿದ್ದರಂತೆ. ನಾನು ಹೋದ ಕೂಡಲೇ ಊಟ ಆದ ಮೇಲೆ ಒಂದು ಪೊಟ್ಟಣದಲ್ಲಿ ಸಿಹಿ ಕೊಡಿಸಿತು. ಇಂತಹ ಅವ್ಯಾಜ ಪ್ರೇಮ ವಾತ್ಸಲ್ಯ ನನ್ನ ಬದುಕನ್ನು ತುಂಬಿತು. ನನ್ನ ಶಿಕ್ಷಣ ವೆಚ್ಚಕ್ಕೆ ನನ್ನ ಆರಾಧ್ಯ ದೈವ ಸ್ವರೂಪರೂ, ನನಗೆ ಜಂಗಮ ದೀಕ್ಷೆಯಿತ್ತ ದೀಕ್ಷಾಗುರುಗಳೂ ಆದ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕುಪ್ಪೂರು ಗದ್ದಿಗೆಯ ಮಠಾಧಿಪತಿಗಳಾದ ಷಟ್‌ಸ್ಥಲ ಬ್ರಹ್ಮಿ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಇಪ್ಪತ್ತೈದು ರೂಪಾಯಿಗಳನ್ನು ಆಶೀರ್ವಾದಪೂರ್ವಕವಾಗಿ ಕೊಟ್ಟು, ನಮ್ಮೂರಿನ ಎಸ್. ಕೆ. ಚೆನ್ನವೀರಪ್ಪನವರಿಗೆ ತಿಂಗಳಿಗೆ ೧೫ ರೂಪಾಯಿಗಳನ್ನು ನನಗೆ ಕಳುಹಿಸಿಕೊಡುವಂತೆ ಅಪ್ಪಣೆ ಮಾಡಿದರು. ಚೆನ್ನವೀರಪ್ಪನವರು ಆಗರ್ಭ ಶ್ರೀಮಂತರು, ಅಷ್ಟೇ ಪ್ರಮಾಣದ ಹೃದಯ ಶ್ರೀಮಂತಿಕೆ ಉಳ್ಳವರು. ದಯಾಳುವಾದ ಅವರು 'ತಿಂಗಳಿಗೆ ಹದಿನೈದು ರೂಪಾಯಿಗಳಂತೆ ನಿಮ್ಮ

ಬಿ.ಎ. ಆನರ್ಸ್ ಓದುವತನಕ ಕಳುಹಿಸುತ್ತೇನೆ. ದಾಖಲೆಗೆ ನಿಮ್ಮ ತಂದೆಯವರು ಒಂದು ಪತ್ರ ಬರೆದುಕೊಡಲಿ. ನೀವು ನಿಮ್ಮ ವಿದ್ಯಾಭ್ಯಾಸ ಮುಗಿದು, ಕೆಲಸಕ್ಕೆ ಸೇರಿದ ಮೇಲೆ ತಿಂಗಳಿಗೆ ಇಷ್ಟು ಅಂತಾ ತೀರಿಸಿ. ಆದರೆ ನನ್ನ ಹಣಕ್ಕೆ ಬಡ್ಡಿಬೇಡ' ಅಂದರು. ಅದೇ ರೀತಿ ನಡೆಸಿದರು. ನನ್ನ ಮೂರು ವರ್ಷದ ಬಿ.ಎ. (ಆನರ್ಸ್) ಓದಿಗೆ ಒಟ್ಟು ಆರುನೂರ ಎಂಬತ್ತು ರೂಪಾಯಿಗಳ ಸಾಲ ಆಗಿತ್ತು. ಅದನ್ನು ನಾನು ತುಮಕೂರಿನ ಪ್ರಥಮ ದರ್ಜೆ ಕಾಲೇಜಿಗೆ ಅಧ್ಯಾಪಕನಾಗಿ ಬಂದ ಮೇಲೆ ನನ್ನ ೧೧೦ ರೂ. ಸಂಬಳ, ೨೦೦ ಆಯಿತು. ಅದರ ಪೂರ್ವಾನ್ವಯವಾಗಿ ಬಂದ ಹಣ ಸಾಲ ತೀರಿಸಲು ಸಮ ಆಯಿತು. ಸಾಲ ತೀರಿಸಿದೆ; ನನ್ನ ತಂದೆಯವರನ್ನು ಋಣಮುಕ್ತರನ್ನಾಗಿ ಮಾಡಿದೆ. ಶ್ರೀ ಚೆನ್ನವೀರಪ್ಪನವರು ನನ್ನ ಮೇಲಿಟ್ಟಿದ್ದ ಸೋದರ ಪ್ರೇಮಕ್ಕೆ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ದಿವಂಗತರಾಗಿರುವ ಅವರ ಪವಿತ್ರಾತ್ಮಕ್ಕೆ ಸಹಸ್ರ ನಮನಗಳನ್ನು ಸಲ್ಲಿಸುತ್ತೇನೆ.

ಮಹಾರಾಜಾ ಕಾಲೇಜು ನೋಡಿದಾಗ ನನಗೆ ಆಶ್ಚರ್ಯ, ಆನಂದ ಏಕ ಕಾಲದಲ್ಲಾದವು. ನಾನು ನೇರವಾಗಿ ಪ್ರೊ. ಕೆ.ವಿ. ಪುಟ್ಟಪ್ಪನವರನ್ನು ಅವರ ಕೊಠಡಿಯಲ್ಲಿ ನೋಡಿದೆ, 'ಒಳ್ಳೆಯದಾಗಲಿ, ಬನ್ನಿ' ಎಂದು ಆಶೀರ್ವದಿಸಿದರು. ನಾವು ಕೇವಲ ಆರು ಜನ ಮಾತ್ರ ಕನ್ನಡ ಆನರ್ಸ್‌ಗೆ ಸೇರಿದೆವು. ಹಾ. ಮಾ. ನಾಯಕ, ಜಿ.ಎಸ್. ಸಿದ್ಧಲಿಂಗಯ್ಯ, ಕೆ. ನಾಗೇಂದ್ರಪ್ಪ, ಕೆ.ಎಂ. ಮರಿಯಪ್ಪ, ಕೆ.ಎಂ. ಸೀತಾರಾಮಯ್ಯ ಮತ್ತು ನಾನು. ಸಿದ್ಧಲಿಂಗಯ್ಯ ಆ ವೇಳೆಗಾಗಲೇ ಪ್ರತಿಭಾವಂತ ಕವಿಯಾಗಿ ಹೆಸರಾಗಿದ್ದ. ಆತನ ಅನೇಕ ಕವನಗಳು ಪ್ರಜಾವಾಣಿ ಮೊದಲಾದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಚಿಕ್ಕಂದಿನಲ್ಲಿಯೇ ಪ್ರಬುದ್ಧತೆಗೇರಿದ ಕವಿ ಸಿದ್ಧಲಿಂಗಯ್ಯ ಸಹಧ್ಯಾಯಿ ಎಂದು ಹೇಳಿಕೊಳ್ಳುವಲ್ಲಿ ನನಗೆ ಹೆಮ್ಮೆ ಎನಿಸುತ್ತಿತ್ತು. ಒಳ್ಳೆಯ ಮಾತುಗಾರ ಹಾರಗದ್ದೆ ಮಾನಪ್ಪನಾಯಕ, ವಿಚಾರವಾದಿ ನಾಗೇಂದ್ರಪ್ಪ, ರಸಿಕ ಕತೆಗಾರ ಸೀತಾರಾಮಯ್ಯ, ಸಾತ್ವಿಕ ಸ್ವಭಾವದವನು ಮರಿಯಪ್ಪ, ಅವರ ನಡುವೆ ನಾನೊಬ್ಬ ಸಾರ್ಥಕ ಶಿರೋನಾಮೆಯ ಮರುಳ! ಡಿ.ಎಲ್. ನರಸಿಂಹಾಚಾರ್, ದೇಜಗೌ, ಕ.ವೆಂ. ರಾಘವಾಚಾರ್, ತ.ಸು. ಶಾಮರಾಯ, ಎಸ್.ವಿ. ಪರಮೇಶ್ವರಭಟ್ಟ, ಎಸ್.ವಿ. ರಂಗಣ್ಣ, ಡಾ. ಎಸ್. ಶ್ರೀಕಂಠಶಾಸ್ತ್ರಿ– ಇವರೇ ಮೊದಲಾದವರು ನಮ್ಮ ಗುರುಗಳಾಗಿದ್ದರು. ಕಾಲೇಜಿನ ವಾತಾವರಣ ಚೆನ್ನಾಗಿತ್ತು. ಅಷ್ಟೇ ಚೆನ್ನಾಗಿತ್ತು ನಮ್ಮ ಹಾಸ್ಟೆಲ್ ಪರಿಸರ. ನನಗೆ ಬನ್ನಿಮಂಟಪ ಹಾಸ್ಟೆಲ್‌ನಲ್ಲಿ ಸೀಟು ಸಿಕ್ಕಿತು. (ಅದೀಗ ಜೆ.ಎಸ್.ಎಸ್. ಡೆಂಟಲ್ ಕಾಲೇಜ್, ಮೆಡಿಕಲ್ ಕಾಲೇಜ್ ಆಗಿದೆ.)

ನನ್ನ ಜೊತೆಯಲ್ಲಿ ನನ್ನ ಸಹಪಾಠಿಗಳಾದ ಸಿದ್ಧಲಿಂಗಯ್ಯ, ನಾಗೇಂದ್ರಪ್ಪ ಇದ್ದರು. ನಾವು ಮೂವರು ಜೊತೆಯಲ್ಲೇ ಅಭ್ಯಾಸ ಮಾಡುತ್ತಿದ್ದೆವು. ಟಾರ್ ರಸ್ತೆಯ ಮೇಲೆ ರಾತ್ರಿ ಹೊತ್ತು ಕೇಶಿರಾಜನ ವ್ಯಾಕರಣ ಸೂತ್ರಗಳನ್ನು ಸೀಮೆಸುಣ್ಣದಲ್ಲಿ ಬರೆದು ಬಾಯಿಪಾಠ

ಮಾಡುತ್ತಿದ್ದುದು ನೆನಪು. ಟೀ ಕುಡಿದರೆ ನಿದ್ದೆ ಬರುವುದಿಲ್ಲ ಎಂದು ಹೇಳ್ತಾರೆ. ಬನ್ನಿ ಟೀ ಕುಡಿದು ಬರೋಣ ಅಂದು ನಮ್ಮ ಬನ್ನಿಮಂಟಪ ಹಾಸ್ಟೆಲ್‌ನಿಂದ ಎರಡು ಕಿ.ಮೀ. ದೂರ ಮೈಸೂರು ಸಿಟಿಗೆ ನಡೆದು ಹೋಗಿ ಟೀ ಕುಡಿದು ಅಷ್ಟೇ ದೂರ ನಡೆದು ಬಂದು ಮಲಗಿದ್ದೂ ಉಂಟು! ನಮ್ಮ ಹಾಸ್ಟಲಿಗೂ ಮಹಾರಾಜಾ ಕಾಲೇಜಿಗೂ ಸುಮಾರು ೭–೮ ಕಿ.ಮೀ. ದೂರ ಒಳ ಹಾದಿಯಲ್ಲಿ, ನಾವು ಅನೇಕ ವಿದ್ಯಾರ್ಥಿಗಳು ಬೆಳಗಿನ ಪ್ರಸಾದ ಆದ ಕೂಡಲೆ ಕಾಲೇಜು ಹಾದಿ ಹಿಡಿಯುತ್ತಿದ್ದೆವು. ಆ ದಿನಗಳು ನನಗೆ ನನ್ನ ಶೆಟ್ಟೀಕೆರೆ ಮಾಧ್ಯಮಿಕ ಶಾಲೆಗೆ ನಮ್ಮೂರಿನಿಂದ ಹೋಗುತ್ತಿದ್ದ ದಿನಗಳನ್ನು ನೆನಪಿಗೆ ತರುತ್ತಿದ್ದವು.

ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಂತಹ ಮಹಾಮೂರ್ತಿಯನ್ನು ನಾನು ಬೇರೆಲ್ಲೂ ಕಾಣೆ. ಅವರ ವಾತ್ಸಲ್ಯದ ವಕ್ಷದಲ್ಲಿ ನಾನು ಬೆಳೆದೆ. ಅವರ ಕೆಲವೇ ಜನ ಪ್ರೀತಿಯ ಶಿಷ್ಯರಲ್ಲಿ ನಾನೂ ಒಬ್ಬನಾಗಿದ್ದುದು ನನ್ನ ಭಾಗ್ಯ. ಅವರ ಹೃದಯ ದಯಾಸಾಗರ, ಅವರ ಕಣ್ಣುಗಳಲ್ಲಿ ಕರುಣೆಯ ಕಡಲುಗಳು ಉರುಳುತ್ತಿದ್ದವು. ನಾನು ಬನ್ನಿಮಂಟಪ ಹಾಸ್ಟೆಲಿಗೆ ಸೇರಿ ಕೆಲವೇ ದಿನಗಳಾಗಿದ್ದವು. ನಮ್ಮ ಹಾಸ್ಟಲಿನ ವಿದ್ಯಾರ್ಥಿ ಸಂಘದ ಚುನಾವಣೆ ಘೋಷಣೆಯಾಯಿತು.

ನನ್ನ ಮಿತ್ರ ಪುಟ್ಟಬುದ್ಧಿ ಎಂಬಾತ ನನ್ನನ್ನು ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸಿ ಮತದಾರರಿಗೆ ಬೇಕಾಗುವ ಕರಪತ್ರಗಳನ್ನು ತಾನೇ ಅಚ್ಚು ಹಾಕಿಸಿ ಹಂಚಿದ. ಹಾಸ್ಟೆಲಿನ ಕಂಬಗಳ ಮೇಲೆ, ಗೋಡೆಗಳ ಮೇಲೆ ನನ್ನನ್ನು ಚುನಾಯಿಸುವಂತೆ ಕೇಳಿಕೊಂಡು ಬಣ್ಣದಲ್ಲಿ ನನ್ನ ಹೆಸರು ಬರೆದಿದ್ದ. ನಾಳೆ ಚುನಾವಣೆ, ಹಿಂದಿನ ದಿನ ಸಂಜೆ ಜಗದ್ಗುರುಗಳು ಹಾಸ್ಟಲಿಗೆ ದಯಮಾಡಿಸಿದರು. ಗೋಡೆಗಳ ಮೇಲೆ ಬರೆದಿದ್ದ ನನ್ನ ಹೆಸರು ಓದಿ, 'ಆತನನ್ನು ಕರೆ' ಅಂದರಂತೆ, ಸಿದ್ದಪ್ಪ ಬಂದು, 'ಮರುಳಯ್ಯ ನೀನೇ ಏನಪ್ಪಾ? ಬಾ, ಜಗದ್ಗುರುಗಳು ಕರೀತಾರೆ. ಗೋಡೆ ಮೇಲೆಲ್ಲಾ ಗೀಚಿಸಿಕೊಂಡಿದ್ದೀಯಾ' ಅಂದ. ನನ್ನ ಜಂಘಾ ಬಲವೇ ಉಡುಗಿಹೋಯಿತು. ಊಟಕ್ಕೊಂದು ಅವಕಾಶ ಸಿಕ್ಕಿತ್ತು. ಅದಕ್ಕೂ ಕಲ್ಲು ಬಿತ್ತೇ ಅಂದುಕೊಂಡು ಹೋದೆ ನಡುನಡುಗುತ್ತಾ. ಪೂಜ್ಯರು ಊಟದ ಹಾಲ್‌ನಲ್ಲಿ ಕುರ್ಚಿ ಮೇಲೆ ಕುಳಿತಿದ್ದರು. ಹೋಗಿ ಪಾದ ಮುಟ್ಟಿ ನಮಸ್ಕಾರ ಮಾಡಿದೆ. ಸಿದ್ದಪ್ಪ, 'ಇವನೇ ಮರುಳಯ್ಯ' ಅಂದ. ಪೂಜ್ಯರು ನನ್ನನ್ನು ನೋಡಿ, 'ನೀನು ಪ್ರಚಾರ ಮಾಡು ನಿಮ್ಮ ಸ್ನೇಹಿತರಲ್ಲಿ. ಬೇಡ ಅನ್ನೊಲ್ಲ. ಆದರೆ ಗೋಡೆಗಳಿಗೆಲ್ಲ ಪ್ರಚಾರ ಮಾಡಿಬಿಟ್ಟಿದ್ದೀಯ! ಗೋಡೆ ಕೆಡಿಸಬಾರದು ಅಲ್ಲವೆ?' ನಾನು ಮೂಕನಾಗಿ ನಿಂತೆ. 'ಹೋಗು ಒಳ್ಳೆಯದಾಗಲಿ' ಅಂದರು. ಬದುಕಿದೆಯಾ ಬಡಜೀವವೇ ಎಂದು ಓಡಿಬಂದೆ ನನ್ನ ಕೊಠಡಿಗೆ. ಚುನಾವಣೆಯಲ್ಲಿ ಬಹುಮತ ಗಳಿಸಿ ವಿಜಯಿಯಾಗಿದ್ದೆ.

ಎರಡನೆಯ ವರ್ಷ ನಮ್ಮೆಲ್ಲರನ್ನೂ ಬನ್ನಿಮಂಟಪದಿಂದ ವಾಣೀವಿಲಾಸ ರಸ್ತೆಯ ಮುಖ್ಯ ಕಟ್ಟಡಕ್ಕೆ ವರ್ಗಾಯಿಸಲಾಗಿತ್ತು. ಸರಸ್ವತಿಪುರದಲ್ಲಿದ್ದ 'ವಿದ್ಯಾಶ್ರಮ'ದಲ್ಲಿ ಬಾಡಿಗೆ

ಇಲ್ಲದೆ ಕೊಠಡಿ. ಇಲ್ಲಿಗೆ ಬಂದು ಸೇರಿದ ಮೇಲೆ ಹಾಸ್ಟಲಿನ ಬಹುದೊಡ್ಡ ಚುನಾವಣೆ. ನಾನು ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ, ಬಹುದೊಡ್ಡ ಮತ ಗಳಿಸಿದೆ. ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳು ತುಸು ಕುಂಟಿದವು ಕಾರಣಾಂತರಗಳಿಂದ. ಸರಿಪಡಿಸಲು ಕೆಲವು ಕಾರ್ಯಕ್ರಮ ಮಾಡಲು ಜಗದ್ಗುರುಗಳನ್ನು ಕಾಣಲು ಸುತ್ತೂರಿಗೆ ಹೋದೆ. ಆಗ ಅಪರಾಹ್ನ ಮೂರು ಗಂಟೆ ಪೂಜ್ಯರಿದ್ದರು ಶ್ರೀಮಠದಲ್ಲಿ. ನಾನು ಹೋಗಿ ನಮಸ್ಕರಿಸಿ ಕುಳಿತೆ. ಹೋಗು ಪ್ರಸಾದ ಮಾಡಿ ಬಾ ಅಂದರು. ನನಗೆ ಸ್ವಲ್ಪ ಕೋಪ ಬಂದಿತ್ತು. 'ನಾನು ಪ್ರಸಾದಕ್ಕಾಗಿ ಇಲ್ಲಿಗೆ ಬರಲಿಲ್ಲ ಬುದ್ದಿ' ಅಂದೆ. ಪೂಜ್ಯರಿಗೆ ಅರ್ಥವಾಯಿತು. 'ಮೊದಲು ಊಟ ಮಾಡು ಆಮೇಲೆ ಮಾತನಾಡೋಣ' ಅಂದರು. ಪ್ರಸಾದ ಆಯಿತು. ಬಂದೆ 'ಬುದ್ದಿ, ಒಂದೂ ಕಾರ್ಯಕ್ರಮ ನಡೀಲಿಲ್ಲ. ಎಲ್ಲ ವಿದ್ಯಾರ್ಥಿಗಳೂ ಬೇಜಾರಾಗಿ ನನ್ನನ್ನು ಸಿಕ್ಕಾಬಟ್ಟೆ ಬಯ್ತಾರೆ. ತಾವೂ...', 'ನೋಡು ಮರುಳಯ್ಯ, ಸ್ವಲ್ಪ ಹಣಕ್ಕೆ ತೊಂದರೆ ಆಯ್ತು. ಎರಡು ಮೂರು ಸಾವಿರ ವಿದ್ಯಾರ್ಥಿಗಳಿಗೆ ಪ್ರಸಾದಕ್ಕೆ ವ್ಯವಸ್ಥೆ ಮಾಡಲು ಹೋದೆ. ಏನಾಯ್ತು ಗೊತ್ತಾ, ಹಣ ಇಲ್ಲ, ಕಾಳಿಲ್ಲ, ವಿದ್ಯಾರ್ಥಿಗಳಿಗೆ ಪ್ರಸಾದ ವ್ಯವಸ್ಥೆ ಆಗಬೇಕು. ಆಗ ಯಾರೋ ನಮಗೆ ದಾನ ಕೊಟ್ಟಿದ್ದ ಚಿನ್ನದ ಕರಡಿಗೆಯನ್ನ ಮಾರಿ ದವಸ ತರಿಸಿ ಪ್ರಸಾದಕ್ಕೆ ವ್ಯವಸ್ಥೆ ಮಾಡಿದೆವು. ಇದೆಲ್ಲಾ ನಿಮಗೆ ಅರ್ಥವಾಗೊಲ್ಲ. ನೋಡಪ್ಪಾ, ನಾವಾರೂ ಶಾಶ್ವತ ಅಲ್ಲ, ಸುತ್ತೂರು ವೀರಸಿಂಹಾಸನ ಮಹಾಸಂಸ್ಥೆ ದೊಡ್ಡದು. ಅದರ ಗೌರವ ಕಾಪಾಡುವುದು ನಮ್ಮದಷ್ಟೇ ಅಲ್ಲ. ನಿಮ್ಮೆಲ್ಲರದು' ಅಂದರು.

ನನಗೆ ಕಣ್ಣಲ್ಲಿ ನೀರು ಬಂತು. ಪೂಜ್ಯರು ತಲೆಸವರಿ ಸಮಾಧಾನ ಮಾಡಿ, ಧೈರ್ಯ ಹೇಳಿ ಕಳುಹಿಸಿಕೊಟ್ಟರು. ನಾನು ಬಿ.ಎ. (ಆನರ್ಸ್) ಪಾಸುಮಾಡಿದೆ, ನನ್ನ ತಂದೆಗೆ ರೋಗ ಉಲ್ಬಣಗೊಂಡು ಬೆಂಗಳೂರು ಆಸ್ಪತ್ರೆ ಸೇರಿದರು. ಕಷ್ಟ ಹೇಳತೀರದಾಗಿತ್ತು. ನಾನು ಕೆಲಸಕ್ಕೆ ಸೇರುವುದು ಅನಿವಾರ್ಯವಾಯಿತು. ಎಂ.ಎ. ಮುಂದುವರಿಸಲಾಗದೆ ಮೈಸೂರಿಗೆ ಬಂದು ನನಗೊಂದು ಕೆಲಸ ಕೊಡಿಸುವಂತೆ ನನ್ನ ಪೂಜ್ಯ ವಿದ್ಯಾಗುರುಗಳಾದ ದೇ. ಜವರೇಗೌಡರನ್ನು ಕೇಳಿಕೊಂಡೆ. ಪೂಜ್ಯರು, 'ನೋಡಿ ಮರುಳಯ್ಯ, ಆನರ್ಸ್, ಅಪೂರ್ಣ, ಎಂ.ಎ. ಮಾಡುವುದು ಉತ್ತಮ. ಈಗ ನಿಮ್ಮ ಕಷ್ಟ ನನಗೆ ಗೊತ್ತಾಯಿತು. ಒಂದು ಕೆಲಸ ಮಾಡಿ, ಸುತ್ತೂರ ಜಗದ್ಗುರುಗಳು ಚಾಮರಾಜನಗರದಲ್ಲಿ ಒಂದು ಇಂಟರ್‌ಮೀಡಿಯೇಟ್ ಕಾಲೇಜು ಆರಂಭ ಮಾಡಿದ್ದಾರೆ. ಅಲ್ಲಿಗೆ ಒಬ್ಬ ಅರೆಕಾಲಿಕ ಕನ್ನಡ ಅಧ್ಯಾಪಕನ ಅವಶ್ಯಕತೆ ಇದೆ. ಅವರನ್ನು ಕೇಳಿಕೊಳ್ಳಿ. ಅತ್ತ ಸಂಬಳವೂ ಬಂತು, ಇತ್ತ ಎಂ.ಎ. ಶಿಕ್ಷಣವೂ ಆಯಿತು, ಅಂದರು. ಕೂಡಲೇ ಅವರಿಗೆ ನಮಸ್ಕಾರ ಮಾಡಿ, ಕ್ಯಾತನಹಳ್ಳಿ ಹಾಸ್ಟಲಿಗೆ ಬಂದೆ. ಪೂಜ್ಯ ಜಗದ್ಗುರುಗಳನ್ನು ಕಂಡು ವಿಷಯ ನಿವೇದಿಸಿಕೊಂಡೆ. 'ಆಗಲಿ, ಸಂತೋಷ, ಈ ಪತ್ರವನ್ನು ಉಡಿಗಾಲದ ಮಾದಪ್ಪನವರಿಗೆ ಕೊಡು. ಅವರು ಅನುಕೂಲ ಮಾಡಿಕೊಡುತ್ತಾರೆ' ಅಂದರು. ನಾನು ಮಾರನೆಯ ದಿನ ಬೆಳಗ್ಗೆ ರೈಲಿನಲ್ಲಿ ಚಾಮರಾಜನಗರಕ್ಕೆ ಹೋದೆ. ಅಲ್ಲಿ ಊರಾಚೆ ಒಂದೇ ಒಂದು ಸಣ್ಣ ಹೆಂಚಿನ

ಮನೆಯಲ್ಲಿತ್ತು ಕಾಲೇಜು. ಅಲ್ಲಿ ವಿಚಾರಿಸಿದೆ. ಮಾದಪ್ಪನವರ ಮನೆಯಲ್ಲಿ ಒಂದು ಮಂಗಲ ಕಾರ್ಯ ಅವರು ಈ ದಿನ ಬರುವುದು ಕಾಣೆ. ಅಲ್ಲಿಗೇ ಹೋಗಿ ಅಂದರು. ಒಂದು ಬಾಡಿಗೆ ಸೈಕಲ್ ತೆಗೆದುಕೊಂಡು ಹೋದೆ. ನನ್ನ ದುರಾದೃಷ್ಟ ಮಾದಪ್ಪನವರು ಚಾಮರಾಜನಗರಕ್ಕೆ ಹೋದರೆಂದು ತಿಳಿಯಿತು. ಉರಿ ಬಿಸಿಲಲ್ಲಿ ಸೈಕಲ್ ತುಳಿದೆ. ಮಾದಪ್ಪನವನ್ನು ಪ್ರವಾಸಿ ಮಂದಿರದಲ್ಲಿ ಕಂಡೆ. ಒಪ್ಪಿ ಪ್ರಿನ್ಸಿಪಾಲರಿಗೆ ಪತ್ರ ಕೊಟ್ಟರು. ಪ್ರಿನ್ಸಿಪಾಲ್ ಓ. ಎನ್. ಕುಮಾರಸ್ವಾಮಿಯವರು ಮೊದಮೊದಲು ಅನುಭವವಿಲ್ಲದ ಅಧ್ಯಾಪಕ ಬೇಡ ಅಂದರು, ಕಡೆಗೆ ಒಪ್ಪಿದರು. ಕೆಲಸ ಕೊಟ್ಟರು, ತಿಂಗಳಿಗೆ ೬೦ ರೂಪಾಯಿ ಸಂಬಳ. ವಾರಕ್ಕೆ ಎರಡು ದಿನ, ನಾಲ್ಕು ಗಂಟೆಗಳ ಪಾಠ, ಪೂಜ್ಯ ಕುವೆಂಪುರವರನ್ನು ಕಂಡು ನನ್ನ ಸ್ಥಿತಿ, ವ್ಯವಸ್ಥೆ ಹೇಳಿದೆ. ಅವರು ಗುರುವಾರ, ಶನಿವಾರ ಹೋಗಿ ಬನ್ನಿ. ಆ ದಿನಗಳ ವೇಳಾಪಟ್ಟಿಯನ್ನು ಮಧ್ಯಾಹ್ನಕ್ಕೆ ವ್ಯವಸ್ಥೆಗೊಳಿಸುವುದಾಗಿ ಹೇಳಿ; ಅದರಂತೆ ಮಾಡಿಕೊಟ್ಟರು. ಪೂಜ್ಯರಾದ ಕುವೆಂಪುರವರ ಹಾಗೂ ಪೂಜ್ಯರಾದ ದೇಜಗೌರವರಿಗೆ ಕೃತಜ್ಞತೆಗಳನ್ನು ಅರ್ಪಿಸಿದೆ.

ಫೆಬ್ರವರಿಗೆ ನನ್ನ ಕಾಲೇಜು ಅಧ್ಯಾಪಕಗಿರಿ ಮುಕ್ತಾಯವಾಯಿತು. ಆನರ್ಸ್ ಆದ ಮೇಲೆ ಎಂ.ಎ. ಒಂದೇ ವರ್ಷದ ಕೋರ್ಸ್. ಆದರೆ ಅದರ ಪರೀಕ್ಷೆ ನಡೆಯುತ್ತಿದ್ದುದು ಪದವಿ ಪರೀಕ್ಷೆಗಳೆಲ್ಲ ಮುಗಿದ ಮೇಲೆ ಜೂನ್–ಜುಲೈ ತಿಂಗಳುಗಳಲ್ಲಿ. ಅಲ್ಲಿವರೆಗೆ ಊಂಬಳ ಎಂದಿನಂತೆ ಹಾಸ್ಟಲ್‌ನಲ್ಲಿ ಆಗುತ್ತಿತ್ತು. ಆದರೆ ಸಂಬಳ? ಮತ್ತೆ ಜಗದ್ಗುರುಗಳ ಬಳಿ ಹೋದೆ. ಪೂಜ್ಯರು 'ನಿನಗೆ ಹಣ ಬೇಕಾದಾಗ ಬಾ ಕೊಡ್ತೇವೆ' ಅಂದರು. ನಾನು ಎಂ.ಎ. ಪರೀಕ್ಷೆ ಫೀ ಮಾತ್ರ ಪೂಜ್ಯ ಜಗದ್ಗುರುಗಳಿಂದ ಪಡೆದೆ. ಉಳಿದಂತೆ ನನಗೆ ವೀರಶೈವ ವಿದ್ಯಾಭಿವೃದ್ಧಿ, ಬೆಂಗಳೂರು ಇವರಿಂದ ಸಾಲವಾಗಿ ಸ್ಕಾಲರ್‌ಷಿಪ್ ಸಿಕ್ಕಿತ್ತು. ಅಂತೂ ಇಂತೆಲ್ಲಾ ಎಂ.ಎ. ಪರೀಕ್ಷೆ ಮುಗಿಯಿತು. ಸಂದರ್ಶನ ಪರೀಕ್ಷೆಯ ವೇಳೆಗೆ ಪೂಜ್ಯ ಗುರುಗಳಾದ ಶ್ರೀ ಕುವೆಂಪುರವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ನಮ್ಮ 'ವೈವ' ಕ್ರಾಫರ್ಡ್ ಹಾಲ್‌ನಲ್ಲಿ, ವಿ.ಸಿ. ಛೇಂಬರ್‌ನಲ್ಲಿ. ನಾನು ಸಿಕ್ಕಾಬಟ್ಟೆ ತಯಾರಾಗಿ ಹೋದೆ. ಪ್ರೊ. ಸ.ಸ. ಮಾಳವಾಡರು, ಶಾಮರಾಯರು ಇನ್ನೂ ಮೊದಲಾದ ಮಹಾನ್ ವಿದ್ವನ್ಮಣಿಗಳಿದ್ದರು. ಯಾರೂ ಹೆಚ್ಚು ಪ್ರಶ್ನೆ ಕೇಳಲಿಲ್ಲ. ಪೂಜ್ಯ ಕುವೆಂಪುರವರು, 'ರಿಜಿಸ್ಟ್ರಾರ್ ನರೋನ್ಹರನ್ನು ಕಂಡು ಹೋಗಿ' ಅಂದರು. ನಾನು ರಿಜಿಸ್ಟ್ರಾರರ ಕೊಠಡಿಗೆ ಹೋದೆ. ನರೋನ್ಹರು ಹಂಗಾಮಿ ಕನ್ನಡ ಉಪನ್ಯಾಸಕರಾಗಿ ತುಮಕೂರು ಕಾಲೇಜಿಗೆ ಆಜ್ಞೆ ಆಗಿದೆ ಎಂದು ಹೇಳಿ ಆರ್ಡರ್ ಕೈಗೆ ಕೊಟ್ಟರು. ಅಂದು ನನ್ನ ಭಾಗ್ಯದ ಬಾಗಿಲು ತೆರೆಯಿತು.

ಮೈಸೂರಿನಿಂದ ನೇರವಾಗಿ ತುಮಕೂರಿಗೆ ಬಂದೆ. ಆಗಸ್ಟ್ ೮ನೇ ತಾರೀಖು ರಿಪೋರ್ಟ್ ಮಾಡಿಕೊಂಡು ಭಾನುವಾರ ಊರಿಗೆ ಹೋದೆ. ಅಮ್ಮ ಅಯ್ಯರಿಗೆ

ನಮಸ್ಕಾರ ಮಾಡಿದೆ. ಕೆಲಸ ಸಿಕ್ಕಿದ ವಿಚಾರ ಹೇಳಿದೆ. ನಮ್ಮ ತಂದೆ ಹಿಗ್ಗಿದರು. ನಮ್ಮೂರಿಗೆ ನಮ್ಮದೇ ಮೊದಲ ಮನೆ. ಮನೆ ಮುಂದೆ ಬಂದವರಿಗೆಲ್ಲ ತಮ್ಮ ಮಗನಿಗೆ ಕೆಲಸ ಸಿಕ್ಕಿದ ಸುದ್ದಿ ಮುಟ್ಟಿಸಿದರು ಹಿಗ್ಗಿನಿಂದ. ನಾನು ಅತ್ತಿತ್ತ ಅಡ್ಡಾಡುತ್ತಿದ್ದರೆ, ನನ್ನನ್ನೇ ತೃಪ್ತಿಯ ಕಣ್ಣುಗಳಿಂದ ನೋಡುತ್ತಿದ್ದರು. ನಮ್ಮಮ್ಮ 'ಏನು ಹಾಗೆ ನೋಡ್ತಿದ್ದೀರಿ. ಎಂದು ನೋಡಿಲ್ಲವೆ ಇರೋದ ಹಾಗೆ', 'ನೋಡಬೇಕು ಅನ್ನಿಸಿತು ಕಣೇ', 'ಹಾಗೇ ನೋಡಿ, ನನ್ನ ಮಗನಿಗೆ ದೃಷ್ಟಿ ಏನಾದರೂ ಆಗಲಿ!' ಅನ್ನೋರು.

ಸುಖ ದುಃಖಗಳು ಸಮಾನ ಸ್ಪರ್ಧಿಗಳು. ಅದು ಭಾರತದ ಪ್ರಥಮ ಮಹಾ ಚುನಾವಣೆಯ ವರ್ಷ, ನನ್ನನ್ನು ಓರ್ವ ಪ್ರಿಸೈಡಿಂಗ್ ಆಫೀಸರಾಗಿ ಹಾಕಿದ್ದರು. ನಾನೂ ಸಿದ್ಧನಾಗಿದ್ದೆ. ಏಕೋ ಏನೋ ಚುನಾವಣೆ ನಡೆಯುವ ನಾಲ್ಕು ದಿನಗಳ ಮುಂಚೆ ಅಯ್ಯನನ್ನು ನೋಡಬೇಕು ಅನ್ನಿಸಿತು. ಊರಿಗೆ ಹೋದೆ. ಆ ದಿನ ಬಹಳ ಹೊತ್ತು ಮಾತಾಡಿದೆವು. ನಾನು ಅಟ್ಟದ ಮೇಲೆ ಹೋಗಿ ಮಲಗಿದೆ. ಬೆಳಗಿನ ಸಮಯ ನಮ್ಮಮ್ಮನನ್ನು ಅಯ್ಯ ಕರೆದರಂತೆ, 'ಏನು ಬೇಕು' ಕೇಳಿದಾಗ 'ಮರುಳಯ್ಯ ಎಲ್ಲಿ? ಕರಿ, ನೋಡಬೇಕು ಅಂದರಂತೆ' ಅಮ್ಮ ನನ್ನನ್ನು ಕೂಗಿ ಕರೆದರು. ನಾನು ಅಟ್ಟ ಇಳಿದು ಬಂದೆ. ನಮ್ಮಯ್ಯ ನನ್ನನ್ನೊಮ್ಮೆ ಕಣ್ತುಂಬ ನೋಡಿದರು. ಏನೋ ಹೇಳಬೇಕು, ಅನ್ನಲು ಹೋದರು. ಹಾಗೆ ಕಣ್ಣುಗಳು ಮುಚ್ಚಿದವು. ತಲೆ ಒರೆಯಾಯಿತು. ಅಮ್ಮ ಆತು ಹಿಡಿದುಕೊಂಡು ಗೋಳೋ ಅತ್ತರು. ಅತ್ತ ಸೂರ್ಯ ಉದಯಿಸಿದ, ಇತ್ತ ನಮ್ಮ ಮನೆಯ ಸೂರ್ಯ ಅಸ್ತಮಿಸಿದ. ನಮ್ಮ ತುಂಡೇರಿ ತೋಟದಲ್ಲಿ ಸಮಾಧಿಯಾಯಿತು. ಚುನಾವಣಾಧಿಕಾರಿಗೆ ಟೆಲಿಗ್ರಾಂ ಮೂಲಕ ತಿಳಿಸಿಯಾಯಿತು. ಮನೆಯ ಮಂಗಳ ದೇವತೆಯಂತಿದ್ದ ನಮ್ಮಮ್ಮನ ಹಣೆಯ ಕುಂಕುಮ ಅಳಿಸಿತು.

ನಾನು ತುಮಕೂರಲ್ಲಿದ್ದುದು ಒಂದೇ ವರ್ಷ. ಮುಂದಿನ ವರ್ಷ ದಾವಣಗೆರೆಯ ಡಿ.ಆರ್.ಎಂ. ಕಾಲೇಜಿಗೆ ವರ್ಗ ಮಾಡಲಾಗಿತ್ತು. ನಾನು ಆ ವೇಳೆಗೆ ಅತ್ಯಂತ ಜನಪ್ರಿಯ ಅಧ್ಯಾಪಕನಾಗಿದ್ದೆ. ಭಾಷಣ ಕಲೆ ನನಗೆ ತುಂಬಾ ಚೆನ್ನಾಗಿ ಒಲಿದು ಬಂದಿತ್ತು. ದಾವಣಗೆರೆಯಲ್ಲಿ ನಾಲ್ಕು ವರ್ಷ ತುಂಬಾ ಚೆನ್ನಾಗಿದ್ದೆ. ಇನ್ನೂ ಚೆಂದಮಾಡಿದ್ದು ನನ್ನ ಮದುವೆಯ ಸುದ್ದಿ. ಕುಪ್ಪೂರು ಗದ್ದಿಗೆ ಮಠದ ಏಜೆಂಟ್ ರುದ್ರಯ್ಯನವರ ಮೂರನೆಯ ಮಗಳನ್ನು ನಾನು ಮದುವೆಯಾಗಲು ಇಷ್ಟಪಟ್ಟಿದ್ದೆ. ನಮ್ಮಯ್ಯನಿಗೆ ಅವಳನ್ನು ಕಂಡರೆ ತುಂಬಾ ಅಕ್ಕರೆ. ಅವರು ಆಗಾಗ ಹೇಳುತ್ತಿದ್ದರು, ಸ್ವಾಮೀಜಿಯವನ್ನು ಕಂಡು ಹೆಣ್ಣು ಕೊಡಿ ಎಂದು ಕೇಳಲೇ ಎಂದು. ನಾನು ಸುಮ್ಮನಿರಿ ಕಾಲ ಬರಲಿ ಅಂದೆ. ಕಾಲ ಬರಲಿ ಅಂದರೆ ಹೇಗೋ ನಾನು ಇರೋವಾಗ್ಲೇ ಕಣ್ತುಂಬ ನೋಡಬೇಡವೆ? ಅನ್ನೋರು. ನಾನು ಸ್ವಲ್ಪ ಹಿಂದೆ ಮುಂದೆ ನೋಡಿದ್ದು ಏಕೆ ಅಂದರೆ ಆ ಸಂಬಂಧ ಮುರಿಯಲು ನಮ್ಮವರೇ ಪ್ರಯತ್ನಿಸುತ್ತಿರುವುದು ತಿಳಿದದ್ದರಿಂದ. ಅವರು ಗುರುಗಳ ಸಂಗಡ ಮಾತನಾಡುತ್ತ

‘ಅವನು ಕನ್ನಡ ಮೇಷ್ಟ್ರು, ಅವನಿಗೆ ಹೆಂಡತಿ ಸಾಕುವ ಯೋಗ್ಯತೆ ಇದೆಯೇ? ಅಡವಿಲ್ಲ ಆಸ್ತಿ ಇಲ್ಲ. ಕೊಡಬೇಡಿ’ ಅಂದರಂತೆ. ಅದು ನನ್ನ ಕಿವಿಗೆ ಬಿತ್ತು. ನಮ್ಮ ಕೈಗೆ ಎಟುಕದ್ದಕ್ಕೆ ಕೈ ಚಾಚುವುದು ಸೂಕ್ತ ಅಲ್ಲ ಅಂದು ತೆಪ್ಪಗಿದ್ದೆ. ನನ್ನ ತಂದೆಯವರು ಆ ಆಸೆಯನ್ನು ಕಟ್ಟಿಕೊಂಡೇ ಕಣ್ಣುಮುಚ್ಚಿದರು. ಆದರೆ ನನ್ನ ಒಬ್ಬರು ಸೋದರ ಮಾವನವರು ಚನ್ನಪ್ಪಶಾಸ್ತ್ರಿಗಳು ಪೂಜ್ಯರನ್ನು ಕಂಡು, ಲಗ್ನ ನಿಶ್ಚಯ ಮಾಡಿದರು. ಆಶ್ರಯವನ್ನಾಗಿಸಿಕೊಂಡಂತೆ ನಾನು ಕುಪ್ಪೂರು ಗದ್ದಿಗೆ ಮಠದಲ್ಲಿದ್ದ ಏಜೆಂಟರ ಮಗಳನ್ನು ಮಡದಿಯನ್ನಾಗಿ ಪಡೆದೆ. ದಾವಣಗೆರೆಯಲ್ಲಿ ಮನೆ ಮಾಡಿದೆ. ನನ್ನ ಹೆಂಡತಿಯ ತಮ್ಮ ಮಲ್ಲಿಕಾರ್ಜುನಯ್ಯ ನಮ್ಮ ಜೊತೆಯಲ್ಲೇ ಇದ್ದ ಹೈಸ್ಕೂಲ್ ವಿದ್ಯಾರ್ಥಿಯಾಗಿ. ದಾವಣಗೆರೆಯಲ್ಲಿ ಕಲೆಗೆ ತುಂಬಾ ಪ್ರೋತ್ಸಾಹ ಸಿಕ್ಕಿತು. ವಾರಕ್ಕೊಂದು ನಾಟಕ ಆಡುತ್ತಿದ್ದೆವು. ದಾವಣಗೆರೆ ಕಾಟನ್ ಮಿಲ್ಸ್ ಸಾಹುಕಾರರಾದ ಶ್ರೀ ಶ್ರೀನಿವಾಸ ಮೂರ್ತಿಯವರು, ಪುರಸಭಾಧ್ಯಕ್ಷ ಸಿ. ಕೇಶವಮೂರ್ತಿ, ಡಾ. ನಂಜುಪ್ಪ, ಬಿ. ಟಿ. ಸೋಮಣ್ಣ, ವಕೀಲ್ ನಾಗರಾಜರಾವ್, ನನ್ನ ಸಹೋದ್ಯೋಗಿ ಎಚ್. ಚನ್ನಬಸವಯ್ಯ, ಇಂಜಿನಿಯರಿಂಗ್ ಕಾಲೇಜ್ ಪ್ರಿನ್ಸಿಪಾಲ್ ಇ.ಎಸ್. ಗುರುಬಸಪ್ಪ–ಎಲ್ಲರೂ ಸೇರಿ ನಾಟಕ ಆಡುತ್ತಿದ್ದುದುಂಟು. ಹೀಗಾಗಿ ನನಗೆ ದಾವಣಗೆರೆ ಬಿಡಲು ಮನಸ್ಸೇ ಇರಲಿಲ್ಲ. ಆದರೆ ಕೆ.ವಿ. ಪುಟ್ಟಪ್ಪನವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ, ಒಂದೇ ಜಿಲ್ಲೆಗೆ ಎರಡು ಪ್ರಥಮ ದರ್ಜೆ ಕಾಲೇಜು ಕೊಡಬಾರದೆಂದು ಕಾನೂನಿತ್ತು. ದಾವಣಗೆರೆಯ ಹಿರಿಯರು ಚಿತ್ರದುರ್ಗ ಜಿಲ್ಲಾ ಮುಖ್ಯಸ್ಥರ, ಆದರೆ ನಮ್ಮ ದಾವಣಗೆರೆ ಅತ್ಯಂತ ಜಗತ್ಪ್ರಸಿದ್ಧ ವ್ಯಾಪಾರಕೇಂದ್ರ. ಇಲ್ಲಿಗೆ ಕೊಡಿ ಎಂದು ಬಲಾತ್ಕರಿಸಿದಾಗ ಕುವೆಂಪುರವರು ‘ನೀವೊಂದು ಪ್ರೈವೇಟ್ ಅಸೋಸಿಯಷನ್ ಮಾಡಿಕೊಳ್ಳಿ, ಕೊಡೋಣ’ ಎಂದರು. ಮಾರನೇ ದಿನವೇ ‘ಬಾಪೂಜಿ ಎಜುಕೇಷನ್ ಸೊಸೈಟಿ’ ಜನ್ಮ ತಾಳಿತು. ಸರ್ಕಾರಿ ನೌಕರರಾಗಿದ್ದಾಗ ನಮ್ಮನ್ನು ಶಿವಮೊಗ್ಗ ಮೊದಲಾದೆಡೆಗಳಿಗೆ ವರ್ಗ ಮಾಡಿದರು. ಆದರೂ ಒಂದು ವರ್ಷ ಖಾಸಗಿ ಸಂಸ್ಥೆಯವರು ನಮ್ಮನ್ನು ಉಳಿಸಿಕೊಂಡರು.

ನಾನು ಶಿವಮೊಗ್ಗೆಯಲ್ಲಿ ೮ ವರ್ಷ ಇದ್ದೆ. ದಾವಣಗೆರೆಯಲ್ಲಿದ್ದಾಗ ಶಿವು ಹುಟ್ಟಿದ್ದ. ಶಿವಮೊಗ್ಗೆಯಲ್ಲಿ ರಾಗಿಣಿ ಮತ್ತು ರವಿ ಹುಟ್ಟಿದರು. ಶಿವಮೊಗ್ಗ ನನಗೆ ತೌರಾಗಿತ್ತು. ಅಷ್ಟು ಆತ್ಮೀಯತೆ ಬೆಳೆಯಿತು. ಅನಂತರ ನನಗೆ ಬೆಂಗಳೂರಿಗೆ ವರ್ಗವಾಯಿತು. ಬೆಂಗಳೂರಿನಲ್ಲಿದ್ದಾಗ ಒಂದು ತುಂಟ ಹುಡುಗರ ತರಗತಿ. ನನ್ನ ಗೆಳೆಯ ಜಿ.ಎಸ್. ಸಿದ್ಧಲಿಂಗಯ್ಯ ಆ ಹುಡುಗರನ್ನು ಬಗ್ಗಿಸಲು ನೀನೇ ಸಮರ್ಥ, ನೀನು ಆ ಕ್ಲಾಸ್ ತೆಗೆದುಕೊ ಎಂದು ಕೊಟ್ಟರು. ನಾನು ಮೊದಲ ದಿನ ಮೊದಲ ತರಗತಿಗೆ ಕಾಲಿರಿಸಿ ಪಾಠಕ್ಕೆ ಮೊದಲು ನಾಲ್ಕು ಮಾತು ಆಡಿದೆ. ತುಂಟ ಹುಡುಗರು ತಣ್ಣಗಾದರು. ಭೇಷ್ ಗೆದ್ದೆ ಎಂದು ನನ್ನ ಬೆನ್ನು ನಾನೇ ತಟ್ಟಿಕೊಂಡೆ. ಇನ್ನೇನು ಪಾಠ ಆರಂಭಿಸಬೇಕು. ಅಷ್ಟರಲ್ಲಿ

ವಿಕ್ಟೋರಿಯಾ ಆಸ್ಪತ್ರೆಯಿಂದ ಫೋನ್. 'ನಿಮ್ಮ ಕಿರಿ ಮಗ ಮೂರು ವರ್ಷದ ಮಗು ಮಹಡಿಯಿಂದ ಕೆಳಗೆ ಬಿದ್ದಿದ್ದಾನೆ. ಆಸ್ಪತ್ರೆಗೆ ತೆಗೆದುಕೊಂಡು ಹೋಗಿದೆ. ಬೇಗ ಬರಬೇಕು' ಎಂದು. ನನಗೆ ಏನೂ ತೋಚಲಿಲ್ಲ. ಆದರೂ ಪಾಠ ಮುಂದುವರಿಸಿದೆ. ಮತ್ತೊಮ್ಮೆ ಫೋನ್ ಬಂತು, ಬೇಗ ಬರಬೇಕಂತೆ ಎಂದು. ನಾನು ವಾರ್ತೆ ತಂದ ಜವಾನಿಗೆ ಹೇಳಿದೆ 'ಹೇಗೂ ಮಗು ಆಸ್ಪತ್ರೆಯಲ್ಲಿ ತುರ್ತು ವಿಭಾಗದಲ್ಲಿದೆ. ನಾನು ಬಂದು ಏನೂ ಮಾಡಬರುವುದಿಲ್ಲ. ಈ ಗಂಟೆ ಆದ ಕೂಡಲೇ ಬರುತ್ತೇನೆ' ಎಂದು. ಅದೇ ರೀತಿ ಮಾಡಿದೆ.

ಮತ್ತೊಂದು ಘಟನೆ ನಮ್ಮ ಸಂಬಂಧಿಗಳ ಮಗು ತೀರಿಕೊಂಡಿತ್ತು. ಅವರ ಮನೆಯಲ್ಲಿ ಯಾರೂ ಇರಲಿಲ್ಲ. ನಾನು ಪಿ.ಯು.ಸಿ. ಪರೀಕ್ಷೆಯ ಮೌಲ್ಯಮಾಪನ ಕೇಂದ್ರದ ಮುಖ್ಯಸ್ಥನಾಗಿದ್ದೆ. ಸುಮಾರು ಐದಾರು ನೂರು ಜನ ಮೌಲ್ಯಮಾಪಕರು ಕರ್ನಾಟಕದ ಬೇರೆ ಬೇರೆ ಕಡೆಯಿಂದ ಬಂದಿದ್ದರು. ಅವರಿಗೆ ವ್ಯವಸ್ಥೆ ಮಾಡಬೇಕು, ತುಂಬಾ ಜವಾಬ್ದಾರಿ ಕೆಲಸ. ಆದ್ದರಿಂದ ನಾನು ಹೋಗಲಿಲ್ಲ. ನನ್ನ ಹೆಂಡತಿ 'ಬೇಗ ಬನ್ನಿ ಮಗುವನ್ನು ಸಮಾಧಿ ಮಾಡಿ ಬರೋಣ' ಅದಳು. ನಾನು ಹೇಳಿದೆ, 'ನಾವಿದ್ದ ಮನೆಯ ಮಾಲೀಕರ ಮನೆಯ ಪತ್ನಿಯನ್ನು ಕರೆದುಕೊಂಡು ಹೋಗಿ ಸಮಾಧಿ ಮಾಡಿ ಬಾ' ಎಂದು. ನಾನು ಎರಡೂ ವೇಳೆಗಳಲ್ಲಿ ನಡೆದುಕೊಂಡದ್ದು ಸರಿಯೋ, ತಪ್ಪೋ ಕಾಣೆ. ಆದರೆ 'ಕಾಯಕದಲ್ಲಿ ನಿರತನಾದಡೆ ಗುರುವನ್ನಾದರೂ ಮರೆಯಬೇಕು, ಲಿಂಗವನ್ನಾದರೂ ಮರೆಯಬೇಕು, ಜಂಗಮನನ್ನಾದರೂ ಮರೆಯಬೇಕು' ಎಂಬ ಶರಣರ ನುಡಿ ನನಗೆ ಮಾನ್ಯವಾದದ್ದು ಸತ್ಯ.

ಬೆಂಗಳೂರಲ್ಲಿದ್ದ ನಾಲ್ಕು ವರ್ಷಗಳಲ್ಲಿ ಕೊಕ್, 'ರೀಡರ್' ಆಗಿ ತುಮಕೂರಿಗೆ ವರ್ಗ. ತುಮಕೂರು ನಾಲ್ಕು ವರ್ಷ. ಅನಂತರ ಚನ್ನಪಟ್ಟಣದ ಖಾಸಗಿ ಕಾಲೇಜಿಗೆ ಪ್ರಿನ್ಸಿಪಾಲನಾಗಿ, ಕಳುಹಿಸಲ್ಪಟ್ಟೆ. ಅಲ್ಲಿ ಮೂರು ವರ್ಷ ಕೆಟ್ಟ ಕನಸುಗಳನ್ನು ಕಂಡು 'ಜ್ಞಾನ ಗಂಗೋತ್ರಿ' ಎಂಬ ಮಕ್ಕಳ ವಿಶ್ವಕೋಶದ ಏಳನೆಯ ಸಂಪುಟದ ರಚನೆಯ ಪ್ರಧಾನ ಸಂಪಾದನಾಗಿ ಬೆಂಗಳೂರಿಗೆ ಬಂದೆ. ಮೂರು–ನಾಲ್ಕು ವರ್ಷದಲ್ಲಿ ನನ್ನ ಭಾಗದ ಕೆಲಸವನ್ನೆಲ್ಲಾ ಮುಗಿಸಿದೆ. ನನಗೆ ಸರ್ಕಾರಿ ಆಜ್ಞೆ ಬಂತು. ಮಂಗಳೂರು ಕಾಲೇಜಿಗಿ ಪ್ರಿನ್ಸಿಪಾಲನಾಗಿ ಹೋಗುವುದೆಂದು. ನನ್ನ ಆರ್ಥಿಕ ಪರಿಸ್ಥಿತಿ ಆಗ ತುಂಬಾ ಕೆಟ್ಟಿತ್ತು. ಮನೆ ಕಟ್ಟಲು ಸಾಲ ತೆಗೆದಿದ್ದೆ. ಅದಕ್ಕೆ, ಇನ್ಶೂರೆನ್ಸಿಗೆ, ಅದಕ್ಕೆ ಇದಕ್ಕೆ ಎಲ್ಲಾ ಹೋಗಿ ೬೮೦ ರೂಪಾಯಿ ಉಳಿಯುತ್ತಿತ್ತು. ಅದರಲ್ಲಿ ಮನೆ ಬಾಡಿಗೆ, ಖರ್ಚು ಇತ್ಯಾದಿಗಳನ್ನು ನಿಭಾಯಿಸಬೇಕಾಗಿತ್ತು. ಅದೇ ಕಷ್ಟ. ಅದರ ಮೇಲೆ ಬೇರೆ ಕಷ್ಟಗಳು–ಅಂದರೆ ನನ್ನ ಹಿರಿಯ ಮಗ ಶಿವು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಎಂ.ಎ. ಓದಲು ಹೋದ. ಅಲ್ಲಿ

ಗಣಿತಶಾಸ್ತ್ರ ವಿಭಾಗ ಮುಖ್ಯಸ್ಥರಾಗಿದ್ದ ಡಾ। ಸಿದ್ದಪ್ಪನವರು ನಿಮ್ಮ ಮಗ ಎಂ.ಎ. ನಮ್ಮಲ್ಲಿಯೇ ಓದಲಿ ಎಂದು ಕರೆದೊಯ್ದರು. ಮಗಳು ರಾಗಿಣಿ ಮೈಸೂರಿನಲ್ಲಿ ಸ್ಪೀಚ್ ಅಂಡ್ ಹಿಯರಿಂಗ್ ಎಂ.ಎಸ್‌ಸಿ. ಓದಲು ಹೋದಳು. ಚಿಕ್ಕ ಮಗ ರವಿ ತುಮಕೂರಿನಲ್ಲಿ ಎಸ್.ಐ.ಟಿ.ಯಲ್ಲಿ ಎಂಜಿನಿಯರಿಂಗ್, ನಾನು ಮಂಗಳೂರು, ನನ್ನ ಹೆಂಡತಿ ಬೆಂಗಳೂರು. ಐದು ಜನ ಐದು ದಿಕ್ಕು. ನನ್ನ ಸಂಬಳ ಸಾಕಾಗುತ್ತಿರಲಿಲ್ಲ. ಸಾಲ ಮಾಡಿದೆ. ತೀರಿಸಲು ಬೆಂಗಳೂರಿಗೆ ಬಂದ ಮೇಲೆ ಅಂದರೆ ಮಾರನೆಯ ವರ್ಷವೇ ತೆರಪಿನ ಶಿಕ್ಷಣದ ವಿದ್ಯಾರ್ಥಿಗಳಿಗೆ ಎಂ.ಎ. ಪಾಠ ಮಾಡತೊಡಗಿದೆ. ಶ್ರೀ ಕೆ. ಶಿವರಾಮು ಎಂಬುವರು ಐ.ಎ.ಎಸ್. ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುತ್ತೇನೆ. ನೀವು ಕನ್ನಡ ಪಾಠವನ್ನು ಹೇಳಿ ಅಂದರು. ಅವರಿಗಾಗಿ ಐ.ಎ.ಎಸ್. ಕನ್ನಡ ಪಾಠ ಹೇಳತೊಡಗಿದೆ. ಶ್ರೀ ಶಿವರಾಮುರವರು ಈಗ ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಗಳಾಗಿ ದ್ದಾರೆ. ಅವರಂತಹ ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರನನ್ನು ನಾನು ಕಾಣಲಿಲ್ಲ. ಅಷ್ಟೇ ಗುರುಭಕ್ತಿ ಸಂಪನ್ನರು. ಅವರು ಹಾಕಿದ ಐ.ಎ.ಎಸ್. ಪಾಠದ ಪೀಠಿಕೆಯಿಂದಾಗಿ ನನ್ನ ಸಾಲ ತೀರುತ್ತ ಬಂತು. ನಾನು ಬೆಂಗಳೂರಿಗೆ ಬಂದದ್ದು ಕಾಲೇಜು ಪ್ರಾಧ್ಯಾಪಕನಾಗಿ ಅಲ್ಲ. ರಾಜ್ಯಭಾಷಾ ಆಯೋಗದ ಸದಸ್ಯನಾಗಿ. ಐದು ವರ್ಷ ಅಲ್ಲಿ ಶ್ರೀ ವೈ.ಎಂ.ಸಿ. ಶರ್ಮರ ನೇತೃತ್ವದಲ್ಲಿ ಕೆಲಸ ಮಾಡಿದೆ. ಅಲ್ಲಿಯೇ ನಿವೃತ್ತನಾದೆ.

ಈ ಮಧ್ಯೆ ನನ್ನ ಮಗಳ ಮದುವೆ ಕೈಗೂಡಿಬಂತು. ಉತ್ತರ ಅಮೇರಿಕೆಯ ಕ್ಯಾಲಿಫೋರ್ನಿಯಾದಲ್ಲಿದ್ದ ಹಿರಿಯೂರು ತಾಲ್ಲೂಕು ಅಬ್ಬಿನಹೊಲೆಯ ಗೌರಣ್ಣನವರ ಕಿರಿಯ ಮಗ ಶ್ರೀ ಎಸ್. ಸಂಗಮೇಶ್ವರ್‌ರವರು ನನ್ನ ಮಿತ್ರರೊಬ್ಬರಿಂದ ತಿಳಿದು ಅವರ ಬಂಧುಗಳು ಮನೆಗೆ ಬಂದು ಹೆಣ್ಣು ನೋಡಿದರು. ನಾನು ಸ್ವಲ್ಪ ಹಿಂದೆ ಮುಂದೆ ನೋಡಿದೆ. ಏಕೆ ಅಂದರೆ ಆ ದಿವಸ ನನ್ನಲ್ಲಿ ಹತ್ತು ಪೈಸೆ ಕೂಡ ಇರಲಿಲ್ಲ. ಮದುವೆ ಕೇವಲ ಒಂಬತ್ತು ದಿನಗಳಲ್ಲಿ ಆಗಬೇಕು. ಬಂದ ಸುವರ್ಣಾವಕಾಶವನ್ನು ಕಳೆದುಕೊಳ್ಳಲಾರೆ, ಉಳಿಸಿಕೊಳ್ಳಲು ಶಕ್ತಿ ಇಲ್ಲ. ಅದರಿಂದಾಗಿ ನಾಳೆ ಹೇಳ್ತೇನೆ ಅಂದೆ. ಅವರು 'ನಾಳೆ ಹಾಳು ಈ ದಿನವೇ ಮಾತುಕೊಡಿ. ಒಂದು ವೇಳೆ ಹಣದ ತೊಂದರೆ ಇದ್ದರೆ ಹೇಳಿ ನಾವೇ ಎಲ್ಲಾ ನೋಡಿಕೊಳ್ಳುತ್ತೇವೆ' ಅಂದರು. ನಾನು 'ಏನೂ ಬೇಡ. ನನ್ನ ಹೆಂಡತಿ ಮಗ, ಮಗಳನ್ನ ಕೇಳ್ತೇನೆ ಅಂದೆ' ಕೇಳಿದೆ. ಒಪ್ಪಿದರು. ಒಪ್ಪಿಗೆ ಕೊಟ್ಟೆ, ಕೈಯಲ್ಲಿ ಕಾಸು ಇರಲಿಲ್ಲ. ಆದರೆ, ಸುಲಭವಾಗಿ ಛತ್ರ ಸಿಕ್ಕಿತು. ನಂಜುಂಡಗೌಡರು ಮೈಸೂರಿನಿಂದ ಲಗ್ನಪತ್ರಿಕೆ ಮುದ್ರಣ ಮಾಡಿಸಿ ಕಳುಹಿಸಿದರು. ತಿಪಟೂರಿನಿಂದ ತೆಂಗಿನಕಾಯಿ, ಕೊಬರಿ, ಬುಕ್ಕಾಂಬುಧಿಯಿಂದ ಸಿದ್ಧಲಿಂಗಸ್ವಾಮಿ ವತಿಯಿಂದ ಬಾಳೆ ಎಲೆ ಬಾಳೆಹಣ್ಣು ಇತ್ಯಾದಿ, ಚನ್ನಪಟ್ಟಣದಿಂದ ಶ್ರೀ ಸ್ವಪ್ರಭಾನಂದಶರ್ಮರ ಮನೆಯಿಂದ ವೀಳೆದೆಲೆ, ಹೊಂಬಾಳೆ ಮೊದಲಾದವು. ಸ್ವಾಮಿಗಳೊಬ್ಬರಿಂದ ಸೌದೆ, ಉಡುಗೊರೆ ವಸ್ತುಗಳು ಬಂದವು.

ಆತ್ಮೀಯ ಆಡಿಟರ್ ಸದಾಶಿವಪ್ಪ ಮದುವೆಯ ಊಟಕ್ಕೆ ಬೇಕಾಗುವ ದವಸ ಧಾನ್ಯಗಳನ್ನು ತರಿಸಿಕೊಟ್ಟರು, ನನ್ನ ಮಿತ್ರರನೇಕರು ಒಂದು ಸಾವಿರದಿಂದ ಹಿಡಿದು ಐದು ಸಾವಿರದವರೆಗೂ ಹಣ ಕಳುಹಿಸಿಕೊಟ್ಟರು. ಬಡ ಅಧ್ಯಾಪಕನ ಮಗಳ ಮದುವೆ ಅದ್ದೂರಿಯಿಂದ ನಡೆದುಹೋಯಿತು.

ಶಿಕ್ಷಣ ಮುಗಿಸಿಕೊಂಡು ಗುಲ್ಬರ್ಗಾದಿಂದ ಶಿವು ಬಂದ. ತುಮಕೂರಿನಿಂದ ಬೆಂಗಳೂರು ಆರ್.ವಿ. ಕಾಲೇಜಿಗೆ ವರ್ಗಾ ಮಾಡಿಸಿಕೊಂಡು ರವಿ ಬಂದ, ನಾನೂ ರಾಜಭಾಷಾ ಆಯೋಗಕ್ಕೆ ಸದಸ್ಯನಾಗಿ ಮಂಗಳೂರಿನಿಂದ ಬಂದೆ. ಎಲ್ಲರೂ ಕೂಡಿ ರಾಗಿಣಿ ಮದುವೆ ಮಾಡಿ ಸಂತೋಷದಿಂದ ಅಳಿಯ ಸಂಗಮೇಶ್ವರ ಜೊತೆಯಲ್ಲಿ ಅಮೇರಿಕಾಕ್ಕೆ ಕಳಿಸಿಕೊಟ್ಟೆವು.

**ಸುಖ ತಾನು ಬರುವಾಗ ಗುಳೆಯೆತ್ತಿ ಬರುವುದು**
**ಒಂದಲ್ಲ ಎರಡಲ್ಲ ಪರಿವಾರವೆ!**

ಎಂದು ವರಕವಿ ಬೇಂದ್ರೆ ಹೇಳುತ್ತಾರೆ.

ನನ್ನ ಕೈ ಹಿಡಿದ ಹೆಂಡತಿಯ ಪುಣ್ಯದಿಂದಲೋ ಅಥವಾ ಹುಟ್ಟಿದ ಮಕ್ಕಳ ಭಾಗ್ಯದಿಂದಲೋ ನನ್ನ ಬಾಳಿನಲ್ಲಿ ಸುಖದ ದಿನಗಳು ಆರಂಭವಾದವು. ಶಿವು ಕಾಲೇಜೊಂದರಲ್ಲಿ ಅಧ್ಯಾಪಕನಾದ. ರವಿ ಇಂಜಿನಿಯರ್ ಆದ, ಅವರಿಬ್ಬರಿಗೂ ಒಳ್ಳೆಯ ಕಡೆ ಹೆಣ್ಣು ತಂದು ಮದುವೆ ಮಾಡಿ ಆಯಿತು. ಹಿರಿಯ ಸೊಸೆ ಸುವರ್ಣ ಗುಲ್ಬರ್ಗಾದಲ್ಲಿ ಶರಣ ಬಸವೇಶ್ವರ ಕಾಲೇಜಿನಲ್ಲಿ ಮೂವತ್ತು ನಾಲ್ವತ್ತು ವರ್ಷಗಳವರೆಗೆ ಇಂಗ್ಲೀಷ್ ಪ್ರಾಧ್ಯಾಪಕರಾಗಿ ದುಡಿದ ಈಗ ದಾವಣಗೆರೆಯಲ್ಲಿ ವಿಶ್ರಾಂತ ಜೀವನ ಸಾಗಿಸುತ್ತಿರುವ ಶರಣ ಕವಿ, ನಿಜಗುಣ ಶಿವಯೋಗಿ ಮಾರ್ಗಾನುಯಾಯಿ ಡಾ॥ ಸಿ.ಎಂ.ಸಿದ್ದಯ್ಯನವರ ಸುಪುತ್ರಿ. ವಿದ್ಯಾವಂತೆ, ಬುದ್ಧಿವಂತೆ, ಸಂಗೀತದಲ್ಲಿ ಅದ್ವಿತೀಯ ಪಾಂಡಿತ್ಯ ಉಳ್ಳವಳು. ಈಗ ಆಶು, ಅಂಶು ಎಂಬೆರಡು ಗಂಡುಮಕ್ಕಳ ತಾಯಿ. ಕಿರಿಯ ಸೊಸೆ ಶೈಲಜಾ. ಬೆಂಗಳೂರಿನವಳು. ಸಜ್ಜನಿಕೆಯ ಸಹಕಾರಮೂರ್ತಿ, ದುಧನಿ ಮಹಾಸ್ವಾಮಿಗಳ ಪದಭಕ್ತ, ಎನ್. ಸೋಮಶೇಖರ್‌ರವರ ಮಗಳು. ಇವಳು ವಿದ್ಯಾವಂತೆ, ಮಹಾಮೇಧಾವಿ ಹಾಗೂ ಪ್ರತಿಭಾ ಸಂಪನ್ನೆ, ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾರತ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವಳು. ಅವಳೀಗ 'ಇಷ' ಎಂಬ ಹೆಣ್ಣು ಮಗುವಿನ ತಾಯಿಯಾಗಿದ್ದಾಳೆ. ಅಮೇರಿಕೆಯಲ್ಲಿ ತನ್ನ ಗಂಡನೊಡನೆ ತಾನೂ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ದುಡಿಯುತ್ತಿದ್ದಾಳೆ. ನಮ್ಮ ಬೀಗಿತ್ತಿಯರಾದ ವಿಜಯಾ ಸಿದ್ಧಯ್ಯ, ನಾಗರತ್ನ ಸೋಮಶೇಖರ್ ಸಾಧ್ವೀ ಶಿರೋಮಣಿಯರು. ನಮ್ಮ ಬೀಗರಿಬ್ಬರೂ ಮಿತ ಸಂತಾನಿಗಳು. ಇಬ್ಬರಿಗೂ ತಲಾ ಒಂದೊಂದು ಗಂಡು, ಒಂದೊಂದು ಹೆಣ್ಣು, ನಮಗೆ ಒಂದು ಹೆಣ್ಣು, ಎರಡು ಗಂಡು.

ಒಟ್ಟಿನಲ್ಲಿ ಮಿತ ಸಂಸಾರಿಗಳಾದ ನಾವು ಹಿತ ಕಂಡಿದ್ದೇವೆ. ತುಂಬು ಜೀವನ ನನ್ನದಾಗಿದೆ. ಬದುಕಿನಲ್ಲಿ ಏಳು ಬೀಳು ಸಹಜ. ಆದರೆ ಕಡೆಯ ದಿನಗಳಲ್ಲಿ ಯಾರಿಗೂ ಮಾನಸಿಕ ನೆಮ್ಮದಿ ಹಾಳಾಗಬಾರದು. ನನ್ನ ಪಾಲಿಗೆ ಯಾವ ಕೊರತೆಯೂ ಇಲ್ಲ. ಸರ್ವಜ್ಞನ ಜೀವನ ದರ್ಶನದಂತೆ ಬೆಚ್ಚನೆಯ ಮನೆಯಿದೆ, ವೆಚ್ಚಕ್ಕೆ ಹೊನ್ನಿದೆ, ಇಚ್ಛೆಯನರಿತು ನಡೆವ ಸತಿಯಿದ್ದಾಳೆ. ಅಕ್ಕರೆಯ ಸಕ್ಕರೆಯ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಸುಖ, ಶಾಂತಿ, ಆರೋಗ್ಯ ಭಾಗ್ಯ ಎಲ್ಲ ಎಲ್ಲ ಇವೆ. ಇದಕ್ಕಿಂತ ಹೆಚ್ಚೇನು ಬೇಕು? ಅಂತೂ ನೆಮ್ಮದಿಯ ಜೀವನ ನೆಮ್ಮದಿಯ ಸಾವು ಬಯಸುತ್ತಾ ಈಗ ಎಪ್ಪತ್ತರ ಹೊಸ್ತಿಲಲ್ಲಿ ನಿಂತಿದ್ದೇನೆ.

ಆತ್ಮೀಯರೇ,

ನನ್ನ ಬಾಳಸಂಪುಟದಲ್ಲಿ ಅನೇಕ ಅಧ್ಯಾಯಗಳನ್ನು ಓದಿದ ತಮ್ಮನ್ನು ನನ್ನ ಸಾಹಿತ್ಯ ಸೃಷ್ಟಿಯ ಮತ್ತೊಂದು ಮಜಲಿಗೆ ಕರೆದೊಯ್ಯಲಿಚ್ಛಿಸುತ್ತೇನೆ. ನನ್ನ ಕಾವ್ಯ ರಚನೆ ನಾನು ಚಿತ್ರದುರ್ಗದ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಓದುತ್ತಿದ್ದಾಗ, ಅಂದರೆ ೧೯೫೦ರಲ್ಲಿ ಮಿತ್ರ ಈಶ್ವರಾಚಾರಿಯ ಮಾರ್ಗದರ್ಶನದಲ್ಲಿ ವಾಸ್ತವವಾಗಿ ಆರಂಭವಾಯಿತಷ್ಟೆ. ಅದನ್ನು ಮುಂದುವರಿಸಿ ನಾನು ಮೊದಲ ಬಿ.ಎ. (ಆನರ್ಸ್) ತರಗತಿಗೆ ಬರುವಷ್ಟರಲ್ಲಿ ೩೦–೪೦ ಭಾವಗೀತಗಳನ್ನು ರಚಿಸಿದೆ. ಅವೆಲ್ಲವನ್ನೂ ಒಟ್ಟಿಗೆ ಸೇರಿಸಿ ೧೯೫೨ನೇ ಇಸವಿಯಲ್ಲಿ 'ಶಿವತಾಂಡವ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಕವನ ಸಂಕಲನವನ್ನು ಹೊರತಂದೆ. ಇದಕ್ಕೆ ನನ್ನ ಸ್ನೇಹಿತರು ಮುಖ್ಯ ಪ್ರೇರಕ ಶಕ್ತಿಗಳಾದರು. ಮೈಸೂರಿನ ಸರಸ್ವತಿ ಪುರದಲ್ಲಿದ್ದ ವಿದ್ಯಾಶ್ರಮ ಎಂಬ ಬಡ ವಿದ್ಯಾರ್ಥಿಗಳ ಉಚಿತ ವಸತಿಗೃಹದಲ್ಲಿ ಖ್ಯಾತ ಜಾನಪದ ತಜ್ಞ ಡಾ॥ ಜಿ.ಶಂ. ಪರಮಶಿವಯ್ಯ, ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಪ್ರಸಿದ್ಧ ವಿಮರ್ಶಕ ಪೋಳಂಕಿ ರಾಮಮೂರ್ತಿ, ನಾನು, ನನ್ನ ಸಹಪಾಠಿ ನಾಗೇಂದ್ರಪ್ಪ ಮೊದಲಾದವರು ಇದ್ದೆವು. ಇವರೆಲ್ಲರೂ ತಮ್ಮ ವರದ ಹಸ್ತ ನೀಡಿದರು. 'ಶಿವತಾಂಡವ' ಹೊರಬಂತು. ಪೂಜ್ಯ ಗುರುಗಳಾದ ಎಸ್.ವಿ. ಪರಮೇಶ್ವರ ಭಟ್ಟರು ಅದಕ್ಕೆ ಮುನ್ನುಡಿಯ ತಿಲಕವಿಟ್ಟು ಆಶೀರ್ವದಿಸಿದರು. ಗೆಳೆಯ ಪಿ.ಆರ್. ತಿಪ್ಪೇಸ್ವಾಮಿಯವರ ಚಿತ್ರ, ಮುದ್ರಣ ಎಲ್ಲಾ ಸೇರಿ ನನಗೆ ಆ ಪುಸ್ತಕದ ೧೦೦೦ ಪ್ರತಿಗಳಿಗೆ ತಗುಲಿದ ಖರ್ಚು ೧೧೦ ರೂ.ಗಳು! ಪ್ರಕಾಶನಕ್ಕೆ 'ರಾಗಿಣಿ ಪ್ರಕಾಶನ' ಎಂದು ಹೆಸರಿಟ್ಟೆ. ಅದೇ ಹೆಸರನ್ನು ನನ್ನ ಮಗಳಿಗೂ ಇಟ್ಟೆ.

ಮುಂದೆ ೧೯೬೭ರವರೆಗೆ ನನ್ನ ಯಾವ ಕೃತಿಯೂ ಹೊರಬರಲಿಲ್ಲ. ಶಿವಮೊಗ್ಗೆಯಲ್ಲಿ ಯಥಾ ಪ್ರಕಾರ ನನ್ನ ಆತ್ಮೀಯ ಗೆಳೆಯರ ಪ್ರೇರಣೆಯಂತೆ 'ಕೆಂಗನಕಲ್ಲು' ಕವನ ಸಂಕಲನ ಹೊರತಂದೆ. ಇದು ನನಗೆ ನಿಜವಾದ ಕವಿ ಎಂಬ ಕೀರ್ತಿ ತಂದುಕೊಟ್ಟಿತು. ೧೯೬೭ರ ರಾಜ್ಯ ಸರ್ಕಾರದ ಪ್ರಶಸ್ತಿಯೂ ಇದಕ್ಕೆ ಲಭಿಸಿತು. ಇದರಲ್ಲಿನ 'ಸುಮ

ಸುಂದರ ತರುಲತೆಗಳ ಬೃಂದಾವನ ಲೀಲೆ' ಅತ್ಯಂತ ಜನಪ್ರಿಯ ಗೀತೆಯಾಯಿತು. 'ಕೆಂಗನಕಲ್ಲು' ನೀಳ್ಗವನದಲ್ಲಿ ಬರುವ ಬರಗಾಲದ ವರ್ಣನೆಯನ್ನು ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಪುತಿನ ರವರ ಕವಿಗೋಷ್ಠಿಯ ಅಧ್ಯಕ್ಷತೆಯಲ್ಲಿ ಓದಿ, ವಿ.ಕೃತ ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಬಹುದೊಡ್ಡ ಸಾಹಿತ್ಯ ಸಮ್ಮೇಳನದ ಲಕ್ಷ ಲಕ್ಷ ಜನರ ಪ್ರೀತಿ ಗೌರವಗಳಿಗೆ ಪಾತ್ರನಾದೆ, ಅನಂತರ ಬರೆದು ಪ್ರಕಟಿಸಿದ 'ಭಾಸನ ಮಕ್ಕಳು' ಎಂಬ ವಿಮರ್ಶಾ ಗ್ರಂಥಕ್ಕೆ ೧೯೬೩ರ ರಾಜ್ಯ ಸರ್ಕಾರದ 'ದೇವರಾಜ ಬಹದ್ದೂರ್ ಬಹುಮಾನ ಬಂತು' ಮುಂದೆ ೮ ಕವನ ಸಂಕಲನಗಳು, ೪೩ ನೃತ್ಯರೂಪಕಗಳು, ಹಲವು ಜೀವನ ಚರಿತ್ರೆಗಳು, ಸಂಪಾದಿತ ಕೃತಿಗಳು, ಅನುವಾದಗಳು, ಕತೆ, ಕಾದಂಬರಿಗಳು, ನಾಟಕಗಳು, ಚಿಂತನೆಗಳು ರಚನೆಯಾದವು. 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ಸಂಶೋಧನಾ ಗ್ರಂಥವನ್ನು ಡಾ.ಆರ್.ಸಿ. ಹಿರೇಮಠರ ಮಾರ್ಗದರ್ಶನದಲ್ಲಿ ರಚಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದೆ. ಅದು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾಯಿತು.

ಹೀಗೆ ನನ್ನ ಕೈಲಾದ ಮಟ್ಟಿಗೆ ಬುದ್ಧಿಗೆ ಎಟುಕಿದ ಮಟ್ಟಿಗೆ, ಪ್ರತಿಭೆಗೆ ಸಿಲುಕಿದ ಮಟ್ಟಿಗೆ, ಕನ್ನಡ ತಾಯಿ ನುಡಿ ಸೇವೆ ಮಾಡಿಕೊಂಡು ಬಂದಿದ್ದೇನೆ. ನನ್ನದಾದ ಆಚಾರ್ಯ ಕೃತಿ ಇನ್ನೂ ಬರಬೇಕಾಗಿದೆ! ನನ್ನ ದುಡಿಮೆಯನ್ನು ಗುರುತಿಸಿ ತಡವಾಗಿಯಾದರೂ ೧೯೯೧ರ ನವೆಂಬರ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿಯಿತ್ತು ಗೌರವಿಸಿದೆ. ಅದೇ ವರ್ಷ ಅದೇ ತಿಂಗಳು ೨೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಾಹಿತ್ಯ ಪ್ರಶಸ್ತಿ ಪ್ರದಾನಗೈದು ಸನ್ಮಾನಿಸಿದೆ. ಗುರುಪೀಠಗಳಿಂದ, ಸಂಘ ಸಂಸ್ಥೆಗಳಿಂದ, ಅಭಿಮಾನಿಗಳಿಂದ ನೂರಾರು ಗೌರವ ಪ್ರಶಸ್ತಿಗಳು, ಬಿರುದುಗಳು ಬಂದಿವೆ. ಸಾವಿರಾರು ಸಮಾರಂಭಗಳಲ್ಲಿ ಸನ್ಮಾನಿತನಾಗಿದ್ದೇನೆ.

ಸಾಹಿತ್ಯ ಸೇವೆಯಷ್ಟೇ ಪ್ರಮಾಣದಲ್ಲಿ ದೇಶಸೇವೆ, ಸಮಾಜಸೇವೆ, ದೀನದಲಿತ ಸೇವೆ ಮಾಡಿದ ಸಮಾಧಾನ ನನಗಿದೆ. ನಾನು ಯಾವ ಊರಿನಲ್ಲೇ ಇರಲಿ ನನ್ನ ಮನೆಯಲ್ಲಿ ಕನಿಷ್ಠ ಮೂರು ನಾಲ್ಕು ಜನ ವಿದ್ಯಾರ್ಥಿಗಳಿಗೆ ಊಟ ಹಾಕಿ, ಅವರಿಗೊಂದು ಬದುಕುಕೊಟ್ಟ ಭಾಗ್ಯ ನನ್ನ ಪಾಲಿಗಿದೆ. ತುಂಬಾ ಆರ್ಥಿಕ ತೊಂದರೆಯಿಂದ ತಹತಹಪಡುತ್ತಿದ್ದ ಮಹದೇವಸ್ವಾಮಿ ಸಂಸ್ಥಾಪಿತ ಕಂಪನಿ, 'ಹೊನ್ನಪ್ಪ ಭಾಗವತರ ಕಂಪನಿ' (ಹೆಸರುಗಳು ಮರೆತು ಹೋಗಿವೆ) ಮೊದಲಾದವುಗಳಿಗೆ ನನ್ನ ಶಕ್ತಿಮೀರಿ ನೆರವಾಗಿ ಕಲಾಸೇವೆ ಮಾಡಿದ್ದೇನೆ. ೧೯೯೪ರಲ್ಲಿ ದಕ್ಷಿಣ ಭಾರತ ಅಂಧ ಮತ್ತು ಅಂಗವಿಕಲರ ಪ್ರಾಂತೀಯ ಸಮ್ಮೇಳನದ ಕಾರ್ಯಾಧ್ಯಕ್ಷನಾಗಿ ನನ್ನ ಅಂಧ ಬಂಧುಗಳ ಸೇವೆ ಮಾಡಿದ್ದೇನೆ. ಗುರು, ಜಗದ್ಗುರುಗಳ ಸೇವೆ ಧರ್ಮ, ದೇವರುಗಳ ಸೇವೆ ಇವೇ ಮೊದಲಾದವುಗಳನ್ನು

ನಿರಂತರ ಮಾಡಿಕೊಂಡು ಬರುತ್ತಿದ್ದೇನೆ. ಇವೆಲ್ಲವೂ ನನಗೆ ನೆಮ್ಮದಿ ತಂದಿದೆ. ನಾನು ಎಲ್ಲ ವಿಧದಿಂದಲೂ ಧನ್ಯತೆಗೆ ಪಾತ್ರನಾಗಿದ್ದೇನೆ ಎಂಬ ಭಾವನೆ ನನ್ನದಾಗಿದೆ.

ನಾನು ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಸಕ್ರಿಯವಾಗಿ, ಭಾಗವಹಿಸಿದ್ದೇನೆ. ಅತಿ ಮುಖ್ಯವಾಗಿ ತಿಪಟೂರಿನಲ್ಲಿ ಡಿಸೆಂಬರ್ ೨೭ ಮತ್ತು ೨೮, ೧೯೮೦ರಲ್ಲಿ ಕೆ. ವೆಂಕಟರಾಮಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷನಾಗಿದ್ದೆ. ಜನವರಿ ೬ ಮತ್ತು ೭, ೧೯೯೨ರಲ್ಲಿ ತುಮಕೂರಲ್ಲಿ ನಡೆದ ತುಮಕೂರು ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದೆ. ಆನಂತರ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಒಮ್ಮೆ ಸೋತು, ಮತ್ತೊಮ್ಮೆ ಗೆದ್ದಿದ್ದೇನೆ. ಆದರೆ ಈ ಯಾವ ಸ್ಥಾನ, ಪದವಿಗಳು ನನಗೆ ತೃಪ್ತಿ ತಂದಿಲ್ಲ. ನನ್ನ ಅಧ್ಯಾಪನ, ನನ್ನ ಬರವಣಿಗೆ ಇವಷ್ಟೇ ನನಗೆ ಆನಂದ ತಂದ ಅಂಶಗಳು.

ನಾನು ಪ್ರಿನ್ಸಿಪಾಲನಾಗಿ ಅನುಭವಿಸಿದ್ದು ಕಹಿ ಅನುಭವ, ಅಧ್ಯಕ್ಷನಾಗಿ ಅನುಭವಿಸಿದ್ದು ವಿಷದ ಅನುಭವ. ನನ್ನ ಸ್ನೇಹಿತರು ನನ್ನನ್ನು ಕಷ್ಟದಲ್ಲಿ ಕೈ ಹಿಡಿದು ಮೇಲೆತ್ತಿದ್ದಾರೆ, ಸುಖದಲ್ಲಿ ನನ್ನನ್ನು ಕಂಡು ಹಿಗ್ಗಿದ್ದಾರೆ. ಆದರೆ ನನ್ನ ವಿದ್ಯಾರ್ಥಿಗಳು ಕೆಲವರಿಂದ ನಾನು ತುಂಬಾ ನೊಂದಿದ್ದೇನೆ. 'ಉಪಾಧ್ಯಾಯಾಶ್ಯ ವೈದ್ಯಾಶ್ಯ ಕಾರ್ಯಂತೇ ಅಪ್ರಯೋಜಕಃ' ಎಂಬ ಉಕ್ತಿಗೆ ನಾನು ನಿದರ್ಶನವಾಗಿದ್ದೇನೆ. ಎಲ್ಲಕ್ಕೂ ಮಿಗಿಲಾಗಿ ನನ್ನ ಅನೇಕ ವಿದ್ಯಾರ್ಥಿಗಳಿಂದ ಅವಮಾನಿತನಾಗಿದ್ದೇನೆ. ನನ್ನ ಪಾಠ ಸಹಸ್ರಾರು ಜನಕ್ಕೆ ಮೆಚ್ಚು. ಅನೇಕ ವಿದ್ಯಾರ್ಥಿಗಳು ನನ್ನ ಪಾಠ ಪ್ರವಚನಗಳಿಗೆ ಶಿರಬಾಗಿದ್ದಾರೆ. ಆದರೆ ಕೆಲವರು ಅಷ್ಟೇ ಪ್ರಮಾಣದಲ್ಲಿ ನನಗೆ ದ್ರೋಹ ಬಗೆದಿದ್ದಾರೆ. ಹಾಲೆರೆದ ಕೈಯಲ್ಲಿ ಹಾವಾಗಿ ಕಚ್ಚಿ ವಿಷ ಕಕ್ಕಿದ್ದಾರೆ. ಒಬ್ಬ ಸಭ್ಯನಂತಿದ್ದ ವೇಷಧಾರಿ ಮತ್ತೊಬ್ಬ ಶಿಷ್ಯನ ಜೊತೆ ಸೇರಿ ಹಳದಿ ಪತ್ರಿಕೆಯಲ್ಲಿ ಅಲ್ಲ ಸಲ್ಲದ ಸುದ್ದಿ ಹರಡಿದ. ನನ್ನ ಹತ್ತಿರದ ಬಂಧು ಆ ಪತ್ರಿಕೆಯ ಪ್ರತಿಗಳನ್ನು ಕೊಂಡು, ನನ್ನ ಬಗೆಗೆ ಕೆಟ್ಟ ಅಭಿಪ್ರಾಯ ಮೂಡಲಿ ಎಂದು ನನ್ನ ನೆಂಟರಿಷ್ಟರಿಗೆಲ್ಲಾ ಪೋಸ್ಟ್ ಮೂಲಕ ಕಳುಹಿಸಿ ಅಪಪ್ರಚಾರ ಮಾಡಿದ. ನಾನು ಯಾವನನ್ನು 'ಸತ್ಯ ಹರಿಶ್ಚಂದ್ರ' ಎಂದು ನಂಬಿದ್ದೆನೋ ಅವನೇ ನಕ್ಷತ್ರಕನಾಗಿ ಕಾಡಿದ. ಇಂಥವೆನಿತೋ ಗೋಮುಖವ್ಯಾಘ್ರಗಳ ಮಧ್ಯದಲ್ಲಿ ಸಾಯದೆ ಬದುಕಿ ಬಂದೆ. ಇದೇ ನನ್ನ ಪವಾಡ.

ಇಷ್ಟಾದರೂ ದೇವರು ಕೈಬಿಟ್ಟರೂ ನನ್ನ ಭಾಗದ ದೈವ ಸ್ವರೂಪರಾದ ಸ್ನೇಹಿತರುಗಳು ನನ್ನ ಕೈಬಿಡಲಿಲ್ಲ. ಅವರಲ್ಲಿ ಬಾಲ್ಯಗೆಳೆಯ, ತುಮಕೂರು ವಕೀಲ ಎಸ್.ಎಂ. ಸೋಮಶೇಖರಪ್ಪ, ಬೆಲಗೂರು ಚನ್ನಬಸಪ್ಪ, ಬೆಂಗಳೂರಿನ ಎಂ. ಸದಾಶಿವಪ್ಪ, ಎನ್.ಎಂ. ಶಿವಕುಮಾರ್, ಎ.ಎಸ್. ಭಟ್ ಇವರೇ ಮೊದಲಾದವರು ನನ್ನ ಹೃದಯದಲಿ, ನನ್ನ ನೆನಪಿನಲ್ಲಿ ನೆಲೆ ನಿಂತರು. ಇವರುಗಳಿಂದ ನಾನು ತುಂಬಾ ಉಪಕೃತನಾಗಿದ್ದೇನೆ.

ಅದನ್ನು ಬಣ್ಣಿಸಲು ನನ್ನಲ್ಲಿ ಮಾತು ಸೋತುಹೋಗುತ್ತವೆ. ಋತುಗಳು ಬಳಲುತ್ತವೆ, ಮಾಸಗಳು ಮಾಸುತ್ತವೆ. ಇದನ್ನು ಅಲಂಕಾರಿಕವಾಗಿ ಹೇಳುತ್ತಿಲ್ಲ. ಆತ್ಮಸಾಕ್ಷಿಯಿಂದ ನುಡಿಯುತ್ತಿದ್ದೇನೆ. ಆದರೆ ನನ್ನಲ್ಲಿ ವಿಶೇಷ ನಂಬಿಕೆ ಭರವಸೆ ಇಟ್ಟವರಿಗೆ ನಾನು ಅನ್ಯಾಯ ಮಾಡಿದ್ದೇನೆ. ಡಾ॥ ಪುಟ್ಟಶಂಕರಪ್ಪನವರು ಮತ್ತು ಜಯಮ್ಮ ಕರಿಯಣ್ಣನವರು, ನನಗಾಗಿ, ನನ್ನ ಪ್ರಗತಿಗಾಗಿ ತುಂಬಾ ಶ್ರಮಿಸಿದವರು. ನಾನು ಪರಿಷತ್ತಿನ ಅಧ್ಯಕ್ಷ ಪದವಿಗೆ ಸ್ಪರ್ಧಿಸಿ ಸೋತ ಮತ್ತು ಗೆದ್ದ ಎರಡು ಸಂದರ್ಭಗಳಲ್ಲೂ ನನ್ನ ಪ್ರಾಣದ ಪ್ರಾಣವಾಗಿ ದುಡಿದವರು. ಆದರೆ ನಾನು ಗೆದ್ದ ಮೇಲೆ ಬಾಹ್ಯ ಶಕ್ತಿಗಳ ಪ್ರಭಾವಕ್ಕೆ ಒಳಗಾಗಿ ಅವರನ್ನು ಕಾರ್ಯದರ್ಶಿಗಳಾಗಿ ತೆಗೆದುಕೊಳ್ಳಲಿಲ್ಲ. ಅದು ಒಂದು ಅರ್ಥದಲ್ಲಿ ನಾನು ಮಾಡಿದ ಮಿತ್ರದ್ರೋಹ. ಈ ಅಪರಾಧಕ್ಕೆ ಆ ಇಬ್ಬರು ಸೋದರ ಸೋದರಿಯರ ಕ್ಷಮೆಯೇ ಪರಿಹಾರ ಎಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಶ್ರೀಮತಿ ಜಯಮ್ಮ ಕರಿಯಣ್ಣನವರಂತೂ ನನ್ನ ಯಾವುದೋ ಜನ್ಮದ ತಾಯಿ, ತಂಗಿ ಆಗಿದ್ದಿರಬಹುದು. ನಾನು ಈ ಜನ್ಮದಲ್ಲಿ ಅವರನ್ನು ನನ್ನ ಮಗಳು ರಾಗಿಣಿ ಎಂಬ ಭಾವನೆಯಿಂದಲೇ ನೋಡುತ್ತಿದ್ದೇನೆ. ಅವರೂ ಸಹ ನನ್ನನ್ನು ತಮ್ಮ ಗುರು ತಂದೆ ಎಂಬ ದೃಷ್ಟಿಯಿಂದ ನೋಡಿದ್ದಾರೆ, ನಡೆದುಕೊಂಡಿದ್ದಾರೆ ಕೂಡ. ನನ್ನ ಮಗಳಲ್ಲಿಟ್ಟ ಸಲುಗೆಯನ್ನು ಅವರಲ್ಲಿಟ್ಟಿದ್ದೆ. ಅವರೂ ಸಹ ಅದೇ ರೀತಿ ನಡೆದುಕೊಳ್ಳುತ್ತಿದ್ದರು. ಬಹುಶಃ ನೋಡಿದವರು ತಪ್ಪು ತಿಳಿದುಕೊಳ್ಳುವಷ್ಟು ಸಲುಗೆ ನಮ್ಮಲ್ಲಿತ್ತು. ಆದರೆ ಆತ್ಮಸಾಕ್ಷಿಯಾಗಿ ನಮ್ಮ ಹೃದಯಗಳು ಪವಿತ್ರ ಭಾವನೆಯಿಂದ ತುಂಬಿದ್ದವು; ಈಗಲೂ ತುಂಬಿವೆ. ಇಂತಹ ಪ್ರಾಂಜಲವಾದ ಮಾತೃ ಹೃದಯದ ಜಯಮ್ಮನವರಿಗೂ ಸೋದರನಿಗೂ ಮಿಗಿಲಾದ ಆತ್ಮೀಯತೆಯ ಡಾ॥ ಪುಟ್ಟಶಂಕರಪ್ಪನವರಿಗೂ ಬೇಸರ ತಂದ ನಾನು ನಿಜಕ್ಕೂ ಅಪರಾಧವೆಸಗಿದ್ದೇನೆ. ಅವರಿಬ್ಬರೂ ನನ್ನನ್ನು ಕ್ಷಮಿಸಲಿ ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ನಾನು ಪರಿಷತ್ತಿನ ಅಧ್ಯಕ್ಷ ಪದವಿ ಸ್ವೀಕರಿಸಿದ ತರುಣದಲ್ಲಿ ನನ್ನ ಸಹಪಾಠಿಗಳೂ, ಹಿತೈಷಿಗಳೂ ಆದ ಹಾ.ಮಾ.ನಾಯಕರು ತರಂಗ ಪತ್ರಿಕೆಯ 'ಸ್ವಗತ'ದಲ್ಲಿ ಹೀಗೆ ಹೇಳಿ ಎಚ್ಚರಿಸಿದರು. ಅದು ಹೀಗಿದೆ:

> ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಈಗ ಎಂಬತ್ತು! ಅದರ ನೂತನ ಅಧ್ಯಕ್ಷರಿಗೆ ಅರುವತ್ತನಾಲ್ಕು. ಅನೇಕ ಕನಸುಗಳನ್ನು ಹೊತ್ತುಕೊಂಡು ಅಧ್ಯಕ್ಷ ಗದ್ದುಗೆಗೆ ಏರಿರುವ ಸಾಸಲು ಶಿವರುದ್ರಯ್ಯ (ಸಾ.ಶಿ.) ಮರುಳಯ್ಯನವರು ಉತ್ಸಾಹಿಗಳು, ಅಧ್ಯಾಪಕ ವೃತ್ತಿ ಅವರಿಗೆ ತುಂಬ ಪ್ರಿಯವಾದದ್ದು. ಅತ್ತ ಇತ್ತ ತಿರುಗಿ ನೋಡದೆ ಅರುವತ್ತು ತುಂಬಿ ನಿವೃತ್ತರಾಗುವವರೆಗೂ ಅಧ್ಯಾಪಕರಾಗಿದ್ದರು. ಅರುವತ್ತು ಆದಮೇಲೂ

ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿದವರು. ಅಂಚೆ ತೆರಪಿನ ಶಿಕ್ಷಣಕ್ಕೆ ಬಂದ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಾ ಅಧ್ಯಾಪಕ ವೃತ್ತಿಯ ದಾಹವನ್ನು ಆರಿಸಿಕೊಂಡವರು. ಬೋಧನೆಯ ಜತೆಗೆ ಕವಿ, ಲೇಖಕ ಮತ್ತು ಸಂಶೋಧಕರು ಕೂಡ.

ಪರಿಷತ್ತಿಗೆ ಮೊದಲಿನಿಂದಲೂ ಇರುವ ತೊಂದರೆ ಎಂದರೆ ಹಣಕಾಸಿನದು. ಸರಕಾರ ಕೊಟ್ಟರೆ ಉಂಟು; ಇಲ್ಲದಿದ್ದರೆ ಇಲ್ಲ. ಅನೇಕ ವರ್ಷ ಇದನ್ನು ಕಂಡ ನಾನು ಬೀದರ್‌ನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಈ ಕುರಿತು ಹೀಗೆ ಪ್ರಸ್ತಾಪ ಮಾಡಿದ್ದೆ.

“ಕನ್ನಡ ಸಾಹಿತ್ಯ ಪರಿಷತ್ತು ಸಂಪೂರ್ಣವಾಗಿ ಸರಕಾರದ ಸಹಾಯವನ್ನು ಅವಲಂಬಿಸಿರುವ ಸಂಸ್ಥೆ. ಸರಕಾರದ ಸಹಾಯಧನ ಬರದೆಹೋದರೆ ಪರಿಷತ್ತು ಬಾಗಿಲು ಮುಚ್ಚಬೇಕಾಗುತ್ತದೆ. ಇಂಥ ಪರಿಸ್ಥಿತಿಯಿಂದ ಪರಿಷತ್ತನ್ನು ಪಾರು ಮಾಡುವ ಯೋಜನೆಯನ್ನು ಸಿದ್ಧಪಡಿಸಬೇಕಾದ ಕಾಲವೀಗ ಬಂದಿದೆ. ಸಾಹಿತ್ಯ ಸಂಸ್ಕೃತಿಗಳ ವಿಷಯದಲ್ಲಿ ಈವರೆಗಿನ ಕರ್ನಾಟಕದ ಮಂತ್ರಿ ಮಂಡಳಗಳೆಲ್ಲವೂ ಬಹು ಉದಾರವಾಗಿ ನಡೆದುಕೊಂಡು ಬಂದಿವೆ ಎಂಬುದನ್ನು ನಾವು ಅಭಿಮಾನದಿಂದ ಸ್ಮರಿಸಬೇಕು. ಅವೆಲ್ಲವೂ ಪರಿಷತ್ತಿನ ಕಾರ್ಯ ಚಟುವಟಿಕೆಗಳಿಗೆ ಬೆಂಬಲ ನೀಡಿವೆ. ಆದರೂ ಪರಿಷತ್ತು ಸ್ವಾಯತ್ತ ಸಂಸ್ಥೆಯಾಗಿ ತನ್ನ ಕಾಲಮೇಲೆ ತಾನು ನಿಲ್ಲುವುದು ಅಗತ್ಯವೆಂದು ನನ್ನ ಅಭಿಪ್ರಾಯ. ಇಂದಲ್ಲ ನಾಳೆ ಯಾವುದೇ ಒಂದು ಸರಕಾರ ಅಥವಾ ಒಬ್ಬ ಮಂತ್ರಿ ತನ್ನ ತಾಳಕ್ಕೆ ಸರಿಯಾಗಿ ಕುಣಿಯಬೇಕೆಂದು ಅಪೇಕ್ಷಿಸಬಹುದು. ಪರಿಷತ್ತಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಹುದು. ಸಹಾಯಧನವನ್ನು ನಿಲ್ಲಿಸಬಹುದು ಅಥವಾ ಕಡಿಮೆ ಮಾಡಬಹುದು. ಅದರಿಂದ ಪರಿಷತ್ತಿನ ಚಟುವಟಿಕೆಗಳು ಕುಂಟಬಹುದು ಅಥವಾ ನಿಲ್ಲಬಹುದು.

“ಪರಿಷತ್ತು ಸರ್ಕಾರದ ದನಿಯಾಗಬೇಕಿಲ್ಲ; ಆಗಬಾರದು. ಕನ್ನಡದ ಸರ್ವಾಂಗೀಣ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರ ತಪ್ಪು ಹೆಜ್ಜೆ ಇಡುವ ಸಂದರ್ಭದಲ್ಲಿ ಅದನ್ನು ಎಚ್ಚರಿಸಿ ಮಾರ್ಗದರ್ಶನ ನೀಡುವ ಶಕ್ತಿಯನ್ನು ಗಳಿಸಿಕೊಳ್ಳಬೇಕು. ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ಪರಿಷತ್ತಿನದೇ ಕೊನೆಯ ಮಾತಾಗಬೇಕು. ಇದು ಸರ್ಕಾರದ ಸಹಾಯಧನವನ್ನು ಅವಲಂಬಿಸಿರುವವರೆಗೂ ಸಾಧ್ಯವಾಗುವುದಿಲ್ಲ.

“ಆದ್ದರಿಂದ ಪರಿಷತ್ತು ತನ್ನದೇ ಒಂದು ನಿಧಿಯನ್ನು ಸ್ಥಾಪಿಸುವ ಯೋಜನೆ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

‘ಒಬ್ಬ ಕನ್ನಡಿಗ ಒಂದು ರೂಪಾಯಿ’ ಎಂಬ ಯೋಜನೆ ಹಾಕಿಕೊಂಡು ಒಂದು ಕೋಟಿ ರೂಪಾಯಿಗಳ ನಿಧಿಯೊಂದನ್ನು ಆರಂಭಿಸಬೇಕು. ನಿಧಿ ಸಂಗ್ರಹ ಕಷ್ಟವಾಗಲಾರದೆಂದು ಭಾವಿಸುತ್ತೇನೆ. ಮಾತು ಮಾತಿಗೆ ನಾವು ಮುಕ್ಕೋಟಿ ಕನ್ನಡಿಗರೆಂದು ಹೇಳುತ್ತೇವೆ. ಈ ಮುಕ್ಕೋಟಿಯಲ್ಲಿ ಎರಡು ಕೋಟಿಯನ್ನು ಬಿಟ್ಟರೂ ಮಿಕ್ಕ ಒಂದು ಕೋಟಿ ಜನ ಪರಿಷತ್ತಿಗೆ ಒಂದೊಂದು ರೂಪಾಯಿ ಕೊಡಲು ಮನಸ್ಸು ಮಾಡುತ್ತಾರೆ ಎಂದು ನಂಬಿದ್ದೇನೆ. ಹೆಚ್ಚು ಕೊಡುವವರಿದ್ದರೆ ಬೇಡ ಎನ್ನುವುದಿಲ್ಲ. ಈ ಒಂದು ಕೋಟಿ ರೂಪಾಯಿಗಳ ಬಡ್ಡಿಯಲ್ಲಿಯೇ ಪರಿಷತ್ತು ಸರ್ಕಾರದ ಮರ್ಜಿಯನ್ನು ಕಾಯದೆ ತನ್ನ ಕೆಲಸ ಮಾಡಬಹುದು.”

ಇದು ಪರಿಷತ್ತು ಈಗ ಮಾಡುತ್ತಿರುವ ‘ಒಬ್ಬ ಕನ್ನಡಿಗ ಒಂದು ರೂಪಾಯಿ’ ಘೋಷಣೆಯ ಹಿನ್ನೆಲೆಯ ಕಥೆ ಇದೀಗ ಅಧ್ಯಕ್ಷಸ್ಥಾನ ಬಿಟ್ಟಿರುವ ಗೊ.ರು. ಚನ್ನಬಸಪ್ಪನವರು ೬೧.೩ ಲಕ್ಷ ರೂಪಾಯಿಗಳನ್ನು ತಾವು ಸಂಗ್ರಹಿಸಿರುವುದಾಗಿ ಆ ಮೊಬಲಗು ಪರಿಷತ್ತಿನ ಶಾಶ್ವತ ಠೇವಣಿಯಾಗಿರುವು ದಾಗಿಯೂ ಹೇಳಿದ್ದಾರೆ. ಅದು ಶಾಶ್ವತ ಠೇವಣಿ ನಿಜ ಆದರೆ ‘ಒಬ್ಬ ಕನ್ನಡಿಗ ಒಂದು ರೂಪಾಯಿ’ ಹೆಸರಿನ ಠೇವಣಿಯಲ್ಲಿ. ಚನ್ನಬಸಪ್ಪನವರು ಸಂಗ್ರಹಿಸಿದ್ದು ದತ್ತಿ ಭಾಷಣಗಳಿಗಾಗಿ ‘ದತ್ತಿನಿಧಿ’. ಇದು ಪರಿಷತ್ತಿಗೆ ಶಾಶ್ವತ ನಿಧಿಯನ್ನು ಗೊತ್ತಾದ ಕಾರಣಗಳಿಗಾಗಿ ಮಾತ್ರ ಸಂಪಾದಿಸುತ್ತದೆ. ಹಾಗೆ ನೋಡಿದರೆ ಇದು ಪರಿಷತ್ತಿಗೆ ಲಾಭದಾಯಕವಲ್ಲ. ದತ್ತಿ ಭಾಷಣಗಳಿಗಾಗಿ ಖರ್ಚು ಮಾಡುವ ಮೇಲು ಖರ್ಚನ್ನು ಪರಿಷತ್ತೇ ಭರಿಸಬೇಕಾಗುತ್ತದೆ! ಆದುದರಿಂದ ಮರುಳಯ್ಯನವರು ಈ ಸೂಕ್ಷ್ಮವನ್ನು ಅರಿತು ಅರ್ಥ ಮಾಡಿಕೊಂಡು, ಮುಂದಿನ ಮೂರು ವರ್ಷ ಮೂರು ಅಮೃತ ನಿಧಿಯ ಸಂಗ್ರಹಣೆಗೆ ಪ್ರಯತ್ನಿಸಬೇಕು. ಅವರು ಪರಿಷತ್ತನ್ನು ಬಿಟ್ಟುಹೋಗುವಾಗ ಕನಿಷ್ಠ ಒಂದು ಕೋಟಿ ರೂಪಾಯಿಗಳನ್ನಾದರೂ ಶೇಖರಿಸಬೇಕು! ವಾಸ್ತವವಾಗಿ ನಾನು ಈ ಕೋಟಿ ರೂಪಾಯಿಗಳ ಪ್ರಸ್ತಾವ ಮಾಡಿ ಹತ್ತು ವರ್ಷಗಳೇ ಆಗಿವೆ. ಆಗ ಕೋಟಿಗಿದ್ದ ಬೆಲೆ ಈಗ ಇಲ್ಲ. ದಿನ ದಿನಕ್ಕೂ ಹಣದ ಬೆಲೆ ಇಳಿಯುತ್ತಿದೆ. ಈಗ ಅದು ಕೋಟಿಯ ಮೇಲೆ ಐವತ್ತು ಲಕ್ಷವಾದರೂ ಆಗಬೇಕಾದ ಅಗತ್ಯವಿದೆ.

ಪರಿಷತ್ತಿನ ಸಿಬ್ಬಂದಿ ವೆಚ್ಚವನ್ನು ಸರಕಾರವೇ ವಹಿಸುವುದಾಗಿ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡರು ಮುಧೋಳ ಸಮ್ಮೇಳನದಲ್ಲಿ

ಹೇಳಿದ್ದಾರೆ. ಇದು ಸಮ್ಮೇಳನದ ಸಭಿಕರೆದುರು ಆಡಿದ ಉತ್ಸಾಹದ ಮಾತೋ ಅಥವಾ ನಿಜವಾಗಿಯೂ ಹೇಳಿದ ಮಾತೋ ನನಗೆ ಗೊತ್ತಿಲ್ಲ. ಅದು ನಿಜವೇ ಆಗಿದ್ದರೆ ಪರಿಷತ್ತಿನ ಸದ್ಯದ ದೃಷ್ಟಿಯಿಂದ ಒಳ್ಳೆಯದೇ. ಇದರಲ್ಲಿ ಕೆಲವು ಅಪಾಯಗಳೂ ಇವೆ. ಪರಿಷತ್ತಿನ ಸಿಬ್ಬಂದಿ ವರ್ಗ ಸರ್ಕಾರಿ ನೌಕರರಾಗಿ ಬಿಡುತ್ತಾರೆ. ಸರಕಾರದ ಮಹಾ ಸಮುದ್ರದಲ್ಲಿ ಇವರೂ ಪಾಲುದಾರರಾಗಿರುತ್ತಾರೆ. ಆದ್ದರಿಂದ ಇವರು ಪರಿಷತ್ತಿನ ಖಾಯಂ ನೌಕರರಾಗಿರುವುದಿಲ್ಲ. ಈ ವರ್ಷ ಬಂದು ಮುಂದಿನ ವರ್ಷ ಹೋಗುವಂಥವರಾಗಿರುತ್ತಾರೆ. ಇಲ್ಲಿದೆ ನಿಜವಾದ ಅಪಾಯ! ಸರಕಾರ ಸಂಬಳ ಕೊಡಲು ಮುಂದಾದ ಮೇಲೆ, ಪರಿಷತ್ತಿನ ಸ್ವಾಯತ್ತತೆ ಎಲ್ಲಿ ಉಳಿಯುತ್ತದೆ? ಈಗ ತಮಗಿರುವ ತೊಂದರೆ ತಪ್ಪಿಸಿಕೊಳ್ಳಲು ಪರಿಷತ್ತು ಈ ಪದ್ಧತಿಗೆ ಒಪ್ಪಿಗೆ ನೀಡಿದರೆ, ಪರಿಷತ್ತನ್ನು ಸರಕಾರಕ್ಕೆ ಒಪ್ಪಿಸಿಕೊಟ್ಟ ಹಾಗಾಗುತ್ತದೆ. ಪರಿಷತ್ತಿನ ಶಕ್ತಿ ವೃದ್ಧಿಸುವವರೆಗೆ ಸರಕಾರದ ಯಾವ ಸಹಾಯವಾದರೂ ಸರಿಯೆ. ಅದು ಸಹಾಯಧನ ರೂಪದಲ್ಲಿಯೇ ಬರುವುದು ಅತ್ಯಂತ ಶ್ರೇಯಸ್ಕರವಾದದ್ದು.

ಆಡಳಿತ ವಿಕೇಂದ್ರೀಕರಣದ ಮಾತನ್ನಾಡಿದ್ದಾರೆ ಮರುಳಯ್ಯ. ಜಿಲ್ಲಾ ಪರಿಷತ್ತುಗಳ ಮುಂದೆ ಮತ್ತೇನು ವಿಕೇಂದ್ರೀಕರಣ? ಜಿಲ್ಲೆ ಜಿಲ್ಲೆಗಳಲ್ಲಿ ಪರಿಷತ್ತಿನ ಶಾಖೆಗಳಿವೆ. ಅಷ್ಟು ಸಾಕು. ಒಂದು ವೇಳೆ ವಿಭಾಗೀಯ ಕಚೇರಿಗಳನ್ನು ತೆರೆಯುವುದೇ ವಿಕೇಂದ್ರೀಕರಣ ಎನ್ನುವುದಾದರೆ ಅನಾವಶ್ಯಕ ವೆಚ್ಚವನ್ನು ಪರಿಷತ್ತು ಭರಿಸಬೇಕಾಗುತ್ತದೆ. ಅದಕ್ಕಾಗಿ ಕಟ್ಟಡ, ಸಿಬ್ಬಂದಿ ಇವಕ್ಕಾಗಿ ವೆಚ್ಚ ಮಾಡಬೇಕಾಗುತ್ತದೆ. ಬದಲಿಗೆ ವಿಭಾಗೀಯ ಕಚೇರಿಗಳನ್ನು ತೆರೆಯಲು ಉದ್ದೇಶಿಸಿರುವ ಮಂಗಳೂರು, ಧಾರವಾಡ, ಕಲ್ಬುರ್ಗಿ ಮೊದಲಾದ ಕಡೆ ಆಯಾ ಜಿಲ್ಲಾ ಪರಿಷತ್ತುಗಳೊಡನೆ ಹೊಂದಾಣಿಕೆ ಮಾಡಿಕೊಂಡು ಆ ಕೆಲಸ ಮಾಡಬಹುದಾಗಿದೆ. ಅಷ್ಟು ಮಾಡಿದರೆ ಸಾಕು.

ಭಾಷಾಂತರಗಳಿಗಾಗಿ ಪರಿಷತ್ತಿನಲ್ಲಿ ಒಂದು ಪ್ರತ್ಯೇಕ ಘಟಕವನ್ನು ಸ್ಥಾಪಿಸುವುದೂ ಮರುಳಯ್ಯನವರ ಮತ್ತೊಂದು ಆಶಯ. ಭಾರತೀಯ ಹಾಗೂ ಭಾರತದ ಹೊರಗಿನ ಅನೇಕ ಭಾಷೆಗಳ ಮುಖ್ಯ ಕೃತಿಗಳನ್ನು ಕನ್ನಡಕ್ಕೆ ತರುವುದೇನೋ ಒಳ್ಳೆಯ ಕೆಲಸವೇ. ಅದರಂತೆ ಕನ್ನಡದ ಮುಖ್ಯ ಕೃತಿಗಳನ್ನು ಹೊರಗಿನ ಭಾಷೆಗಳಿಗೆ ಭಾಷಾಂತರಿಸುವುದೂ ಅಗತ್ಯವೇ. ಆದರೆ ಅದಕ್ಕಾಗಿ ಪ್ರತ್ಯೇಕ ಘಟಕ ತೆರೆಯುವುದು ಈ ಸಮಯದಲ್ಲಿ

ಪರಿಷತ್ತು ಬಿಳಿಯಾನೆಯನ್ನು ಕಟ್ಟಿಕೊಂಡ ಹಾಗಾಗುತ್ತದೆ. ಬದಲಿಗೆ ಮೊದಲು ಯಾವ ಯಾವ ಕೃತಿಗಳನ್ನು ಭಾಷಾಂತರಿಸಬೇಕು ಎಂಬುದು ತೀರ್ಮಾನ ವಾಗಲಿ. ಅನಂತರ ಅವನ್ನು ಭಾಷಾಂತರಿಸುವಲ್ಲಿ ಆಸಕ್ತರಾದವರಿಗೆ, ಪರಿಣಿತರಾದವರಿಗೆ ಈ ಕೆಲಸವನ್ನು ವಹಿಸಬಹುದು. ಭಾಷಾಂತರಕ್ಕಾಗಿ ಒಂದು ಪ್ರತ್ಯೇಕ ಘಟಕವನ್ನೇ ಆರಂಭಿಸಿದರೆ ಅಲ್ಲಿ ಭಾಷಾಂತರಕ್ಕಿಂತ ಇತರ ಕೆಲಸಗಳೇ ಹೆಚ್ಚಾಗುತ್ತವೆ! ಎಂಬುದನ್ನು ಮರೆಯಬಾರದು. ಖರ್ಚಿನ ವಿಚಾರದಲ್ಲಿ ಎಚ್ಚರ ಬೇಕು.

ನಿಜವಾಗಿ ನೋಡಿದರೆ, ಪರಿಷತ್ತು ಈಗ ಮಾಡುತ್ತಿರುವ ಕೆಲಸಗಳಿಗೇ ಬದ್ಧವಾಗಿದ್ದರೆ ಸಾಕು. ಹೊಸ ಹೊಸ ಯೋಜನೆಗಳಿಗೆ ಆಸ್ಪದವೇ ಇಲ್ಲ. ಪರಿಷತ್ತು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಈಗ ಮಾಡುತ್ತಿರುವ ಕೆಲಸಗಳಿಗಿಂತ ಹೊಸದಾದುದನ್ನು ಮಾಡುವ ಅಗತ್ಯವೇ ಇಲ್ಲ. ಪರಿಷತ್ತು ಈಗ ಎರಡು ನಿಯತಕಾಲಿಕಗಳನ್ನು ತರುತ್ತಿದೆ. 'ಕನ್ನಡ ನುಡಿ' ಮತ್ತು 'ಸಾಹಿತ್ಯ ಪರಿಷತ್ಪತ್ರಿಕೆ' ಈ ಎರಡನ್ನೂ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ನಿಯತವಾಗಿ ಪ್ರಕಟಿಸುವ ಕಡೆ ಮರುಳಯ್ಯನವರು ಗಮನ ಕೊಡಬೇಕು. ಈ ಪ್ರಕಟಣೆಗಳು ಈಗ ಬೇಕಾಬಿಟ್ಟಿಯಾಗಿ ಪ್ರಕಟವಾಗುತ್ತಿವೆ. ಇದಕ್ಕೆ ಕಾರಣ ಪರಿಷತ್ತಿನ ಆರ್ಥಿಕ ಕೊರತೆಯೇ ಎಂದು ಕೇಳಿದ್ದೇನೆ. ಇದು ತಪ್ಪಬೇಕು. ಉಳಿದ ಪ್ರಕಟಣೆಗಳ ವಿಷಯದಲ್ಲಿಯೂ ಪರಿಷತ್ತು ವಿಶೇಷ ಗಮನ ತಾಳಬೇಕು. ಪರಿಷತ್ತಿನ ಪ್ರಕಟಣೆಗಳು, ಏನಿಲ್ಲವೆಂದರೂ ಮುದ್ರಣ ದೋಷಗಳಿಲ್ಲದೇ ಪ್ರಕಟಗೊಳ್ಳುವಂತಾಗಬೇಕು.

ಮರುಳಯ್ಯನವರು ತಮ್ಮನ್ನು ಕನಸುಗಾರರೆಂದು ಕರೆದುಕೊಂಡಿದ್ದಾರೆ. ಆದರೆ ಅಷ್ಟರಿಂದಲೇ ಪರಿಷತ್ತು ನಡೆಯಲಾರದು. ಮರುಳಯ್ಯನವರಿಗೆ ಇದು ಗೊತ್ತಿಲ್ಲದೇ ಇಲ್ಲ. ಆಡಳಿತದಲ್ಲಿ ಬಿಗಿಯಿರಬೇಕು. ಎಲ್ಲರನ್ನೂ ಎಲ್ಲ ಕಾಲದಲ್ಲಿಯೂ ಸಂತಸಪಡಿಸಲು ಹೋಗಬಾರದು. ಆಡಳಿತ ನಿರ್ವಹಣೆಯ ಈ ಕೆಲವು ಸೂತ್ರಗಳನ್ನು ಅರಿತುಕೊಂಡರೆ ಅವರು ಯಶಸ್ವಿಯಾಗುತ್ತಾರೆ. ಹಾಗೆ ಆಗಲಿ ಎಂಬುದೇ ನಮ್ಮ ಹೃದಯಪೂರ್ವಕವಾದ ಹಾರೈಕೆ. ಪರಿಷತ್ತಿನ ಬಗೆಗೆ, ಪರಿಷತ್ತಿನ ಹಣಕಾಸಿನ ಬಗೆಗೆ ಅವರು ತುಂಬಾ ಕಾಳಜಿಯ ಮಾತುಗಳನ್ನು ಆಡಿದ್ದಾರೆ. ತಮ್ಮ ಯೋಜನೆಗಳೇನು ಎಂಬುದನ್ನೂ ಹೇಳಿದ್ದಾರೆ. ಅದನ್ನೆಲ್ಲ ತುಂಬ ಎಚ್ಚರದಿಂದ ಪರಿಶೀಲಿಸಿ ಕಾರ್ಯೋನ್ಮುಖ ರಾಗಲಿ. ಕನ್ನಡ ಸಾಹಿತ್ಯ ಪರಿಷತ್ತು ಹೊಸ ದಿನಗಳನ್ನು ಕಾಣುವಂತಾಗಲಿ.

ಇವುಗಳಲ್ಲಿ ಕೆಲವನ್ನು ಪೂರ್ಣಗೊಳಿಸಿದ್ದೇನೆ. ಹಲವನ್ನು ಪೂರ್ಣಗೊಳಿಸಲಾಗದ್ದಕ್ಕೆ ವಿಷಾದಿಸಿದ್ದೇನೆ. ಪರಿಷತ್ತಿಗೆ ಒಳ್ಳೆಯದು ಮಾಡ ಹೋಗಿ ಕೆಲವು ಕೆಡಕುಗಳು ಆಗಿರುವುದು ನನಗೆ ಈಗೀಗ ಗೊತ್ತಾಗುತ್ತಿದೆ. ಹಾ.ಮಾ.ನಾ. ರವರ ಮಾತಿನ ಸತ್ಯಾಂಶ ಈಗ ನನ್ನ ಅರಿವಿಗೆ ಬರುತ್ತಿದೆ.

ನಾನು ಪರಿಷತ್ತಿನ ಅಧ್ಯಕ್ಷನಾದ ಮೇಲೆ ತುಂಬಾ ನೋವಿಗೀಡಾದೆ. ನನ್ನ ಮಿತ್ರರಾದ ಎನ್.ಎಂ. ಶಿವಕುಮಾರ್‌ರವರು ಹೇಳುತ್ತಿದ್ದರು. 'ಚುನಾವಣೆಗೆ ಮೊದಲು ನಿಮಗೆಷ್ಟು ಜನ ಮಿತ್ರರಿದ್ದಾರೋ ಅವರ ಎರಡರಷ್ಟು ಮಂದಿ ನೀವು ಗೆದ್ದ ಮೇಲೆ ನಿಮ್ಮ ಶತ್ರುಗಳಾಗುತ್ತಾರೆ' ಎಂದು. ಆ ಮಾತು ಸತ್ಯವಾಯಿತು. ಶಿಷ್ಯರು ಅನ್ನಿಸಿಕೊಂಡವರು ಕೆಲವರು ದ್ರೋಹ ಬಗೆದರು; ಸರಕಾರ ನನ್ನೊಡನೆ ಸಹಕರಿಸಲಿಲ್ಲ. ಆದರೆ ನನ್ನ ಸ್ನೇಹಿತರು ನನ್ನ ಕೈ ಬಿಡಲಿಲ್ಲ. ಜವಾಬ್ದಾರಿ ಸ್ಥಾನದಲ್ಲಿದ್ದ ಒಬ್ಬ ಹೆಂಗಸು ದಿನ ಬೆಳಗಾದರೆ ಪರಿಷತ್ತಿನ ಮೇಲೆ ಆಪಾದನೆಯ ಹೇಳಿಕೆ ಕೊಡುತ್ತಾ ಬಂದಳು ಪತ್ರಿಕೆಗಳಲ್ಲಿ. ನಾನವುಗಳಿಗೆ ಸತ್ಯವಾದ ಸಮಂಜಸ ಉತ್ತರ ಬರೆದರೂ ಅವಳಲ್ಲಿ ಅಧಿಕಾರವಿದ್ದರಿಂದ ಅವಳ ಕೈ ಮೇಲಾಯಿತು. ಜನರಲ್ಲಿ ಪರಿಷತ್ತಿನ ಬಗೆಗೆ, ನನ್ನ ಪ್ರಾಮಾಣಿಕತೆ ಉತ್ತರ ಬರೆದರೂ ಅವಳಲ್ಲಿ ಅಧಿಕಾರವಿದ್ದರಿಂದ ಅವಳ ಕೈ ಮೇಲಾಯಿತು. ಜನರಲ್ಲಿ ಪರಿಷತ್ತಿನ ಬಗೆಗೆ, ನನ್ನ ಪ್ರಾಮಾಣಿಕತೆ ಬಗೆಗೆ ತಪ್ಪು ಅಭಿಪ್ರಾಯ ಬರುವಂತೆ ಮಾಡಿದಳು. ನೈಚ್ಯತೆ ಈ ಮಟ್ಟಕ್ಕೇರುತ್ತದೆ ಎಂದು ಗೊತ್ತಾದದ್ದು ಆಗಲೆ. ಆದರೂ ಧೈರ್ಯಗೆಡದೆ ಒಳ್ಳೆಯ ಕಾರ್ಯಗಳನ್ನು ನಾನು ಮಾಡಿದ್ದೇನೆ. ನಾನು ಒಂದು ಪೈಸವನ್ನೂ ಪರಿಷತ್ತಿನಿಂದ ಪಡೆದಿಲ್ಲ. ಅದಕ್ಕೆ ಬದಲು ಸಹಸ್ರಾರು ರೂಪಾಯಿಗಳನ್ನು ಕೊಟ್ಟಿದ್ದೇನೆ. ನಾನು ಅಧ್ಯಕ್ಷ ಸ್ಥಾನದಿಂದ ನಿವೃತ್ತನಾದ ದಿನ ಪ್ರಕಟಿಸಿದ 'ಕನ್ನಡ ನುಡಿ'ಯಲ್ಲಿ ಎಲ್ಲ ವಿವರ ಕೊಟ್ಟಿದ್ದೇನೆ. ಆಸಕ್ತರು ನೋಡಿಕೊಳ್ಳಬಹುದು. ಸ್ವಂತ ಕೆಲಸಕ್ಕೆ ಪರಿಷತ್ತನ್ನು ಬಳಸಿಕೊಂಡಾಗ, ಸ್ವಂತ ವಿಷಯಕ್ಕಾಗಿ ಪರಿಷತ್ತಿನ ಫೋನ್ ಬಳಸಿಕೊಂಡಾಗ ಅದರ ಖರ್ಚನ್ನು ಕೊಟ್ಟು ರಸೀದಿ ಪಡೆದಿದ್ದೇನೆ. ಇಷ್ಟಾದರೂ ಬೊಗಳುವ ಬಾಯಿಗಳಿಗೆ ಬೀಗವಿಲ್ಲವಾಯಿತು. ಅದು ನನ್ನ ದುರಾದೃಷ್ಟ. ಆದರೂ ನನ್ನಲ್ಲಿ ಧೈರ್ಯ ತುಂಬಿ ಬದುಕನ್ನು ಸಹ್ಯಗೊಳಿಸಿದ ನನ್ನ ಅನಿಮಿತ ಬಂದು, ಪ್ರಾಣ ಮಿತ್ರ ಎಂ.ಎಂ. ಕಲಬುರ್ಗಿಯವರ ಸಮಯೋಚಿತ ಸಲಹೆಯಿಂದ ನಾನು ಬದುಕಿದ್ದೇನೆ. ಅವರ ಒಂದು ಪತ್ರ ಹೀಗಿದೆ. ನೋಡಿ:

ಆತ್ಮೀಯರಾದ
ಡಾ॥ ಸಾ.ಶಿ. ಮರುಳಯ್ಯ ಅವರಿಗೆ
ನಮಸ್ಕಾರಗಳು.

ಜನೇವರಿ ೨೬ರ ಪತ್ರ ತಲುಪಿದೆ. ಅನ್ಯಾಯಕ್ಕೆ ಗುರಿಯಾದ ನೀವು ನೋವು, ವಿಷಾದ ವ್ಯಕ್ತಪಡಿಸಿದುದು ಸಹಜವೇ ಆಗಿದೆ. ಬೆಂಗಳೂರಿನ ಬಹಳಷ್ಟು ಜನ

ಸ್ನೇಹಿತರು ನಿಮ್ಮಿಂದ ಸಹಾಯ ಪಡೆದು, ಮರು ಕ್ಷಣದಲ್ಲಿಯೇ ಮರೆಯುವುದನ್ನು, ತಿರುಗಿ ಬೀಳುವುದನ್ನು ಗಮನಿಸಿದ್ದೇನೆ. ಇದು ಇಂದಿನ ವ್ಯಕ್ತಿಗಳ ಗುಣವಿಶೇಷ. ಇಂಥ ಅನುಭವ ನನಗೂ ಆಗಿದೆ, ಆಗುತ್ತಲಿದೆ. ಅದೇನೇ ಇರಲಿ, ಯಾವುದಕ್ಕೂ ಧೈರ್ಯಗೆಡಬಾರದು. ನಿಮ್ಮ ಒಳ್ಳೆಯ ಗುಣವೇ ನಿಮಗೆ ಮುಳುವಾಗುತ್ತಲಿದೆ. ನಿಮ್ಮ ಜೊತೆ ನಾನಿದ್ದೇನೆ. ಇದನ್ನು ನೀವು ನಂಬಬೇಕು. ಕಾಲ ಕೂಡಿಬರುವುದನ್ನು ನಾನು ನಿರೀಕ್ಷಿಸುತ್ತಿದ್ದೇನೆ? ಅಷ್ಟೇ.

ಪರಿಷತ್ತಿನ ಆರ್ಥಿಕ ಸ್ಥಿತಿಯ ಬಗ್ಗೆ ಬರೆದಿರುವಿರಿ. ಇಂದು ಎಲ್ಲ ಸಂಸ್ಥೆಗಳ ಹಣೆಯ ಬರೆಹ ಹೀಗೆಯೇ ಆಗಿದೆ. ನಿಮ್ಮ ಅವಧಿಯಲ್ಲಿ ದತ್ತಿ ನಿಧಿ ಸಂಗ್ರಹಿಸಿರುವಿರಿ, ಉತ್ತಮ ಕೃತಿ ಪ್ರಕಟಿಸಿರುವಿರಿ, ಸಮ್ಮೇಳನಕ್ಕೆ ಘನತೆವೆತ್ತ ಅಧ್ಯಕ್ಷರನ್ನು ಆಯ್ಕೆ ಮಾಡಿರುವಿರಿ, ಸಿಬ್ಬಂದಿಗಳ ಪಗಾರ ವ್ಯವಸ್ಥೆ ಮಾಡಿರುವಿರಿ. ಇಂದಿನ ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚು ಮಾಡಲು ಯಾರಿಗೂ ಸಾಧ್ಯವಿಲ್ಲ.

ಪರಿಷತ್ತಿಗೆ ಕಂಪ್ಯೂಟರ್ (ರಾಗಿಣಿ ಕೊಡುಗೆ) ನೀಡಿ ತಪ್ಪು ಮಾಡಿದಿರಿ.ಈಗ ೪೩೨ ಹಸ್ತ ಪ್ರತಿ ಕೊಟ್ಟು ಇನ್ನೊಂದು ತಪ್ಪು ಮಾಡಿದಿರಿ. ಔದಾರ್ಯದ ಉರುಳಿನಲ್ಲಿ ನೀವಾಗಿಯೇ ಕತ್ತು ಚಾಚುತ್ತಿದ್ದು ನಿಮ್ಮ ಹುಟ್ಟುಗುಣ. ಯಾರೇನು ಮಾಡುವುದು? ನಿಮ್ಮ ಹಸ್ತಪ್ರತಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಡಿರಿ. ಅದೇ ಒಂದು ಸುದ್ಧಿಯಾಗುತ್ತದೆ.

ಇದಕ್ಕಿಂತ ಹೆಚ್ಚಿಗೆ ಬರೆಯಲಾರದವನಾಗಿದ್ದೇನೆ. ನಾನು ಹಿಂದೆ, ಇಂದು, ಮುಂದೆಯೂ ನಿಮ್ಮ ಜೊತೆ ಇರುವವನಾಗಿದ್ದೇನೆ. ನೇರ ನಿರಾಳ ಸ್ವಭಾವದ ನಿಮ್ಮಂಥ ಸ್ನೇಹಿತರು ಲಭಿಸಿದುದು ನನ್ನ ಭಾಗ್ಯ. ಮನೆಯಲ್ಲಿ ಸೋದರಿ ವೀಣಾ ಅವರಿಗೆ ನಮಸ್ಕಾರ ಹೇಳಿರಿ.

ವಂದನೆಗಳು, ವಿಶ್ವಾಸದ

೩೦.೧.೯೮ **ಎಂ. ಎಂ. ಕಲಬುರ್ಗಿ**

ನನ್ನ ಸಾವಿರ ಮಾತುಗಳಿಗೆ ಕಲಬುರ್ಗಿಯವರ ಇದೊಂದು ಪತ್ರ ಸಾಕ್ಷಿ ಹೇಳುತ್ತದೆ. ಅಲ್ಲವೇ?

ದಿನಾಂಕ ೨೮.೧.೨೦೦೧ಕ್ಕೆ ಸರಿಯಾಗಿ ನನಗೆ ಎಪ್ಪತ್ತು ವರ್ಷ ತುಂಬುತ್ತದೆ. ಇದರ ಸುಸ್ಮೃತಿಯ ಕುರುಹಾಗಿ ನನ್ನ ಅಭಿಮಾನಿಗಳು ಸಹಸ್ರ ಸಂಖ್ಯೆ ಸೇರಿ ರಾಜ್ಯಮಟ್ಟದಲ್ಲಿ ಒಂದು ಸಂಮಾನ ಸಮಾರಂಭ ಏರ್ಪಡಿಸಿದ್ದಾರೆ. ಇದು ಹರ್ಷದಾಯಕವೆ. ಇದು ಡಾ॥ ಪುಟ್ಟಶಂಕರಪ್ಪನವರ ಕಾರ್ಯದರ್ಶಿತ್ವದಲ್ಲಿ ೧೯೬೫ರಲ್ಲಿ ಆರಂಭವಾಗಿತ್ತು.

ಕಾರಣಾಂತರಗಳಿಂದ ಅಜ್ಞಾತವಾಗಿದ್ದು ಈಗ ಬೆಳಕಿಗೆ ಬಂದಿದೆ. ಇದಕ್ಕೆ ಕಾರಣರಾದ ಎಲ್ಲ ನನ್ನ ಸೋದರ ಸೋದರಿಯರಿಗೂ ಹಿರಿಯರಿಗೂ ನನ್ನ ನಮನಗಳು ಸಲ್ಲುತ್ತವೆ. ನನಗೆ ಸಂದಾಯವಾಗುತ್ತಿರುವ ಈ ಮನ್ನಣೆಯ ಮಣೆಯ ಹಿನ್ನೆಲೆಯಲ್ಲಿ ನನ್ನ ತಂದೆ ತಾಯಂದಿರು ಮಾಡಿದ ಪುಣ್ಯ, ನನ್ನ ಆತ್ಮೀಯ ಅಭಿಮಾನಿಗಳ ಆಶಯ, ಗುರು ಹಿರಿಯರ ಆಶೀರ್ವಾದಗಳಿವೆ. ನನ್ನನ್ನು ದ್ವೇಷಿಸಿದವರ, ಮಾಡಬಾರದ್ದನ್ನು ಮಾಡಿದ ಮಹನೀಯರ ಮರೆಯ ಆಶೀರ್ವಾದವೂ ಇದೆ. ಆದರೆ ಇವೆಲ್ಲವನ್ನೂ ಮೈಗೂಡಿಸಿಕೊಂಡು ನಾನು ನಾನಾಗಲು ಯತ್ನಿಸಿದ್ದೇನೆ. ಇದರ ಸೋಲು ಗೆಲವುಗಳನ್ನು ನಿಷ್ಪಕ್ಷಪಾತದ ಸಹೃದಯ ವಿಮರ್ಶಕರು ಗುರುತಿಸಿಕೊಳ್ಳಬೇಕಿದೆ. ಕಡೆಯದಾಗಿ ನನ್ನ ಮನವಿ ಇಷ್ಟೇ:

ನಾನೊಬ್ಬ ಕನಸುಣಿ. ಹಲವಾರು ಸುಂದರ ಸ್ವಪ್ನಗಳನ್ನು ಕಟ್ಟಿಕೊಂಡು ಹುಟ್ಟಿದೆನೆಂದು ತೋರುತ್ತದೆ. ಚಿಕ್ಕಂದಿನಿಂದಲೂ ನಾನು ಅದಾಗಬೇಕು, ಇದಾಗಬೇಕು ಎಂಬೆಲ್ಲ ಹಂಬಲಗಳನ್ನು ತುಂಬಿಕೊಂಡಿದ್ದೆ. ತುಂಬು ಆಶಾವಾದಿಯಾಗಿಯೇ ಬದುಕಿನ ಹಾದಿಯಲ್ಲಿ ದಿಟ್ಟ ಹೆಜ್ಜೆ ಇಟ್ಟೆ. ನನ್ನ ಹಲವು ಆಸೆಗಳು ಹಣ್ಣಾಗಿವೆ, ಕೆಲವು ಮಣ್ಣಾಗಿವೆ. ಅವು ಈಡೇರಿದ್ದರಿಂದ ಹಿಗ್ಗಿಲ್ಲ, ಈಡೇರದಿದ್ದರಿಂದ ಕುಗ್ಗಿಲ್ಲ. ಆದರೂ ಚಣದ ನೋವು ನನ್ನೆದೆಯನ್ನು ಮಿಡಿಯದಿಲ್ಲ. ಅದು ಸಹಜ ಅಲ್ಲವೆ? ನಾನೂ ಮನುಷ್ಯನಲ್ಲವೆ? ಮಾನವ ಸಹಜವಾದ ಗುಣಗಳನ್ನು ಮೆರೆದಿದ್ದೇನೆ. ದೋಷಗಳೂ ನನ್ನಲ್ಲಿವೆ. ಇಲ್ಲವೆನ್ನುವುದಿಲ್ಲ. ಆದರೆ ದೋಷಗಳನ್ನು ತಿದ್ದಿಕೊಂಡಿದ್ದೇನೆ. ಈಗಲೂ ತಿದ್ದಿಕೊಳ್ಳುತ್ತಲೇ ಇದ್ದೇನೆ. ತಪ್ಪು ಮಾಡದ ಅಪ್ಪಗಳೇ ಇಲ್ಲ ಎಂಬುದಾಗಿ ನನಗೆ ನಾನೇ ಸೈದ್ಧಾಂತಿಸಿಕೊಂಡಿದ್ದೇನೆ. ನಾನು ದೊಡ್ಡ ಕವಿ, ಶ್ರೇಷ್ಠ ವಿಮರ್ಶಕ, ತಲಸ್ಪರ್ಶಿ ಸಂಶೋಧಕ ಅಲ್ಲದಿದ್ದರೂ ಅಹಂಭಾವದ ಮೊಟ್ಟೆಯಂತೂ ಆಗಿಲ್ಲ. ವಿನಯ ನನ್ನ ತಂದೆಯಿಂದ ಬಂದದ್ದು, ಸ್ವಾಭಿಮಾನ ನನ್ನ ತಾಯಿಯ ಬಳುವಳಿ, ಸಹಜತೆ ನನ್ನ ಹೆಂಡತಿಯ ಕೊಡುಗೆ. ಇವೆಲ್ಲವುಗಳಿಂದ ನಾನು ಪರಿಪೋಷಿತನಾಗಿದ್ದೇನೆ. ನನ್ನಾತ್ಮವನ್ನು ಬೆಳೆಸಿಕೊಂಡಿದ್ದೇನೆ. ಹೆತ್ತ ತಾಯಿಯಷ್ಟೇ, ಭಕ್ತಿಯನ್ನು ಹೊತ್ತ ನೆಲದ ಮೇಲೂ ಇಟ್ಟಿದ್ದೇನೆ. ನನ್ನ ತಾಯ್ನುಡಿಯನ್ನು ಅಷ್ಟೇ ಪ್ರಮಾಣದಲ್ಲಿ ಅಪ್ಪಿದ್ದೇನೆ. ನನ್ನ ಮಿತಿಯಲ್ಲಿ ನಾನು ದೇಶ ಸೇವೆ, ಸಮಾಜ ಸೇವೆ, ಸಾಹಿತ್ಯ ಸೇವೆ ಮಾಡಿದ್ದೇನೆ. ಆ ತೃಪತ್ತಿ ನನಗಿದೆ. ನಾನು ಏನಾಗದಿದ್ದರೂ, ನಾನು ನಾನಾಗಿದ್ದೇನೆ, ಮನುಷ್ಯನಾಗಿದ್ದೇನೆ. ನನಗಷ್ಟು ಸಾಕು. ಅದಕ್ಕೂ ಮಿಗಿಲಾದ ಮುಕ್ತಿ ಎಂಬುದಿದ್ದರೆ, ಅದು ನನಗೆ ಬೇಡ.

**ನಮಸ್ಕಾರ.**

# ಸಾಶಿಮ ಸೂಕ್ತಿಗಳು

ಅಸೂಯೆ ಪಡದ ಬಂಧುಗಳನ್ನು
ಪಡೆದವನೆ ಭಾಗ್ಯಶಾಲಿ

*

ಆತ್ಮ ನಿಂದೆ ಮಹಾಪಾಪ

*

ಆತ್ಮರತಿ ಅನಂತ ಪ್ರೀತಿ

*

ಆದ್ಯತನವನ್ನು ತಿಳಿಯ ಬೇಕಿದ್ದರೆ
ಪ್ರಾಚೀನವನ್ನು ನೆನೆಯಬೇಕು

*

ಇತಿಹಾಸವನ್ನೇ ರಚಿಸದ ಭಾರತೀಯರಿಗೆ
ಐತಿಹಾಸಿಕ ಸತ್ಯವೆನ್ನುವುದು ಒಂದು ಕಲ್ಪನೆಯ ವಸ್ತು

*

ಉಕ್ಕಿನ ಕತ್ತಿಗಿಂತ ಮಾತಿನ ಕತ್ತಿ ತುಂಬಾ ಘಾತುಕ
ಕತ್ತಿಯಿಂದಾದ ಗಾಯ ಕೆಲವು ಗಂಟೆಗಳ ಕಾಲ ಉರಿಯುತ್ತೆ
ಆದರೆ ಮಾತಿನಿಂದಾದ ಗಾಯ ಸಾಯುವವರೆಗೂ ಕೊರೆಯುತ್ತೆ

*

ಒಮ್ಮೊಮ್ಮೆ ಸತ್ಯ ಕಲ್ಪನೆಗಿಂತಲೂ ಅದ್ಭುತ

*

ಕಲಾವಿದನಾಗುವವನಿಗೆ ಸಂಸ್ಕಾರ ತ್ರಯಗಳು ಬೇಕು;
ಸಂಸ್ಕಾರ ಸದ್ಗುರು ಅನುಗ್ರಹ ಸ್ವಯಂ ಶ್ರಮ ಸಾಧನೆ

*

ಕವಿ ಕಲಾವಿದರು ಬಹಳ ಜನ ಬಡವರು;
ಆದರೆ ಭಿಕ್ಷುಕರಲ್ಲ

*

ಕಾರ್ಯದಲ್ಲಿ ಸಂವೇದನೆ ಬದಲಾದರೆ
ಸಂವಹನ ಬದಲಾಗುತ್ತದೆ.

*

ಕೀರ್ತಿವಂತರನ್ನು ಗುರುತಿಸುವುದು ಸುಲಭ,
ಆದರೆ ಕೀರ್ತಿಶೇಷರನ್ನು ನೆನೆಯುವುದು ದುರ್ಲಭ

*

ಕೂಡಿ ಬಾಳಿದರಲ್ಲಿ ಕೈಲಾಸವಿರುವುದು

*

ಕೊಲ್ಲುವ ಕೈಗಿಂತ ಕಾಯುವ ಕೈಗೆ ಹೆಚ್ಚು ಶಕ್ತಿ ಬೇಕು

*

ಚಿತ್ರಗಾರನಿಗೆ ರೇಖೆ, ಕವಿಗೆ ಭಾಷೆ, ಸಂಗೀತಗಾರನಿಗೆ
ರಾಗ, ನೃತ್ಯಗಾರ್ತಿಗೆ ತಾಳ, ಶಿಲ್ಪಿಗೆ ಮುಖಭಾವ ಮುಖ್ಯ

*

ಚೆಲ್ಲಿದ ಹಾಲು ಬಳಿಯಲು ಬರುವುದಿಲ್ಲ

*

ಜನಪ್ರಿಯತೆ ಗಳಿಸಿದುದೆಲ್ಲವೂ ಶ್ರೇಷ್ಠವಲ್ಲ

*

ಜಾತ್ಯಾತೀತ ರಾಷ್ಟ್ರವಾದ ಭಾರತದಲ್ಲಿ
ಜಾತೀಯತೆ ರುದ್ರತಾಂಡವವಾಡುತ್ತಿರುವುದು ಒಂದು ವಿಪರ್ಯಾಸ

*

ಜೀವನದಲ್ಲಿ ಗೆಲುವೇ ಸರ್ವಸ್ವ ಅಲ್ಲ;

*

ದಾನ ಪಡೆದದ್ದು ದಾರಿದ್ರ್ಯ ತರುತ್ತೆ

*

ಧಾರ್ಷ್ಟ್ಯಕ್ಕೆ ಎಂದಿದ್ದರೂ ದಯನೀಯ ಸೋಲು

*

ದ್ವೇಷಮಂ ತ್ವೇಷದಿಂ ಗೆಲ್ಲಬೇಕು

*

ಧರ್ಮ ಬೋಧಕ ಪ್ರವಾದಿ
ಕರ್ಮ ಪ್ರಚೋದಕ ಮಂತ್ರವಾದಿ
ಇವುಗಳ ಮರ್ಮ ತಿಳಿದವನೇ ಮುತ್ಸದ್ಧಿ

ನಮ್ಮ ಅವಿವೇಕಕ್ಕೆ ದೇವರನ್ನು ದೂರುವುದು,
ದೈವಕ್ಕೆ ಮಾಡಿದ ಅಪಚಾರವಲ್ಲದೆ ಬೇರಲ್ಲ

*

ನಮ್ಮ ಕೈಗೆ ಮೀರಿದ್ದೆಲ್ಲಾ ಆಕಸ್ಮಿಕ ಅಲ್ಲ

*

ನಮ್ಮ ಮನಸ್ಸು ಒಮ್ಮೊಮ್ಮೆ ಸೋಲುವುದುಂಟು
ಅದು ದೈವಾನುಗ್ರಹದ ಸಂಕೇತ

*

ನಾಳಿನ ಚಿಂತೆಗಾಗಿ ಇಂದೇ ಕೊರಗುವುದು ಬೇಡ

*

ನಿನ್ನೆ ನಾಳೆಗಳೊಂದಿಗೆ ಇಂದನ್ನು ಕಾಣುವುದು ಹಿರಿಯ ಗುಣ

*

ನೆನಪಿನಲಿ ಸವಿಯಹುದು

*

ನೋವಿಲ್ಲದ ಬಾಳಿಲ್ಲ;
ಬಾಳಿಲ್ಲದು ನೋವಿಲ್ಲ
ನೋವು ನಲಿವು ಸಮ್ಮಿಶ್ರಣ
ಇಂತೀ ಬಾಳು ನಂದನ

*

ಪರಂಪರೆ ಮತ್ತು ಸಂಪ್ರದಾಯಗಾರ
ಎಲ್ಲೆ ಕಟ್ಟನ್ನು ಮೀರುವುದು ಸಂಸ್ಕೃತಿಯನ್ನು
ತಿರಸ್ಕರಿಸಿದಂತೆ ಎಂದು ಅರ್ಥವಲ್ಲ, ಅದು
ಪ್ರಗತಿಯ ಸೂಚನೆ

*

ಪಾಪ ಇರುವುದು ಕೃತಿಯಲ್ಲಲ್ಲ, ಅಂಗಿತದಲ್ಲಿ
ಗಾಂಧೀಜಿ ಪಠಾಣನವನ್ನು ಕ್ಷಮಿಸಿದ್ದು ಈ ಅರ್ಥದಲ್ಲಿ.
ವಿಷವನ್ನು ದ್ವೇಷಿಸಿದ, ಹಾವನ್ನು ಪ್ರೀತಿಸಿದ ಗಾಂಧಿ

*

ಪೂರ್ವಾರ್ಜಿತ ಪರಿಕಲ್ಪನೆ ಸಾಮಾನ್ಯನ
ತಾತ್ಕಾಲಿಕ ಮಾನಸಿಕ ತೃಪ್ತಿಗಿತ್ತ ಸಮಾಧಾನ

*

ಪ್ರತಿಯೊಂದು ಮತಧರ್ಮವೂ ಬಿಡುಗಡೆಯ ಮಾರ್ಗವಾಗಿ
ಆರಂಭಗೊಂಡು ಅಂತ್ಯದಲ್ಲಿ ವಿಶಾಲ ಸೆರೆಮನೆಯಾಗಿ
ಪರಿಣಾಮಗೊಳ್ಳುತ್ತದೆ

*

ಪ್ರಭಾವ ಎನ್ನುವುದು ಬೌದ್ಧಿಕ ಸ್ತರದಲ್ಲಾಗುವ ನೆನಪಿನ ನೆರಳು

*

ಪ್ರಶಸ್ತಿಯೇ ಪ್ರತಿಭೆಯ ಒರೆಗಲ್ಲಲ್ಲ

*

ಬಡವರೆಲ್ಲರೂ ಕಳ್ಳರಲ್ಲ, ಶ್ರೀಮಂತರೆಲ್ಲರೂ ಸತ್ಯವಂತರಲ್ಲ

*

ಬಾಗಿಲು ಕಾಯುವ ನಾಯಿ ಒಡೆಯನ ಪರ ಬೊಗಳುವುದು ಸಹಜ

*

ಬೊಗಳಲೂ ತ್ರಾಣವಿಲ್ಲದ ನಾಯಿ
ಭಿಕ್ಷುಕನ ಕೈ ನೆಕ್ಕಲು ಹೋಗುತ್ತೆ

*

ಬ್ಲಡ್ಡು ಮತ್ತು ದುಡ್ಡು ಸದಾ ಹರಿಯುತ್ತಿರಬೇಕು ಒಂದೆಡೆ ನಿಂತರೆ ಅಪಾಯ

*

ಭಾವದಲ್ಲಿ ಶುದ್ಧವಿದೆ, ಬಯಲೇನ ಮಾಡೀತು

*

ಮಕ್ಕಳಿದ್ದವರಿಗೆ ಮಾನವಿಲ್ಲ;
–ಗಾದೆ
ಅಹುದು
ಮಕ್ಕಳಿಲ್ಲದವರಿಗೆ ಬಾಳೇ ಇಲ್ಲ.

*

ಮನುಕುಲದ ಬಾಂಧವ್ಯ ಒಲವನಾಧರಿಸಿ ನಿಂತಿಹುದು

*

ಮರಣವನ್ನು ಗೆಲ್ಲುವುದು ಮಾರನಿಗೂ ದುಸ್ಸಾಧ್ಯ
ಮಾನವತೆ ಎಂಬುದು ಮಾನವನ ಹೃದಯ ರತ್ನ

*

ಮಾನವನ ಕರ್ತವ್ಯ ಎರಡು:
ಪ್ರೀತಿ ಒಂದು ನೇತಿ ಮತ್ತೊಂದು

ಮೀಸಲಾತಿ ನೀತಿ ಜಾತಿಯ ಆಧಾರದ ಮೇಲೆ
ನಿರ್ಧರಿತವಾಗಬಾರದು; ಅದು ಉಳ್ಳವರು ಎಂಬ ಪರಿಗಣನೆಯಿಂದ
ನಿರ್ಧಾರಗೊಳ್ಳುವುದು ಸೂಕ್ತ

*

ಮೃತ್ಯು ದೇವತೆಗೆ ಮುದಿ ಮಾಂಸಕ್ಕಿಂತ ಎಳೆಯ ಮಾಂಸದ ಮೇಲೆ ಪ್ರೀತಿ ಹೆಚ್ಚು
ಆದ್ದರಿಂದಲೇ ಅಪ್ರಾಪ್ತ ವಯಸ್ಕರನ್ನು ಬಹುಬೇಗ ಕೊಂಡೊಯ್ಯುತ್ತಾನೆ.

*

ಮೃತ್ಯುವನ್ನು ವಂಚಿಸುವುದು ಯಾರಿಂದಲೂ ಸಾಧ್ಯವಿಲ್ಲ.

*

ಮೈಕೊಳೆಗಿಂತ ಮನಸ್ಸಿನ ಕೊಳೆ ತುಂಬಾ ಅಪಾಯಕಾರಿ

*

ಯಾವ ಮಾತನ್ನೂ ಅಲ್ಲವೆಂದು, ತಿರಸ್ಕರಿಸದಿರುವುದು ಬುದ್ಧಿವಂತಿಕೆ;
ಸದ್ಭಾವನೆಯ ನಿರ್ಧಾರ ಅಪ್ಪಿಕೊಳ್ಳುವುದು ಹೃದಯವಂತಿಕೆ.

*

ವಿಚಾರದ ದಿಕ್ಕು ಆರಂಭದಲ್ಲಿ ಸ್ವಲ್ಪ ಬದಲಾದರೂ
ಆಗ ಇಡೀ ಜೀವನದ ಗುರಿಯೇ ಬದಲಾಗಿರುತ್ತೆ

*

ಸತ್ಯಕ್ಕೆ ಸಾವಿಲ್ಲ; ಮಿಥ್ಯಕ್ಕೆ ಬದುಕಿಲ್ಲ

*

ಸ್ವರ ಮೈತ್ರಿಯಿಂದ ಸಂಗೀತ;
ಸಮರಸತೆಯಿಂದ ಜೀವನ ಹಿತ

*

ಹೆಣ್ಣು ನನಗೆ ಬಿಡಿಸಲಾಗದ ಒಗಟು

~ * ~

# ಸಾಶಿಮ ಸಂದರ್ಶನ

ಪ್ರಿಯರೇ,

ಸವಿನಯ ವಂದನೆಗಳು

ಕನ್ನಡದ – ಉದಯೋನ್ಮುಖ ಮುಖ್ಯವಾಗಿ – ಬರಹಗಾರರ ಸಚಿತ್ರ ಪರಿಚಯ ಸಂಗ್ರಹಿಸಿ, ಪ್ರಕಟಿಸುವ ಉದ್ದೇಶದಿಂದ ನಾನು ರೂಪಿಸಿದ ಯೋಜನೆಯನ್ವಯ ತಮಗೀ ಪತ್ರ ಬರೆಯುತ್ತಿದ್ದೇನೆ.

ದಯವಿಟ್ಟು;

೧. ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ಶೀಘ್ರವಾಗಿ ರವಾನಿಸಿ

೨. ನಿಮ್ಮ ಭಾವಚಿತ್ರದ ನಕಲೊಂದನ್ನು ಸಾಧ್ಯವಿದ್ದಲ್ಲಿ ಎರಡನ್ನು, ಪತ್ರಿಕೆಗೊಂದು ಪುಸ್ತಕ್ಕೊಂದು ಜೊತೆಗೆ ಕಳುಹಿಸಿ.

೩. ನಿಮ್ಮ ಮಿತ್ರರ (ಲೇಖಕ) ವಿಳಾಸ ಒದಗಿಸಿ, ಈ ಯೋಜನೆಯ ಅಭಿವೃದ್ಧಿಗೆ ಸಹಕರಿಸಿ.

**ಈ ಯೋಜನೆಯ ಬರಹಗಳು**

೧. ಪ್ರಸ್ತುತ ಕಿನ್ನಿಗೋಳಿಯ "ಯುಗಪುರುಷ" ಮಾಸದಲ್ಲಿ ಪ್ರಕಟವಾಗುತ್ತಾ ಇದೆ. ಅಲ್ಲದೆ

ಮುಂದೆ

೧. ಕಾರ್ಕಳದ 'ಕೃಷಿಕರ ಸಂಘಟನೆ' ಸಾಪ್ತಾಹಿಕದಲ್ಲೂ

೨. ಪರಿಷತ್ತಿನ 'ಕನ್ನಡ ನುಡಿ'ಯಲ್ಲೂ ಪ್ರಕಟಿಸಲಾಗುವ ಸಾಧ್ಯತೆಗಳಿವೆ.

ಪ್ರೀತಿ ಇರಲಿ,

ಆಗಾಗ ಬರೆಯುತ್ತಿರಬೇಕಾಗಿ ಅಪೇಕ್ಷೆ. ಇಂತಿ ತಮ್ಮ ಸ್ನೇಹಾಕಾಂಕ್ಷಿ

**ಮೋಹನದಾಸ ಜಿ. ಕಿಣಿ.**

**ಪ್ರಶ್ನೆಗಳು**

೧. ನಿಮ್ಮ ಮನೆತನವು ನಿಮ್ಮ ಸಾಹಿತ್ಯ ಕ್ಷೇತ್ರದ ಪ್ರವೇಶಕ್ಕೆ ಕಾರಣವೇ?

೨. ನಿಮ್ಮ ಜನ್ಮ, ವಿದ್ಯಾಭ್ಯಾಸ, ಮಾತಾಪಿತೃ ಮತ್ತಿತರ ವಿವರ ಒದಗಿಸಿ.

೩. ನೀವು 'ಸಾಹಿತಿ' ಆದದ್ದು ಹೇಗೆ?

೪. ನಿಮ್ಮ ಪ್ರಕಟಿತ ಪ್ರಥಮ ಕೃತಿಗಳು ಯಾವುವು? ಅವುಗಳ ಬಗ್ಗೆ ನಿಮ್ಮ ಸ್ವಂತ, ವಾಚಕವೃಂದದ, ವಿಮರ್ಶಕರ ಅಭಿಪ್ರಾಯವೇನು?

೫. ನಿಮ್ಮ ಮೆಚ್ಚಿನ ಮಾರ್ಗದರ್ಶಕ, ಸಾಹಿತ್ಯ, ಸಾಹಿತಿ ಯಾರು? ಏಕೆ?

೬. ನೀವು ಯಾವ ಬಗೆಯ ರಚನೆ ಬಯಸುತ್ತೀರಿ.? ಅವುಗಳ ವಸ್ತು ಯಾವುದು? ಏಕೆ?

೭. ನಿಮ್ಮ ರಚನೆಗಳಲ್ಲಿ ನಿಮ್ಮ ಮೆಚ್ಚಿನ ತೃಪ್ತಿ ನೀಡಿದ ಗೌರವ ತಂದ ಕೃತಿ ಯಾವುವು? ಏಕೆ?

೮. 'ಸಾಹಿತಿಯ ಕರ್ತವ್ಯ' ಮತ್ತು 'ಸಾಹಿತ್ಯದ ಸ್ವರೂಪ'ಗಳ ಬಗ್ಗೆ ನಿಮ್ಮ ಅಭಿಪ್ರಾಯ ನೀಡಿ.

೯. ಕನ್ನಡ ಸಾಹಿತ್ಯ ಕ್ಷೇತ್ರ ಹೇಗಿತ್ತು? ಹೇಗಿದೆ? ಮತ್ತೆ ಮುಂದೆ ಹೇಗಾಗಬಹುದೆಂದು ಅಭಿಪ್ರಾಯ ಪಡುತ್ತೀರಿ?

೧೦. ಕನ್ನಡದ, ಕನ್ನಡಿಗರ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ನಿಮ್ಮ ಬಿಚ್ಚು ಮನಸ್ಸಿನ ಅಭಿಪ್ರಾಯ ನೀಡಿ.

೧. ನಮ್ಮದು ಓಚಯ್ಯಗಳ ಮನೆತನ. ನಮ್ಮ ತಂದೆ, ನಮ್ಮ ದೊಡ್ಡಪ್ಪ, ನಮ್ಮ ಸೋದರಮಾವ, ನಮ್ಮ ಬಳಗದಲ್ಲಿ ಅನೇಕರು ಹಿಂದಿನ ಕಾಲದ ಕೂಲೀಮಠದ ಓಚಯ್ಯಗಳು. ಆ ಕಾಲದ ಉತ್ತಮ ವರ್ಗದ ವಿದ್ವಾಂಸರು ಅನ್ನಿಸಿಕೊಂಡವರು.

ಅವರ ಪ್ರಭಾವ ಅಪ್ರತ್ಯಕ್ಷವಾಗಿ ನನ್ನ ಮೇಲಾಗಿರಬಹುದು. ನಾನು ಸಾಹಿತ್ಯ ಕ್ಷೇತ್ರಕ್ಕೆ ಕಾಲಿರಿಸಲು ನಮ್ಮ ಪೂಜ್ಯ ತಂದೆ, ತಾಯಿ ಇಬ್ಬರೂ ಪ್ರೇರಕ ಶಕ್ತಿಗಳು.

೨. ೨೮-೧-೧೯೩೧ ರಲ್ಲಿ ಹುಟ್ಟಿದ್ದು<br>
ಸ್ಥಳ : ಸಾಸಲು, ಚಿಕ್ಕ ನಾಯಕನಹಳ್ಳಿ, ತಾಲ್ಲೂಕು, ತುಮಕೂರು ಜಿಲ್ಲಾ<br>
ತಂದೆ : ಪ್ರೊ. ಶಿವರುದ್ರಯ್ಯನವರು<br>
ತಾಯಿ : ಶ್ರೀಮತಿ ಸಿದ್ಧಮ್ಮನವರು.<br>
ನಾನು ಮತ್ತು ನನ್ನ ತಮ್ಮ ಶ್ರೀ ಶಾಂತಮೂರ್ತಿ ಇಬ್ಬರೇ ಮಕ್ಕಳು.

ನಮ್ಮ ತಾಯಿಯವರ ತೌರೂರು ಶೆಟ್ಟೀಕೆರೆ. ಕುಮಾರ ಒಡೆಯರ ಕುಮಾರ್ತೆ.

ನಮ್ಮ ತಂದೆಯವರು ರೇವಣ್ಣಯ್ಯ ಮತ್ತು ರುದ್ರಮ್ಮ ಇವರ ಪುತ್ರರು. ತಮ್ಮ ತಂದೆಗೆ ಕಡೆಯ ಮಕ್ಕಳು. ಸಂಭಾವಿತರು, ಉತ್ತಮ ಜಂಗಮ ಜ್ಯೋತಿಗಳೆನ್ನಿಸಿದ್ದವರು.

೩. ನಾನು ತುಂಬಾ ಕನಸುಣಿ. ಎಳಮೆಯಲ್ಲಿ ಅನೇಕ ರೀತಿಯ ಕನಸು ಕಂಡು ಅಂತಾಗ ಬಯಸಿದೆ. ಪ್ರಯತ್ನಿಸಿದೆ. ಆದೆ ನನ್ನ ಕಲೆಗೆ ನನ್ನ ಪೂಜ್ಯ ತಂದೆ ಮುಖ್ಯ ಕಾರಣರು.

೪. ನನ್ನ ಚೊಚ್ಚಲ ಕವನ ಹಾಸ್ಟೆಲಿನಲ್ಲಿ ನನ್ನ ಸ್ನೇಹಿತನನ್ನು ಗೇಲಿ ಮಾಡಲು ಬರೆದವು. ಅವೆಲ್ಲಾ ವೈನೋದಿಕ ರಚನೆಗಳು ಅಷ್ಟೇ. ಆದರೆ ನಾನು ಮೊದಲು ಪ್ರಕಟಿಸಿದ ಗ್ರಂಥ 'ಶಿವತಾಂಡವ' (ಕವನ ಸಂಕಲನ) ೧೯೫೪ ರಲ್ಲಿ ಬಿ.ಎ. ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗ ಅನಂತರ 'ಮರೀಬೇಡಿ' ಎಂಬ ಪ್ರಹಸನ ಪ್ರಕಟಿಸಿದೆ ನಾನು ಲೆಕ್ಚರರ್ ಸೇರಿಕೊಂಡಮೇಲೆ. ಇವು ಸಾಧಾರಣ ಕೃತಿಗಳು. ನನ್ನ ಮೂರನೆಯ ಕೃತಿ ಕವನ ಸಂಕಲನ 'ಕೆಂಗನ ಕಲ್ಲು' ನನಗೆ ಕೀರ್ತಿ ತಂದ ಕೃತಿ. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಿಕ್ಕಿತು ೧೯೬೭ರಲ್ಲಿ.

ಅನಂತರ ಹತ್ತಾರು ಪುಸ್ತಕಗಳು ಹೊರಬಂದವು. ಕೆಲವು ವರ್ಷಗಳು ಡಾಕ್ಟರೇಟ್ ಪದವಿಗಾಗಿ ದುಡಿದೆ. ಆಗ ಸೃಜನಾತ್ಮಕ ಗ್ರಂಥಗಳು ಅಷ್ಟಾಗಿ ರಚನೆಯಾಗಲಿಲ್ಲ ಪಿ.ಎಚ್.ಡಿ. ಪಡೆದಮೇಲೆ ರಚನೆಗೆ ತೊಡಗಿದ್ದೇನೆ.

ನನ್ನ ಕೃತಿಗಳು ನನಗೆ ಮೆಚ್ಚು; ಬೇರೆಯವರಿಗೆ ಹಾಗೂ ಹೀಗೂ.

ನನ್ನ ಕೃತಿಗಳನ್ನು ನೋಡಿ ಮೆಚ್ಚದೆ, ಅಸೂಯೆಪಟ್ಟು ಅನ್ಯಾಯ ಮಾಡತೊಡಗಿದವರು ನನ್ನ ಅನೇಕ ಜನ ಗುರುಗಳು. ಈಗಲೂ ಬದುಕಿರುವ ಗುರುದೈವಗಳು.

೫. ನನಗೆ ನಾನೇ ಗುರು; ಮಾರ್ಗದರ್ಶಕ. ಯಾರನ್ನೂ ನನಗೆ ಆದರ್ಶರಲ್ಲ, ಬೇಕಾಗಲೂ ಇಲ್ಲ. ಅದಕ್ಕಾಗಿ ಹೆಚ್ಚು ಕೃತಿಗಳನ್ನು ಓದಲಿಲ್ಲ. ಓದಿದರೆ ಎಲ್ಲ ಅವರ ಪ್ರಭಾವಕ್ಕೆ ಬಲಿಯಾಗಿ, ನನ್ನತನವನ್ನು ನೀಗಿಕೊಳ್ಳುತೆನೋ ಎಂದು. ಅಂದಮೇಲೆ ನನಗೆ ನಾನೇ ಆದರ್ಶ, ಮಾರ್ಗದರ್ಶಿ.

೬. ಬದುಕಿನ ಸಹಜತೆ, ನೈಜತೆಗಳನ್ನೊಳಗೊಂಡ ಉದಾತ್ತತೆಯ ಕಡೆಯ ಸಾಗಿಸುವ ಶಕ್ತಿಶಾಲಿ ರಚನೆ ನನಗೆ ಪ್ರಿಯ.

೭. 'ಕೆಂಗನಕಲ್ಲು' ಮತ್ತು 'ವಿಭೂತಿ ಪುರುಷರು' – ಇವು ನನಗೆ ಮೆಚ್ಚಿನ ಕೃತಿಗಳು.

೮. ಸತ್ಯವನ್ನು ನಿರ್ಭೀತನಾಗಿ ನುಡಿಯುವ ಕೆಚ್ಚು ಬೇಕು ಸಾಹಿತಿಗೆ. ಇತ್ತೀಚೆಗೆ ಅದು ಮಾಯಾವಾಗುತ್ತಿರುವುದು ತುಂಬಾ ವಿಷಾದದ ಸಂಗತಿ. ಸಾಹಿತಿ ಇಂದು

ಹೊಗಳುಭಟ್ಟನಾಗುತ್ತಿದ್ದಾನೆ. ತುಣುಕು ರೊಟ್ಟಿಗಾಗಿ ನಾಯಿಯಂತೆ ನಾಲಿಗೆಯಲ್ಲಿ ಜೊಲ್ಲು ಸುರಿಸಿ ಹೊಗಳಿಕೆಯ ಕಹಳೆ ಹಿಡಿದು ಹಾಳಾಗುತ್ತಿದ್ದಾನೆ.

೯. ಕನ್ನಡ ಸಾಹಿತಿಗಳಲ್ಲಿ ಇಂದು ಸ್ವಾಭಿಮಾನ ಸತ್ತಿದೆ. ಸಾಹಿತಿಗಳ ಮತ್ತೊಂದು ವರ್ಗ mutual admiration committeeಗೆ ಸೇರಿದವರು. ಗುಂಪುಗಾರಿಕೆ ಬಹಳ. ಜಾತಿಜಾತಿಯವರದು ಒಂದುಗುಂಪು; ಕುಡುಕರದು ಒಂದು ಗುಂಪು; ಸತ್ಯದ ಹೆಸರಿನಲ್ಲಿ ಹಾದರ ಮಾಡುವವರದ್ದು ಒಂದು ಗುಂಪು; ಎತ್ತಲೂ ಮುಟ್ಟದ ಅಶಕ್ತರದ್ದು ಒಂದು ಗುಂಪು; ಗುಳ್ಳೇ ನರಿಗಳದ್ದು ಒಂದು ಗುಂಪು – ಹೀಗೆ ಗುಂಪುಗಾರರ ಸೊತ್ತು ಕನ್ನಡ ಸಾಹಿತ್ಯ.

೧೦. ಇದರ ಭವಿಷ್ಯವನ್ನು ಬರೆಯಲು ಇನ್ನು ಕೆಲವು ದಿನಗಳು ಕಳೆಯಬೇಕು.

ಇಂದಿನ ಈರ್ಷ್ಯಾ ಸಾಹಿತ್ಯ ಮತ್ತು ಪ್ರಶಂಸಾ ಸಾಹಿತ್ಯ ಹಾಗೂ ದಿನಕ್ಕೊಬ್ಬನಂತೆ ಸಾಹಿತಿ ಅನ್ನಿಸಿಕೊಂಡವನು ಪಡೆಯುತ್ತಿರುವ 'ಸನ್ಮಾನ' – ಎಂಬ ಶಿರೋನಾಮೆಯ ರಾಜಕೀಯ – ಇವು ನಿಂತ ಮೇಲೆ ಹಲ ಕೆಲವು ತಲೆ ತಿರುಕ, ನಾಟಕಕಾರ, ನವ್ಯ ಕವಿ ಅನ್ನಿಸಿಕೊಂಡ ಪುಡಾರಿಗಳ ಹುಳಿ ಮುರಿದ ಮೇಲೆ ಕನ್ನಡದ ಹೆಸರು ಹೇಳಿಕೊಂಡ ಅಧಿಕಾರಗಿಟ್ಟಿಸಿದ ಪುಂಡರು ಅಳಿಯಬೇಕು. ಅನಂತರ ಕನ್ನಡದ ಭವಿಷ್ಯವನ್ನು ನಿರ್ಧರಿಸಲು ಸಾಧ್ಯ. ಇಲ್ಲವಾದರೆ ಪತನ ನಮ್ಮ ಸಾಹಿತ್ಯಕ್ಕೆ ಕಟ್ಟಿಟ್ಟಬುತ್ತಿ – ಇದು ನನ್ನ ಅಭಿಪ್ರಾಯ.

**ಪ್ರಶ್ನೆ :** ನಿಮ್ಮ ಒಲವು ಸಾಹಿತ್ಯದತ್ತ ಹರಿಯಲು ಕಾರಣವಾದ ಪ್ರಭಾವ ಪ್ರೇರಣೆಗಳಾವುವು?

**ಉತ್ತರ :** ಈ ಪ್ರಶ್ನೆಗೆ ಸರಿಯಾದ ಉತ್ತರ ಎಷ್ಟು ಹುಡುಕಿದರೂ ಸಿಕ್ಕುತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ; ಚಿಕ್ಕಂದಿನಿಂದಲೂ ಏನನ್ನಾದರೂ ಒಳ್ಳೆಯದನ್ನು ಹೇಳಬೇಕು ಅನ್ನಿಸುತ್ತಿತ್ತು. ಅದೇ ರೀತಿ ಕಾವ್ಯ ರಚನೆ ಅಪೌರುಷೇಯ ಎಂಬ ಭಾವನೆಯೂ ಇತ್ತು. ನನ್ನ ತಂದೆ ಹಳ್ಳಿಯ ಕೂಲಿಮಠದ ಓಚಯ್ಯನವರು. ಅವರು ಎಲ್ಲರಿಗೆ ಹೇಳಿದಂತೆ ನನಗೂ ಅಮರಕೋಶ ಹೇಳಿ ಕಲಿಸುತ್ತಿದ್ದರು. ಅವರೇ ನನ್ನ ಮೊದಲ ಗುರು. ಒಂದು ದಿನ ಕೇಳಿದೆ 'ಈ ಕಥೆ ಕಾವ್ಯಗಳನ್ನು ಮನುಷ್ಯರು ಬರೆಯುತ್ತಾರೋ, ಅಥವಾ ದೇವರೋ' ಅಪ್ಪಾಜಿ ಹೇಳಿದರು, 'ಮನುಷ್ಯರೆ, ದೇವರಲ್ಲ' ಎಂದು 'ಹಾಗಾದರೆ ನಾನೂ ಬರೆಯಬಹುದಾ ಅಪ್ಪಾಜಿ?' 'ಅವಶ್ಯವಾಗಿ' ಎಂದರು.

ಅಂದಿನಿಂದಲೂ ನನಗೆ ಬರೆಯಬೇಕು ಬರೆಯಬೇಕು ಎಂದನ್ನಿಸುತ್ತಿತ್ತು. ಆ 'ಅನಿಸಿಕೆ' ಏಕೆ ಎಂದರಿಯೆ. ಒಟ್ಟಿನಲ್ಲಿ ಪ್ರಭಾವ ಅವ್ಯಕ್ತ. ಶಕ್ತಿ, ಪ್ರೇರಣೆ ನನ್ನ ಪೂಜ್ಯ ತಂದೆಯವರು.

**ಪ್ರಶ್ನೆ :** ಸಾಹಿತ್ಯ ಕೃಷಿ ಹೇಗೆ ದಾಂಗುಡಿ ಇಟ್ಟು ಪಲ್ಲವಿಸಿತು?

**ಉತ್ತರ :** ನನಗೆ ಬರೆಯಬೆಕು ಎಂದನ್ನಿಸುತ್ತಿತ್ತೇ ಹೊರತು ಹೇಗೆ ಬರೆಯಬೇಕು ಎಂಬುದು ಗೊತ್ತಿರಲಿಲ್ಲ. ಗೊತ್ತು ಮಾಡಿಕೊಟ್ಟವನು ಚಿತ್ರದುರ್ಗ ಇಂಟರ್ ಮೀಡಿಯೇಟ್ ಕಾಲೇಜಿನ ನನ್ನ ಸಹಾಧ್ಯಾಯಿ ಪಿ. ಈಶ್ವರಾಚಾರಿ. ಅವನು ನನ್ನ ಆತ್ಮೀಯ ಗೆಳೆಯನೂ ಹೌದು. ನನ್ನ ಸಾಹಿತ್ಯ ಕೃಷಿಯ ಮೊದಲ ಗುರುವೂ ಹೌದು. (ಅವನೀಗ ದಿವಂಗತ).

ನಾನು ನಮ್ಮ ಹಾಸ್ಟಲ್‌ನಲ್ಲಿದ್ದ (ಜಯದೇವ ಹಾಸ್ಟಲ್, ಚಿತ್ರದುರ್ಗ) ಓರ್ವ ಸ್ನೇಹಿತನ ಬಗ್ಗೆ ವೈನೋದಿಕ ಗೀತೆ ಬರೆದು ಊಟದ ಹಾಲ್‌ನಲ್ಲಿ ಅಂಟಿಸಿದೆ. ಆತ ಸಿಟ್ಟಿಗೆದ್ದು ಹಾಸ್ಟಲ್ ವಾರ್ಡನ್‌ರವರಿಗೆ ದೂರಿತ್ತ. ನನಗೆ ಮೂರು ದಿವಸ ಊಟ ಇಲ್ಲವಾಗಿಸಿದ್ದ. ನನಗೆ ದುಃಖ ಆಯಿತು. ಅಂದು ಮಿತ್ರ ಈಶ್ವರಾಚಾರಿ ಮುಂದೆ ಅವನಿದ್ದ ಹಾಸ್ಟಲ್‌ಗೆ ಹೋಗಿ ಎಲ್ಲ ಒದರಿದೆ. ಅವನು 'ನಿನ್ನಲ್ಲಿ ಕವಿತಾಶಕ್ತಿ ಇದೆ. ಅದನ್ನು ಹೀಗೆಲ್ಲ ಹಗರು ವಿಷಯಗಳನ್ನು ಕುರಿತು ಬರೆದು ವ್ಯರ್ಥಮಾಡಿಕೊಳ್ಳಬೇಡ. ಉತ್ತಮ ವಸ್ತು ಆರಿಸಿಕೊ. ನಿನಗೆ ಪ್ರತಿಭೆ ಇದೆ. ಅಮರಕೋಶ ಓದಿದ್ದೀಯೆ. ಒಳ್ಳೆ ಭಾಷೆ ಇದೆ. ಸಾರ್ಥಕ ಪಡಿಸಿಕೊ. ಭಾವ ಸ್ಪಂದಿಸಿದಾಗ ಅದಕ್ಕೊಂದು ಭಾಷೆ ಕೊಡು. ಛಂದಸ್ಸಿಗಾಗಿ ಒದ್ದಾಡಬೇಡ. ಅದು ತನಗೆ ತಾನೇ ಬರುತ್ತೆ' ಅಂದ. ಅದರಂತೆ ಬರೆದೆ. ೧೯೫೦ ರಿಂದ ನನ್ನ ಕಾವ್ಯ ಕೃಷಿ ಆರಂಭವಾಯಿತು. ನಾಲ್ಕು ದಶಕಗಳು ಕಳೆದಿದ್ದರೂ ಅದು ಇಂದೂ ಮುಂದುವರಿಯುತ್ತಲೇ ಇದೆ. ಇಂದಿನವರೆಗೆ ಎಂಟು ಕವನ ಸಂಕಲನಗಳನ್ನು ಹೊರತಂದಿದ್ದೇನೆ. ೧೯೫೨ ಡಿಸೆಂಬರ್‌ನಲ್ಲಿ ಪ್ರಕಟಿಸಿದ 'ಶಿವ–ತಾಂಡವ' ನನ್ನ ಮೊದಲ ಕವನ ಸಂಕಲನ. ನಾನಾಗ ಮೊದಲನೇ ಬಿ.ಎ. (ಆನರ್ಸ್) ತರಗತಿಯಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದೆ.

**ಪ್ರಶ್ನೆ :** ತುಮಕೂರು ಜಿಲ್ಲೆಯ ಬಗ್ಗೆ ನಿಮ್ಮ ಮರೆಯದ ನೆನಪುಗಳಾವುವು?

**ಉತ್ತರ :** ಮೊದಲನೆಯದು ನನ್ನ ಅತ್ಯಂತ ಜನಪ್ರಿಯವಾದ 'ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ' ಎಂದು ಆರಂಭವಾಗುವ 'ಔಪಾಸನೆ' ಎಂಬ ಕವನ ಬರೆದದ್ದು. ೧೯೫೬ ರಲ್ಲಿ ನಾನು ಕನ್ನಡ ಅಧ್ಯಾಪಕನಾಗಿ ತುಮಕೂರಿಗೆ ಬಂದಾಗ ಈಗಿನ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು ಇರುವ ಬಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇತ್ತು. ಜಯದೇವ ಹಾಸ್ಟಲ್ ಎದುರಿಗೆ ಒಂದು ಮಾವಿನ ತೋಪು. ಅಲ್ಲೊಂದು ಲೈಬ್ರರಿ ಬಿಲ್ಡಿಂಗ್. ಅದರ ನಾಲ್ಕೈದು ಕೊಠಡಿಗಳು. ಅವುಗಳಲ್ಲಿ ನಾವು ಏಳೆಂಟು ಜನ ಅಧ್ಯಾಪಕ ಬ್ರಹ್ಮಚಾರಿಗಳಿದ್ದೆವು. ಅದೊಂದು ರಾತ್ರಿ ಹಾಲ್ದಿಂಗಳು ಚೆಲ್ಲಿದ್ದ ಚೆಲುವಿನ ರಾತ್ರಿ. ನನ್ನ ಕೊಠಡಿಯ ಮುಂದೆ ಒಂದು ಹಾಸು ಬಂಡೆ. ಅದರ ಮೇಲೆ ಮಲಗಿ ವಿಶ್ರಾಂತರಾಳದಲ್ಲಿ ಪ್ರವಹಿಸುತ್ತಿರುವ ನೂತನ ಚೇತನ ಸ್ವರೂಪಿಯಾದ ಆದಿಶಕ್ತಿ, ಜಗತ್‌ಶಕ್ತಿ, ಪರಾತ್ಪರ ಶಕ್ತಿಯ ಪರಿಭಾವನೆಯಲ್ಲಿ ಭಾವಪರವಶನಾದೆ. ಆಗ ಕವಿತೆ ಮೂಡಿತು. ಆನಂದದಿಂದಲೇ

ಬರೆದು ಮುಗಿಸಿದೆ. ಮುಗಿಸಿ ಕೊಠಡಿಗೆ ಬಂದಾಗ ಸರಿರಾತ್ರಿ ಮೀರಿತ್ತು. ಆ ಕವನವನ್ನು ಪ್ರಕಟಣೆಗೆ ಮುನ್ನ ನೂರಾರು ಬಾರಿ ಓದಿಕೋಂಡೆ, ಹಾಡಿಕೊಂಡೆ ಕೂಡ. ಎಲ್ಲ ವೇಳೆಯೂ ಅದು ನನಗೆ ಆನಂದಕೊಟ್ಟಿದೆ.

ಎರಡನೆಯದು ನಾನು ಮಾಡಿದ ಭಾಷಣ, ಆಗಸ್ಟ್ ೧೫ ರಂದು ೧೯೫೬ರಲ್ಲಿ ಆರ್ಯ ವೈಶ್ಯಾ ಹಾಸ್ಟಲಿನಲ್ಲಿ, ಅನಂತರ ಗುರುಕುಲ ಹಾಸ್ಟಲಿನಲ್ಲಿ, ಮತ್ತೊಮ್ಮೆ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ. ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಬೃಂದಾವನ ಲೀಲೆ ಪದ್ಯ ಬರೆದಾಗ ಎಷ್ಟು ಆನಂದ ಆಯಿತೋ ಅಷ್ಟೇ ಪ್ರಮಾಣದ ಆಶ್ಚರ್ಯ ಆಯಿತು ಭಾಷಣ ಮಾಡಿದಾಗ. ಪತ್ರಿಕೋದ್ಯಮಿ ಶ್ರೀ ಗುಂಡೂರಾಯರು ಮತ್ತು ಶ್ರೀ ಶೇಷಾದ್ರಿಯವರು ಕೈಕುಲುಕಿ 'ಚೆನ್ನಾಗಿ ಮಾತನಾಡಿದಿರಿ' ಅಂದರು. ನಿಜ ಹೇಳಬೇಕೆಂದರೆ ಅಷ್ಟು ಚೆನ್ನಾಗಿ ಮಾತನಾಡ್ತೀನಿ ಅಂತಾ ನನಗೆ ಗೊತ್ತಿರಲಿಲ್ಲ. ಭಾಷಣವೂ ಒಂದು ಕಲೆ ಅಂತಾ ಅಂದುಕೊಂಡೆ.

ಮೂರನೆಯದು. ಚಿಕ್ಕತೊಟ್ಟಿಲಗೆರೆ ಸಮಾರಂಭ. ಒಮ್ಮೆ ನನ್ನ ವಿದ್ಯಾರ್ಥಿಯೊಬ್ಬ ಚಿಕ್ಕತೊಟ್ಟಿಲಗೆರೆ ಎಂಬ ಊರಿಗೆ ಒಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅತಿಥಿಯಾಗಿ ಕರೆದುಕೊಂಡು ಹೋದ. ಊರು ಸೇರಿದಾಗ ಸಂಜೆ ಆಗಿತ್ತು. ಅತಿಥಿಗಳನ್ನು ಸ್ವಾಗತಿಸಲು ರಾತ್ರಿ ಸಮಾರು ೮ ಗಂಟೆಗೆ ಒಂದು ತಂಡ ಬಂತು. ಬಾಬಾ ಬಜಂತ್ರಿ ಬಾರಿಸಿಕೊಂಡು ನನ್ನನ್ನು ಊರ ಹೊರಗಿನ ಶಾಲೆಯಲ್ಲಿ ಕೂರಿಸಿದ್ದರು. ಪೆಟ್ರೊಮ್ಯಾಕ್ಸ್‌ಗಳನ್ನು ಹಚ್ಚಿಟ್ಟಿದ್ದರು. ಓರ್ವಹಿರಿಯ ನಾನಿದ್ದ ಕೊಠಡಿಗೆ ಬಂದ. ಆತನ ಜೊತೆಯಲ್ಲಿ ಸುಮಾರು ೧೦–೨೦ ಜನರು. ಆತ ಬಂದವನೇ ಒಂದು ರೂಪಾಯಿ ಅಗಲದ ಕರ್ಪೂರ ತೆಗೆದು ನೆಲದಲ್ಲಿಟ್ಟು ಹಚ್ಚಿ ತೆಂಗಿನಕಾಯಿ ಒಡೆದು, ನನ್ನ ಕೊರಳಿಗೆ ಹಾರ ಹಾಕಿ ಉದ್ದಕ್ಕೆ ಅಡ್ಡಬಿದ್ದ. ನನಗೆ ದಿಗ್ಭ್ರಮೆ ಆಯಿತು. ನಾಚಿಕೆಯೂ ಸಹ. ಅನಂತರ ದಯಮಾಡಿಸಬೇಕೆಂದು ವಿನಂತಿಸಿಕೊಂಡ. ಆತನ ಅಮಾಯಕ ಹಾಗೂ ಪ್ರಾಂಜಲ ಪ್ರೀತಿಗೆ ನಾನೇ ಮಣಿಯಬೇಕು ಎನ್ನಿಸಿತು. ಆತನ ಭಕ್ತಿಪೂರ್ವಕ ಸ್ವಾಗತಕ್ಕೆ ಬೆರಗಾಗಿ ನಡೆದೆ. 'ನಮ್ಮ ಸವಾರಿ' ರಾಜಬೀದಿಗೆ ಬಂತು. ನೂರಾರು ಜನರು ನೆರೆದಿದ್ದರು. ವಾದ್ಯಗಳು ಭೋರ್ಗರೆಯುತ್ತಿದ್ದುವು. ಬಾಣ, ಬಿರುಸು ಮತಾಪುಗಳು ಹಾದಿಯುದ್ದಕ್ಕೂ ಉರಿದುವು. ನನಗೆ ಭಯ ಆಯ್ತು. ಬಹುಶಃ ಯಾವುದಾದರೂ ಹೆಣ್ಣಿಗೆ ತಾಳಿ ಕಟ್ಟಿಸಲು ನನ್ನನ್ನು ಮೆರವಣಿಗೆ ಕರೆದುಕೊಂಡು ಹೊಗುತ್ತಿರಬಹುದೇ? ಅನ್ನಿಸಿತು. ಊರ ಮಧ್ಯದಲ್ಲಿ ಒಂದು ಭವ್ಯ ಮಂಟಪ. ಸಭಾಕಾರ್ಯಕ್ರಮ. ಊರ ಹಿರಿಯರ ಅಧ್ಯಕ್ಷತೆಯಲ್ಲಿ ನನ್ನ ಭಾಷಣ. ಅಂದಿನ ಭಾಷಣ ಹೇಗಿತ್ತೋ ಗೊತ್ತಿಲ್ಲ. ಆದರೆ ಚಿಕ್ಕ ತೊಟ್ಟಿಲಗೆರೆಯ ನನ್ನ ಅನಿಮಿತ್ತ ಬಂಧುಗಳ ಆದರಾತಿಥ್ಯ ನಾನು ಮರೆಯಲಾಗದ್ದು.

ತಿಪಟೂರಿನಲ್ಲಿ ಎರಡನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. ಅಂದು ಕವಿಗೋಷ್ಠಿಯ ಅಧ್ಯಕ್ಷನಾಗಿದ್ದೆ. ಅದು ನನ್ನಲ್ಲಿ ಉಳಿದಿರುವ ಮೂರನೆಯ ಸವಿನೆನಪು.

**ಪ್ರಶ್ನೆ :** ನಿಮ್ಮ ಮೆಚ್ಚಿನ ಬರಹಗಾರರು ಯಾರಾರು?

**ಉತ್ತರ :** ಮೊದಲು ಆಕರ್ಷಿಸಿದವರು ಆಧುನಿಕ ಕನ್ನಡ ಸಾಹಿತ್ಯದ ರತ್ನತ್ರಯರಾದ ಕುವೆಂಪು, ಬೇಂದ್ರೆ ಮತ್ತು ಪುತಿನ. ಚೆನ್ನವೀರ ಕಣವಿಯವರು ಅನಂತರದಲ್ಲಿ ಪ್ರಭಾವ ಬೀರಿದರು. ಕಾದಂಬರಿಕಾರರಲ್ಲಿ ಅನಕೃ, ಅಧ್ಯಾಪಕನಾದ ಮೇಲೆ ಖಲೀಲ್ ಗಿಬ್ರಾನ್, ಚೆಕೋವ್, ಟಾಲ್‌ಸ್ಟಾಯ್, ಆಸ್ಕರ್ ವೈಲ್ಡ್, ಶರಚ್ಚಂದ್ರ ಚಟ್ಟೋಪಾಧ್ಯಾಯ ಮತ್ತು ಡಿವಿಜಿ – ಇವರು ನನ್ನ ನೆಚ್ಚಿನ ಮೆಚ್ಚಿನ ಸಾಹಿತಿಗಳು.

**ಪ್ರಶ್ನೆ :** ನಿಮಗೆ ತೃಪ್ತಿ ತಂದ ನಿಮ್ಮ ಕೃತಿಗಳಾವುವು?

**ಉತ್ತರ :** 'ಕೆಂಗನ ಕಲ್ಲು' ಕವನ ಸಂಕಲನ, 'ಮಳ್ಳಿಗೊಂದು ಒಳ್ಳೆ ಮಾತು' ಎಂಬ ಚಿಂತನ ರಚನೆ, 'ಶೂನ್ಯ ಸಂಪಾದನೆಗೊಂದು ಮುನ್ನುಡಿ' ಎಂಬ ವಿಮರ್ಶಾಕೃತಿ, 'ಮನಿಷಾ' ಎಂಬ ಕಾವ್ಯ ಪರಿಚಯ.

**ಪ್ರಶ್ನೆ :** ಕವಿತಾ ರಚನೆಗೆ ಹೆಸರಾದ ತಮಗೆ ಆ ಕಲೆ ಕರಗತವಾದದ್ದು ಹೇಗೆ?

**ಉತ್ತರ :** ದಯವಿಟ್ಟು ನಿಮ್ಮ ಮೊದಲನೆ ಮತ್ತು ಎರಡನೆಯ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನು ಇದಕ್ಕೂ ಅನ್ವಯಿಸಿಕೊಳ್ಳಿ. ಅಂತೆಯೇ, ಸತತ ಸಾಧನೆಯಿಂದ ಸಿದ್ಧಿ ಅಲ್ಲವೆ? ಪ್ರತಿಭೆ ವ್ಯುತ್ಪತ್ತಿಗಳ ಜೊತೆಯಲ್ಲಿ ಸತತಾಭ್ಯಾಸವೂ ಬೇಕು. ಅವುಗಳನ್ನು ರೂಢಿಸಿಕೊಂಡೆ. ಸ್ಫೂರ್ತಿ ಬಂದಾಗ ಬರೆದೆ, ಪ್ರತಿಭೆ ಮೆರೆದಾಗ ಬರೆದೆ, ಆದರೆ ಪ್ರಕಟ ಆಗದೇ ಇದ್ದರೆ ಬರೆಯಲು ಉತ್ಸಾಹ ಇರೊಲ್ಲ ಅಲ್ವೆ. ಅಲ್ಲದೆ ನಾನಾಗ ಚಿಕ್ಕವನು. ಹಿರಿಯರ ಪ್ರೋತ್ಸಾಹದ ಅಗತ್ಯ ಇತ್ತು. ನನಗೆ ನನ್ನ ಕವನ ಪ್ರಕಟ ಆಗಲಿ. ನಾನು ಕವಿ ಅಂತಾ ಅನ್ನಿಸ್ಕೋಬೇಕು. ಅನ್ನೋ ಬಯಕೆ ನನಗೂ ಇತ್ತು. 'ರೇಣುಕ' ಅನ್ನೋ ಕಾವ್ಯನಾಮದಲ್ಲಿ ನನ್ನ ಕವನಗಳನ್ನು ಕೆಲವು ಪತ್ರಿಕೆಗಳಿಗೆ ಕಳುಹಿಸಿದೆ. ಬೆಂಗಳೂರಿನಿಂದ ಶ್ರೀ ವೆಂಕೋಬರಾಯರ 'ದೇಶಬಂಧು' ಅಂತಲೋ ಅಥವಾ 'ಪೌರವಾಣಿ' ಅಂತಲೋ ಒಂದು ಪತ್ರಿಕೆ ಹೊರಡುತ್ತಿತ್ತು. ಅದಕ್ಕೆ ಮತ್ತು ಬಿ. ಶಿವಮೂರ್ತಿಶಾಸ್ತ್ರಿಗಳ 'ಶರಣ ಸಾಹಿತ್ಯ' ಪತ್ರಿಕೆಗೆ ಕಳುಹಿಸಿದೆ. ಕವನಗಳು ಪ್ರಕಟ ಆದುವು. ನನ್ನ ಕವನ ಪತ್ರಿಕೆಯಲ್ಲಿ ಬಂದಾಗ ಸಿಕ್ಕಾಪಟ್ಟೆ ಹಿಗ್ಗಿದೆ. ಸಿಕ್ಕ ಸಿಕ್ಕವರಿಗೆಲ್ಲಾ ತೋರಿಸಿ ಈ ಕವನ ನನ್ನದು. 'ರೇಣುಕ' ಅನ್ನೋ ಹೆಸರಿನಲ್ಲಿ ಬರೀತಿದ್ದೀನಿ' ಎಂದೆಲ್ಲಾ ಹೇಳಿಕೊಂಡು ತಿರುಗಿದೆ. ಒಮ್ಮೆ ಸಂಪಾದಕ ಶ್ರೀ ವೆಂಕೋಬರಾಯರನ್ನು ಅವರ ಪ್ರೆಸ್ ಛೇಂಬರ್‌ನಲ್ಲಿ ಭೇಟಿ ಮಾಡಿದೆ. ಅವರು 'ಶಹಬ್ಬಾಸ್' ಎಂದು ಬೆನ್ನು ತಟ್ಟಿ ಕಾಫಿ ತರಿಸಿ ಕುಡಿಸಿ, ಹಿಂದೆ ಪ್ರಕಟವಾದ ಕವನಗಳ ಸಂಭಾವನೆ ಎಂದು ಐದು ರೂಪಾಯಿ ಕೊಟ್ಟರು. ಆಗ ನನಗೆ ಎಷ್ಟು ಸಂತೋಷ ಆಯಿತು ವರ್ಣಿಸಲಾರೆ. ನೂರಾರು ವರ್ಷ ಘೋರತಮ ತಪಸ್ಸು ಮಾಡುತ್ತಿದ್ದ ಮಹಾಯೋಗಿಗೆ ಭಗವಂತನ ಸಾಕ್ಷಾತ್ಕಾರ ಆದರೆ ಎಷ್ಟು ಆನಂದ ಆಗಬಹುದೋ ಅಂತಹ ಆನಂದ ನನಗಾಯಿತು! ಅವರಿಗೆ ಕೃತಜ್ಞತೆ ಅರ್ಪಿಸಿದೆ.

ಅನಂತರ ಮೈಸೂರಿನಲ್ಲಿ ಸರಸ್ವತೀಪುರದ ವಿದ್ಯಾಶ್ರಮದಲ್ಲಿ ಜೀ.ಶಂ. ಪರಮಶಿವಯ್ಯ, ಕೆ. ನಾಗಂದ್ರಪ್ಪ, ಪಿ.ಆರ್. ತಿಪ್ಪೇಸ್ವಾಮಿ, ಕ.ರಾ. ಕೃಷ್ಣೇಗೌಡ, ಅಬ್ದುಲ್ ನಜೀರ್ ಸಾಬ್ (ದಿವಂಗತ ಮಾಜಿ ಮಂತ್ರಿ) ನಾವೆಲ್ಲಾ ಇದ್ದೆವು. ಈ ಮಿತ್ರರ ಪ್ರೋತ್ಸಾಹದಿಂದ ನನ್ನ 'ಶಿವ–ತಾಂಡವ' ಮೊದಲ ಕವನ ಸಂಕಲನ ೧೯೫೨ರಲ್ಲಿ ಪ್ರಕಟ ಆಯಿತು. ಆಮೇಲೆ ರಂಗಭೂಮಿ ಕಲಾವಿದ ಸಿ.ಬಿ. ಜಯರಾವ್, ಆಕಾಶವಾಣಿಯ ವೈ.ಎಸ್. ಕುಮಾರಸ್ವಾಮಿ ರಾವ್ ಮೊದಲಾದವರ ಪ್ರೋತ್ಸಾಹದಿಂದ ನನ್ನ ಕೆಲವು ಕವನಗಳು ಆಕಾಶವಾಣಿ ಮೂಲಕ ಪ್ರಸಾರವಾದವು. ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿದ್ದಾಗ ನನ್ನ 'ಕೆಂಗನಕಲ್ಲು' ಪ್ರಕಟ ಆಯಿತು. ರಾಜ್ಯ ಸರ್ಕಾರ ಅದಕ್ಕೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಿತು. ಅನೇಕ ಕಥೆ, ಕವನ, ವಿಮರ್ಶೆಗಳನ್ನು ಬರೆದೆ. ನನ್ನ 'ಭಾಸನ ಮಕ್ಕಳು' ಎಂಬ ವಿಮರ್ಶಾಕೃತಿಗೆ ದೇವರಾಜ ಬಹದ್ದೂರ್ ಬಹುಮಾನವೂ ಬಂತು. ಹಿರಿಯರ ಪ್ರೋತ್ಸಾಹ, ನನ್ನ ತಂದೆ ತಾಯಿಯರ ಆಶೀರ್ವಾದ, ನನ್ನ ಧರ್ಮಪತ್ನಿಯ ಸಹಕಾರ – ಇವು ಮುಪ್ಪುರಿಗೊಂಡು ನನ್ನಲ್ಲಿದ್ದ ಪ್ರತಿಭೆಯನ್ನು ಬಯಲಿಗೆಳೆದವು.

**ಪ್ರಶ್ನೆ :** ಶಿಕ್ಷಕ–ಲೇಖಕರಾಗಿ ದುಡಿದ ತಮ್ಮ ಅನುಭವವನ್ನು ಸಂಕ್ಷಿಪ್ತವಾಗಿ ಹೇಳುವಿರಾ?

**ಉತ್ತರ :** ಶಿಕ್ಷಕನಾಗಬೇಕೆಂಬ ಅದರಲ್ಲೂ ಕನ್ನಡ ಅಧ್ಯಾಪಕನಾಗಬೇಕೆಂಬ ಹಂಬಲ ಚಿಕ್ಕಂದಿನಿಂದಲೂ ಇತ್ತು. ಇದಕ್ಕೆ ಮೂಲ ಪ್ರೇರಣೆ ನಮ್ಮ ಮನೆತನ ಅಂತಾ ಕಾಣುತ್ತೆ. ನನ್ನ ತಂದೆ, ನಮ್ಮ ದೊಡ್ಡಪ್ಪಾಜಿ, ನಮ್ಮ ಸೋದರ ಮಾವ – ಎಲ್ಲರೂ ಕೂಲಿಮಠದ ಓಚಯ್ಯಗಳು. ಅವರು ಪಾಠ ಹೇಳಿದಂತೆ ನಾನೂ ಹೇಳಬೇಕು; ಪದ್ಯಗಳನ್ನು ಹಾಡಿ ವಿದ್ಯಾರ್ಥಿಗಳಿಗೂ ಕಲಿಸಬೇಕು, ನಾಟಕಗಳನ್ನು ಬರೆದು ಆಡಿಸಬೇಕು ಅನ್ನೋ ಗೀಳು. ಅಂದುಕೊಂಡಂತೆ ಆಗುವುದಿಲ್ಲ ಸಾಮಾನ್ಯವಾಗಿ. ಆದರೆ ನನ್ನಲ್ಲಾಯಿತು. ಶಿಕ್ಷಕ ಆದೆ, ಒಳ್ಳೆ ಮೇಷ್ಟು ಅನ್ನಿಸಿಕೊಂಡೆ. ತುಮಕೂರು, ದಾವಣಗೆರೆ, ಶಿವಮೊಗ್ಗ, ಬೆಂಗಳೂರು, ಚನ್ನಪಟ್ಟಣ, ಮಂಗಳೂರು ಎಲ್ಲೆಡೆಯೂ ನನ್ನ ವಿದ್ಯಾರ್ಥಿಗಳು ನನ್ನನ್ನು ಪ್ರೀತಿಸಿದರಷ್ಟೇ ಅಲ್ಲ ಪೂಜಿಸಿದರು! ಇದು ಉತ್ಪ್ರೇಕ್ಷೆ ಅನ್ನಿಸಬಹುದು. ಮರುಳಯ್ಯನ ಅಹಂಕಾರದ ನುಡಿ ಅನ್ನಿಸಬಹುದು. ಆದರೂ ಅದು ಸತ್ಯ. ನನ್ನ ವಿದ್ಯಾರ್ಥಿಗಳೂ ಅಂಥವರೆ. ಅಂಥ ಶಿಷ್ಯರನ್ನು ಪಡೆದ ಭಾಗ್ಯ ನನ್ನದು. ನನ್ನ ಸಹೋದ್ಯೋಗಿಗಳು ಹೊಟ್ಟೆ ಕಿಚ್ಚು ಪಡುವಷ್ಟರ ಮಟ್ಟಿನ ಖ್ಯಾತಿ ನನ್ನದು ಅಧ್ಯಾಪಕನಾಗಿ. ಪಾಠ ಹೇಳುವುದು ಪರಶಿವನ ಪೂಜೆ ಎಂದು ಭಾವಿಸಿಕೊಂಡೇ ನಡೆದಿದ್ದೇನೆ. ಇದಕ್ಕಿಂತ ಹೆಚ್ಚು ಹೇಳಲಾರೆ.

ನನ್ನ ವ್ಯಕ್ತಿತ್ವ ನನ್ನ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರದೆ ಇಲ್ಲ. ನಾನು ಮಂಗಳೂರು ಸರಕಾರೀ ಕಾಲೇಜಿನ ಪ್ರಿನ್ಸಿಪಾಲನಾಗಿದ್ದಾಗ ಅಲ್ಲಿನ ಹುಡುಗರಲ್ಲಿ ವಯಸ್ಸಿಗೆ ಸಹಜವಾದ ಚೇಷ್ಟೆ ಇತ್ತು. ನನಗೇನೂ ಅದು ಹೊಸದಾಗಿರಲಿಲ್ಲ. ಆದರೆ ಯಾರೂ ಅವಿಧೇಯರಾಗಿರಲಿಲ್ಲ. ನನ್ನ ಗುಣಕ್ಕೆ ಮಾತಿಗೆ ಬೆಲೆ ಕೊಡುತ್ತಿದ್ದರು.

೧೯೮೪ನೇ ಇಸವಿ. ಒಂದು ದಿನ ಒಬ್ಬ ವಿದ್ಯಾರ್ಥಿ ನಾಯಕ, ಹೆಸರು ಅಶೋಕ ರೈ. ಕಾಲೇಜಿನ ಕಾರಿಡಾರ್‌ನಲ್ಲಿ ಸಿಗರೇಟು ಸೇದಿಕೊಳ್ತಾ ಬರ್‍ತಾ ಇದ್ದ. ತನ್ನ ಇಬ್ಬರು ಸ್ನೇಹಿತರ ಜೊತೆ ಮಾತಾನಾಡಿಕೊಂಡು. ಪ್ರಿನ್ಸಿಪಾಲ್ ಥೇಂಬರ್ ಕಸ ಗುಡಿಸುತ್ತಿದ್ದ ಜವಾನ. ನಾನು ಹೊರಗೆ ಬಂದು ನಿಂತಿದ್ದೆ. ಸಿಗರೇಟ್ ಹುಡುಗ ನಾನು ನಿಂತಿದ್ದನ್ನು ಗಮನಿಸಿರಲಿಲ್ಲ. ನಾನು ಅವನನ್ನು ಗಮನಿಸಿದ್ದೆ. ಹತ್ತಿರಕ್ಕೆ ಬರುವುದನ್ನೇ ಕಾಯುತ್ತಿದ್ದೆ. ಆ ಸಿಗರೇಟ್ ಉರಿದಂತೆ ನಾನೂ ಉರಿಯುತ್ತಿದ್ದೆ. ಹತ್ತಿರ ಬಂದ ಕೂಡಲೇ, 'ಅಯ್ಯೋ ಅಯೋಗ್ಯ' ಎಂದು ಫೇಡ್ ಅನ್ನೋ ಹಾಗೆ ಅವನ ಕೆನ್ನೆಗೆ ಹೊಡೆದೆ. ತುಟಿಗಳ ಮಧ್ಯೆ ಇದ್ದ ಸಿಗರೇಟ್ ಹಾರಿ ಅಷ್ಟು ದೂರ ಬಿತ್ತು. ಆ ಹುಡುಗ ನನ್ನ ಉಗ್ರ ರೂಪ ನೋಡಿ ನಿಲ್ಲಲಾರದೆ ಕಾಲೇಜು ಕಾಂಪೌಂಡ್ ಹಾರಿ ಓಡ್ತಾ ಇದ್ದ. ಓಡುವಾಗ ತುಳು ಭಾಷೆಯಲ್ಲಿ 'ಲೋ ನಾನು ಪ್ರಿನ್ಸಿಪಾಲರ ಕೈಯಲ್ಲಿ ಇವೊತ್ತು ಏಟು ತಿಂದುಬಿಟ್ಟೆ...' ಎಂದು ಕೂಗಿಕೊಂಡು ಓಡಿದ. ಅದು ಬಹುದೊಡ್ಡ ಕಾಲೇಜು. ಸುಮಾರು ಮೂರುವರೆ ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರಿರುವ ಸಂಸ್ಥೆ. ಆ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಹೊಡೆಯುವುದಿರಲಿ, ಮಾತನಾಡಿಸಿ ಸೈ' ಎನ್ನಿಸಿಕೊಂಡವರಿರಲಿಲ್ಲವಂತೆ. ನನ್ನ ಅಧ್ಯಾಪಕ ಮಿತ್ರರು 'ಏನ್ ಸಾರ್ ಅಶೋಕ್ ಸ್ಟೂಡೆಂಟ್ ಲೀಡರ್. ಅವನನ್ನು ಪಬ್ಲಿಕ್‌ನಲ್ಲಿ ಹೊಡೆಯೋದೆ!' ಅಂತ ಆಶ್ಚರ್ಯ ವ್ಯಕ್ತಪಡಿಸಿದರು. 'ಅಲ್ರೀ ನಾನು ಒಂದೇಟು ಕೊಟ್ಟದ್ದಕ್ಕೆ ಆಕ್ಷೇಪ ಎತ್ತುತ್ತೀರಿ. ಅವನು ಸಿಗರೇಟ್ ಸೇದಬಹುದಾ ಕಾಲೇಜ್ ಆವರಣದಲ್ಲಿ? ಅದಕ್ಕೇಕೆ ನೀವು ಬುದ್ಧಿ ಹೇಳೊಲ್ಲ ಅವನಿಗೆ' ಅಂದೆ. 'ಕಷ್ಟ ಸಾರ್, ಅವರು ತುಪಾಕಿಗಳು' ಅಂದರು. "ಹಾಗಂತಾ ನಾವು ಅವರಿಗೆ ಹೆದರಿ ಅವರಂತೆ ವರ್ತಿಸಬೇಕಾ? ನಾನು ಅಧ್ಯಾಪಕ. ಗುರು! ನನ್ನ ಶಿಷ್ಯನನ್ನು ತಿದ್ದುವ ಹಕ್ಕು ಅಧಿಕಾರ ನನಗಿದೆ. ಬಯ್ತೀನಿ, ಸಮಯ ಬಂದರೆ ಹೊಡೀತೀನಿ' ಅವರು 'ಏನೋ ಸಾರ್, ನೀವೊಬ್ಬರೇ ಹಾಗೆ ಹೊಡೆದು ಬಚಾವಾದೋರು' ಅಂದರು. ಆ ಹುಡುಗ ಮೂರು ದಿವಸ ಕಾಲೇಜಿಗೆ ಬರಲಿಲ್ಲ. ಒಂದು ದಿನ ರಸ್ತೆಯಲ್ಲಿ ಸಿಕ್ಕಿದ. ಅಲ್ಲಿಯೇ ಬಯ್ದೆ. 'ತಪ್ಪಾಯ್ತು ಸಾರ್' ಅಂದ. ಮಾರನೇ ದಿವಸದಿಂದ ಕಾಲೆಜಿಗೆ ಸರಿಯಾಗಿ ಬಂದ.

ನಾವು ಸರಿ ಇದ್ದರೆ ಊರು ಸರಿ ಇರುತ್ತೆ. ನಮ್ಮಲ್ಲೇ ದೋಷ ಇಟ್ಟುಕೊಂಡು ಬೇರೆಯವರಿಗೆ ಬುದ್ಧಿ ಹೇಳುವುದು ಗೌರವ ಅಲ್ಲ. ಇದು ನಾನು ಅಧ್ಯಾಪಕನಾಗಿ ಕಲಿತ ಪಾಠ. ಬೋಧಿಸಿದ ಬೋಧೆ!

ಅಧ್ಯಾಪಕನಾಗಿ ನನಗೆ ಸಿಕ್ಕಿದ ತೃಪ್ತಿ ಲೇಖಕನಾಗಿ ದೊರೆತಿಲ್ಲ. ಅದಕ್ಕೆ ದಯವಿಟ್ಟು ತಪ್ಪು ತಿಳಿಯಬೇಡಿ, ಸ್ಪಷ್ಟ ಹೇಳ್ತೇನೆ, ಅಸೂಯಾಪರ ಪರಿಸರ. ಆಸ್ಕರ್ ವೈಲ್ಡ್‌ನಂತಹ ಪ್ರತಿಭಾಶಾಲಿ ಹುಟ್ಟಿಲ್ಲ. ಅದೇ ರೀತಿ ಅವನಂತಹ ಹತಭಾಗ್ಯನೂ ಹುಟ್ಟಿಲ್ಲ. ಪ್ರತಿಭೆಯನ್ನು ಪರಮಾತ್ಮ ಅವನಿಗೆ ಕೊಟ್ಟು ಮರೆತಿದ್ದ. ಆದರೆ ಅದೃಷ್ಟವನ್ನು ಮಾತ್ರ ಕಿತ್ತು ತನ್ನಲ್ಲಿಯೇ

ಬಚ್ಚಿಟ್ಟಿಕೊಂಡಿದ್ದ. ಅಂತಹದೇ ಸ್ಥಿತಿ ನನ್ನದೂ. ಅಂದರೆ ಆಸ್ಕರ್‌ವೈಲ್ಡ್‌ನ ಸಮಾನ ಪ್ರತಿಭಾವಂತ ನಾನು ಅಂತ ಹೇಳಿಕೊಳ್ಳುತ್ತಿಲ್ಲ ಅಥವಾ ಅವನಂತೆ ಜೀವನವನ್ನು ಕೈಯಾರ ಹಾಳುಮಾಡಿಕೊಂಡವನು ಅಂತಲೂ ಅಲ್ಲ. ದುರದೃಷ್ಟದಲ್ಲಿ ಇಬ್ಬರೂ ಸಮಭಾಗಿಗಳು ಎಂದಷ್ಟೇ ಹೇಳಲಿಚ್ಛಿಸುತ್ತೇನೆ.

**ಪ್ರಶ್ನೆ :** ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ನಿಮ್ಮ ಶುಭನುಡಿಗಳೇನು?

**ಉತ್ತರ :** ನನ್ನ ಜಿಲ್ಲೆಯ ನನ್ನ ಜನರು ಕನ್ನಡ ನಾಡಿನ ಹೊನ್ನಾಗಬೇಕು; ರಾಷ್ಟ್ರ ಹಿತಸಾಧನೆಯ ಹೊಂದೇರು ತಾವಾಗಬೇಕು. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಮೊದಲಾದವರಲ್ಲಿದ್ದಂತೆ ನನ್ನವರಲ್ಲೂ ಮಣ್ಣಿನ ಮೋಹ ಮಾಸದಿರಲಿ. ಅನ್ಯರು ಎಲ್ಲ ವಿಷಯಗಳಲ್ಲೂ ದುರಭಿಮಾನಿಗಳಿದ್ದರೆ, ಕನ್ನಡಿಗರು ನಿರಭಿಮಾನಿಗಳು, ಅಭಿಮಾನ ಶೂನ್ಯರು ಎಂಬ ಅಪವಾದ ಇದೆ. ನನ್ನ ಜಿಲ್ಲೆಯವರು ಆ ಅಪವಾದಕ್ಕೆ ಅಪವಾದವಾಗಲಿ. ನಾನವರಲ್ಲಿ ನಿರೀಕ್ಷಿಸುವುದು ಅವರ ಸಹಜ ಸ್ವಾಭಿಮಾನವನ್ನು. ನನ್ನವರು ಎಂದೆಂದಿಗೂ ಸ್ವಾಭಿಮಾನದ ಶಿಶುಗಳಾಗಲಿ, ರಾಷ್ಟ್ರಪ್ರೇಮ, ಕನ್ನಡ ಭಾಷಾ ಪ್ರೇಮ ನಂದಾದೀವಿಗೆಯಂತೆ ಅವರೂ ಎಂದೆಂದಿಗೂ ಬೆಳಗುತ್ತಿರಲಿ. ತಾವು ಬದುಕಿ, ಅನ್ಯರಿಗೂ ಬದುಕು ಕೊಡಲಿ. ಅವರಲ್ಲಿ 'ಬೇಕು' ಎಂಬ ಮೋಹವಾಗಲಿ 'ಬೇಡ' ಎಂಬ ವೈರಾಗ್ಯವಾಗಲಿ ಇರದ ನಿತ್ಯತೃಪ್ತಿ ಇರಲಿ, ಅವರ ಬಾಳಿನಲ್ಲಿ ಹಾಲುಕ್ಕಿ ಜೇನು ಹರಿಯಲಿ!

**ನನ್ನ ಲೇಖಕ ಬಂಧು ಭಗಿನಿಯರಿಗೊಂದು ಮಾತು:**

ಪರಿಸರಕ್ಕೆ ಸದಾ ಸ್ಪಂದಿಸಿ. ಪ್ರಭಾವಕ್ಕೆ ಮಣಿಯಬೇಡಿ. ಸೋಪಜ್ಞತೆ ನಿಮ್ಮ ಸ್ವತ್ತಾಗಿರಲಿ. ನಿಮ್ಮ ಬರೆವಣಿಗೆ ಮೊದಲು ನಿಮ್ಮೊಡನೆ ಸಂಭಾಷಿಸಲಿ, ಸಂವಾದಿಸಲಿ. ನಿಮ್ಮ ಭಾವಗಳು ತಿಳಿಯಾಗಿರಲಿ (ಹುಳಿಯಾಗುವುದು ಬೇಡ) ಅವನ್ನು ಸಮರ್ಥ ರೀತಿಯಲ್ಲಿ ಸಂವಹಿಸಬಲ್ಲ ಕಸುವು ತುಂಬಿದ ಭಾಷೆ ಸಿದ್ಧಿಸಲಿ. ನಮ್ಮವರು ಗೂಡಾರದ ಕವಿಗಳಾಗುವುದು ಬೇಡ, ಬೀಡಾರದ ಬಂಧುಗಳಾಗಿ, ಸ್ನೇಹ ಸಿಂಧುವಾಗಲಿ.

**–ನಮಸ್ಕಾರ–**

# ಸಾಹಿತ್ಯ ಸಂಚಾರ....

**ಡಾ॥ ಸಾ.ಶಿ. ಮರುಳಯ್ಯ**

ತಾಯಿಯ ತೊಡೆಯ ಮೇಲೆ ಹತ್ತಿ ಕುಳಿತುಕೊಳ್ಳಲು ಹಂಬಲಿಸುವ ಶಿಶುವಿನಂತೆ, ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಾದಿಯೇರಲು ಆಸೆಪಟ್ಟೆ; ಪಡೆದ ಮೇಲೆ ಭ್ರಮನಿರಸ ಆಯಿತು. ಸೋಲು ಗೆಲುವೆಂಬ ಎರಡು ದಡಗಳ ನಡುವೆ ಬದುಕು ಸಾಗಿತು. ಅಧಿಕಾರ ಸ್ವೀಕರಿಸಿದ ಆರೆಂಟು ತಿಂಗಳುಗಳಲ್ಲಿ ಅರುವತ್ತರ ಅನುಭವ ಪಡೆದೆ. ಅನುಭವ ಎಂದರೇನು? ಎಡಹುವುದು, ಎಚ್ಚೆತ್ತುಕೊಳ್ಳುವುದು. ಅಂದರೆ ಮೊದಲು ಮಾಡಿದ ತಪ್ಪನ್ನು ಅನಂತರ ತಿದ್ದಿಕೊಳ್ಳುವುದು. ಈ ಕೆಲಸವನ್ನು ನನ್ನ ಜೀವನದುದ್ದಕ್ಕೂ ಮಾಡಿಕೊಂಡು ಬಂದಿದ್ದೇನೆ; ಮಾಡುತ್ತಲೂ ಇದ್ದೇನೆ. ಜೀವನ, ನನ್ನ ಪಾಲಿಗೆ ಒಂದು ಅನುಭವದ ಶಾಲೆ. ಅಲ್ಲಿ ಸಾಕಷ್ಟು ಕಲಿತಿದ್ದೇನೆ; ಇರಲಿ.

ಚುನಾವಣೆಯಲ್ಲಿ ಗೆದ್ದು ಬಂದ ನನಗೆ ಅದರ ಸೋಲಿನ ನೋವೇನು ಎಂಬುದೂ ಗೊತ್ತು. ಸೋಲಿನ ಸವಿಯನ್ನು ನಾನುಂಡಿದ್ದೇನೆ. ಆದರೂ ಸೋತವನ ದೊಡ್ಡತನ ಗೆದ್ದವನನ್ನು ಅಭಿನಂದಿಸುವುದು. ಕಳೆದ ಪರಿಷತ್ ಚುನಾವಣೆಯಲ್ಲಿ ನನ್ನ ಎದುರಾಳಿಯಾಗಿದ್ದ ನನ್ನ ವಿದ್ಯಾರ್ಥಿ ಮಿತ್ರ ಶ್ರೀ ಟಿ.ಎನ್. ಕುಮಾರಸ್ವಾಮಿಯವರು ನಾನು ಅಧಿಕಾರ ಸ್ವೀಕರಿಸಿದ ಮಾರನೆಯ ದಿನವೇ ಪರಿಷತ್ತಿಗೆ ಬಂದು ಹಾರ ಹಾಕಿ ಅಭಿನಂದಿಸಿದರು. ಇದೇ ಬಗೆಯ ನುಡಿಕಾಣಿಕೆ ನನ್ನ ನಿಕಟಪೂರ್ವ ಅಧ್ಯಕ್ಷ ಶ್ರೀ ಗೊರುಚರವರಿಗೂ ಸಂದಿತ್ತು ನನ್ನಿಂದ. ಆದರೂ ಚುನಾವಣೆ ಚುನಾವಣೆಯೇ! ನ್ಯಾಯದೇವತೆಗೆ ಕಣ್ಣಿಲ್ಲ ಅನ್ನುತ್ತಾರೆ. ಚುನಾವಣೆಗೆ ತಳವೇ ಇಲ್ಲ. ಚುನಾವಣೆಗಳ ಮೂಲಕವೇ ಬಂದ ಸರ್ಕಾರಗಳಿಗಂತೂ ಕಿವಿಯೇ ಇಲ್ಲ. ಕರುಳೂ ಇಲ್ಲ. ಆದರೂ ಅವರೊಡನೆ ಕಿತ್ತಾಡಿಕೊಂಡೇ ಬದುಕು ಮಾಡಬೇಕು. ಇದು ಆರ್ಥಿಕ ಸ್ಥಾಯಿತ್ವವಿರದ ಸಾಹಿತ್ಯ ಪರಿಷತ್ತುಗಳಂತಹ ಸಂಸ್ಥೆಗಳ ಹಣೆಯಬರಹ.

ಪರಿಷತ್‌ನ ಅಧ್ಯಕ್ಷನಾದಾಗಿನಿಂದ ನನಗೆ ಬಿಡುವಿಲ್ಲದ ಸಾಹಿತ್ಯ ಪ್ರವಾಸಗಳು. ಮೊನ್ನೆ ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆ, ಹಂಪೆ ಪ್ರವಾಸ ಮಾಡಿ ಬಂದೆ. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ ಮತ್ತಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾವ್ಯ ಕುರಿತು ನಡೆದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷನಾಗಿದ್ದೆ. ಇವೆಲ್ಲ

ತುಂಬಾ ಚೆನ್ನಾಗಿ ನಡೆದವು. ದಕ್ಷಿಣ ಕನ್ನಡ ಜಿಲ್ಲೆ ಜನ ಏನು ಮಾಡಿದರೂ ಅಚ್ಚುಕಟ್ಟಾಗಿ, ಅದ್ಭುತವಾಗಿ ಮಾಡುತ್ತಾರೆ. ಧರ್ಮಸ್ಥಳದಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನದಲ್ಲಿ 'ಸಾಹಿತ್ಯ ಸಮ್ಮೇಳನ'ದ ಅಧ್ಯಕ್ಷ ಪದವಿ ನನ್ನದಾಯಿತು. ಸಾಹಿತ್ಯ ಸಮ್ಮೇಳನ, ಧರ್ಮಸಮ್ಮೇಳನ ತುಂಬಾ ಚೆನ್ನಾಗಾಯಿತು. ಶ್ರೀ ವೀರೇಂದ್ರ ಹೆಗ್ಗಡೆಯವರು ತುಂಬಾ ಆಸಕ್ತಿ ಗೌರವಗಳಿಂದ ಪ್ರತಿವರ್ಷ ಇವನ್ನೆಲ್ಲ ನಡೆಸುತ್ತಾರೆ.

ಬಿಡುವಿಲ್ಲದ ಕೆಲಸಗಳಲ್ಲಿ ನನ್ನಲ್ಲಿರುವ ಕವಿ–ವಿಮರ್ಶಕ ಒಂದಿಷ್ಟು ಹಿಂದೆ ಬಿದ್ದಿದ್ದಾನೆನ್ನುವುದಂತೂ ನಿಜ. ಅಧ್ಯಯನ–ಬರವಣಿಗೆಗೆ ಸಮಯವೇ ಇಲ್ಲ. ಶಾಂತವಾಗಿ ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಛಂದಸ್ಸು, ವ್ಯಾಕರಣ, ಕಾವ್ಯ ಮೀಮಾಂಸೆ ಕುರಿತು ಒಂದೊಂದು ಕೃತಿ ರಚಿಸಬೇಕು ಎಂಬ ಆಲೋಚನೆ ಇದೆ. ತೌಲನಿಕ ಕಾವ್ಯ ಮೀಮಾಂಸೆ, ಅನ್ವಯಿಕ ಕಾವ್ಯ ಮೀಮಾಂಸೆ, ತೌಲನಿಕ ಸಾಹಿತ್ಯ ಅಧ್ಯಯನ ಕುರಿತು ಕೃತಿಗಳ ರಚನೆಯ ಆಸೆ ಇದೆ. ಕನ್ನಡ ಸಾಹಿತ್ಯದ ಪ್ರಮುಖ ಹೆಜ್ಜೆ ಗುರುತುಗಳು ಕುರಿತು ಒಂದು ಕೃತಿ ರಚಿಸಬೇಕು. ಟಿಪ್ಪಣಿಗಳನ್ನು ಮಾಡಿಕೊಂಡಿದ್ದೇನೆ. ಗಟ್ಟಿಯಾಗಿ ಕೂತು ಬರೆಯಲು ಸಮಯಾವಕಾಶವಾಗುತ್ತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಸೇವೆಯಲ್ಲಿ, ತನ್ಮೂಲಕ ಕನ್ನಡಿಗರ – ನಾಡು ನುಡಿ ಸೇವೆಯಲ್ಲಿ ನನ್ನ ಸಾಹಿತ್ಯ ಸೃಷ್ಟಿ ಒಂದಿಷ್ಟು ಹಿಂದೆ ಉಳಿದಿದೆ. ಆದಷ್ಟು ಸಮಯ ಹೊಂದಿಸಿಕೊಂಡು ಕೆಲಸ ಮಾಡಬೇಕೆಂದಿದ್ದೇನೆ.

೧೧, ೧೨, ೧೩, ಮೇ ತಿಂಗಳಲ್ಲಿ ಹಾಸನದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಯುವುದಿದೆ. ಮನಸ್ಸೆಲ್ಲ ಅದರ ಮೇಲೆಯೇ ಇದೆ. ಜನ ಬೆಂಬಲ, ರಾಜ್ಯ ಸರ್ಕಾರದ ಬೆಂಬಲ ದೊರಕಿಸಿಕೊಂಡು ಈ ಕೆಲಸ ನಡೆಯಬೇಕು. ನಾನು ಅಧ್ಯಕ್ಷನಾದ ಮೇಲೆ ಆಚರಿಸಲಿರುವ ಮೊದಲ ದೊಡ್ಡ ಕನ್ನಡ ಸಮ್ಮೇಳನ ಇದು. ಇದೇ ಆಲೋಚನೆ ನನ್ನ ಮನಸ್ಸನ್ನೆಲ್ಲ ಆವರಿಸಿದೆ.

ಪರಿಷತ್ತಿಗೆ ಸ್ವಾಯತ್ತತೆ ದೊರಕಿಸಿಕೊಡಲು ತುಂಬಾ ಹೆಣಗಿದೆ, ಈಗಲೂ ಹೆಣಗುತ್ತಿದ್ದೇನೆ. ಹಗಲಿರುಳು ಅದೇ ಹಸಿವು, ಹಂಬಲ, ಪರಿಷತ್ತನ್ನು ಕಟ್ಟಿಕೊಂಡ ಮೇಲೆ ಶ್ರೀ ಗೊರುಚರವರಂತೆ ಮನೆ ಮರೆತಿದ್ದೇನೆ, ಆರೋಗ್ಯದ ಕಡೆ ಗಮನಕೊಡುವುದನ್ನೂ ಬಿಟ್ಟು ಬಿಟ್ಟಿದ್ದೇನೆ. ಪರಿಷತ್ತಿನಿಂದ ಒಂದೇ ಒಂದು ಪೈಸವನ್ನೂ ಯಾವ ರೂಪದಿಂದಲೂ ಸ್ವೀಕರಿಸದೆ ಅದರ ಪುರೋಭಿವೃದ್ಧಿಗಾಗಿ ನನ್ನನ್ನೇ ನಾನು ಅರ್ಪಿಸಿಕೊಂಡಿದ್ದೇನೆ. ಇದರಲ್ಲಿ ನನಗೆ ಹರ್ಷವಿದೆ; ತೃಪ್ತಯೂ ಇದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸೇವೆ ಕನ್ನಡ ರಾಜರಾಜೇಶ್ವರಿಯ ಪೂಜೆ ಎಂಬು ಭಾವಿಸಿ ಆಚರಿಸುತ್ತಿದ್ದೇನೆ. ನನ್ನ ಐದು ಕೋಟಿ ಕನ್ನಡ ಬಂಧುಭಗಿನಿಯರು ಆರಿಸಿ ಕಳುಹಿಸಿದ್ದೇಕೆ? ಮೋಜು ಮಾಡಲಲ್ಲ; ಕನ್ನಡಕ್ಕಾಗಿ, ನಾಡಿಗಾಗಿ, ಸಾಹಿತ್ಯ ಸಂಸ್ಕೃತಿಗಳಿಗಾಗ ಶ್ರಮಿಸಲಿ ಎಂದು. ಆ ಕೆಲಸವನ್ನು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಇದಕ್ಕೆ ನನ್ನ ಅಂತರಾತ್ಮವೇ ಸಾಕ್ಷಿ. ಅಧಿಕಾರ

ಎಂಬುದು ಸ್ವೇಚ್ಛಾಚಾರದ ವೇದಿಕೆ ಅಲ್ಲ, ಸೇವೆಯ ಕರ್ಮಭೂಮಿ ಎಂಬುದು ನನ್ನ ವ್ಯಾಖ್ಯೆ. ಅದನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿದ್ದೇನೆ. ಪರಿಷತ್ತಿನ ಆವರಣದಲ್ಲಿದ್ದ ಗುಡ್ಡದಷ್ಟಿದ್ದ ಮಣ್ಣು, ಮಸಿ, ತೆಗೆಸಿ ಆಗಿದೆ. ಒಂದು ಕೊಳವೆಬಾವಿ ತೆಗೆಸಿ 'ನೀರು ನಿರಂತರ ಧಾರೆ'ಯಾಗಿರಲು ವ್ಯವಸ್ಥೆ ಮಾಡಿ ಆಗಿದೆ. ಅಚ್ಚುಕಟ್ಟಾದ ನವೀಕರಣಕ್ಕಾಗಿ ನನ್ನ ಮಗಳು ರಾಗಿಣಿ, ಅಳಿಯ ಸಂಗಮೇಶ್ವರ ದಾನವಾಗಿ ಕೊಟ್ಟ ಮೂರು, ನಾಲ್ಕು ಲಕ್ಷ ರೂಪಾಯಿಗಳ ಕಂಪ್ಯೂಟರ್, ಲೇಸರ್ ಪ್ರಿಂಟರ್ ಇತ್ಯಾದಿಗಳನ್ನು ಅಳವಡಿಸಿ ಆಗಿದೆ. ಸುಮಾರು ಐವತ್ತು ವರ್ಷಗಳಿಂದಲೂ ಬೆಳೆದು ಬಂದ ನಿಘಂಟುವಿನ ಕಡೆಯದಾದ ಎಂಟನೆಯ ಸಂಪುಟವನ್ನು ಬಿಡುಗಡೆ ಮಾಡಿ ಆಗಿದೆ. ಇಷ್ಟಾದರೂ ಆದದ್ದು ಅಲ್ಪ ಎಂಬುದೇ ನನ್ನ ಭಾವನೆ. ಆಗುವುದು ಬಹಳ ಇದೆ, ಬೆಟ್ಟದಷ್ಟಿದೆ. ಅತೃಪ್ತಿಯೇ ಪ್ರಗತಿಯ ಹೆಬ್ಬಾಗಿಲು. ಆ ದಿಸೆಯಲ್ಲಿ ನಾನಿದ್ದೇನೆ. ಪರಿಷತ್ತಿಗೆ ಸಂಪೂರ್ಣ ಸ್ವಾವಲಂಬನೆ ದೊರಕಿಸಿಕೊಡುವ ಹೊರತು ನನಗೆ ಸಮಾಧಾನ ಇಲ್ಲ; ನಿದ್ದೆಯೂ ಇಲ್ಲ! "ಇನ್ನೆಲ್ಲಿಯ ನಿದ್ದೆ!"

~ * ~

# ಉತ್ತರಮುಖಿ

- ನಿಮ್ಮ ಕಲ್ಪನೆಯಲ್ಲಿ 'ಪರಮ ಸುಖ' ಎಂದರೆ ಯಾವುದು?
  –ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು
- ನಿಮಗೆ ಅತ್ಯಂತ ಆತಂಕ ತರುವ ಸಂಗತಿ ಯಾವುದು?
  –ನಿಂದಕ ಹಂದಿಗಳ ಕೆಟ್ಟ ಬಾಯಿ.
- ನಿಮ್ಮ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ್ದು ಯಾರು?
  – ನನ್ನ ತಂದೆ.
- ಇತರರ ಯಾವ ಗುಣ ನಿಮಗೆ ಹಿಡಿಸುವುದಿಲ್ಲ?
  –ಚಾಡಿ.
- ನಿಮ್ಮ ಯಾವ ಗುಣ ನಿಮಗೆ ಬೇಸರ ತರಿಸುತ್ತದೆ?
  –ಅಲಸ್ಯ.
- ನಿಮ್ಮ ಅಮೂಲ್ಯ ಆಸ್ತಿ ಯಾವುದು?
  – ನನ್ನ ಹೆಂಡತಿ ಮಕ್ಕಳು.
- ನೀವು ಸದಾ ನಿಮ್ಮೊಡನೆ ಒಯ್ಯುವ ವಸ್ತು ಯಾವುದು?
  –ಪೆನ್ನು ಪೇಪರ್ ಮತ್ತು ಪುಸ್ತಕ.
- ನೀವು ಎಂದೂ ಮರೆಯಲಾಗದ ಮಾತು ಯಾವುದು?
  –ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲತಾರೆ– ಎಂಬ ಅಕ್ಕನ ನುಡಿ.
- ನಿಮ್ಮ ಮನಸ್ಸನ್ನು ಬಹುವಾಗಿ ಕುಗ್ಗಿಸುವ ಸಂಗತಿ ಯಾವುದು?
  –ತಪ್ಪು ಗ್ರಹಿಕೆ.
- ನಿಮ್ಮ ಅತ್ಯಂತ ಪ್ರಿಯವಾದ ಓಡಾಟದ ತಾಣ ಯಾವುದು?
  –ಮಲೆನಾಡು
- ನಿಮ್ಮ ಜೀವನದ ಅತ್ಯಂತ ಮಹತ್ವದ ನಿರ್ಣಯ ಯಾವುದಾಗಿತ್ತು?
  –ಅಧ್ಯಾಪಕನೇ ಆಗಬೇಕು ಎಂಬುದು.

- ನಿಮ್ಮ ಜೀವನದ ಅತ್ಯಂತ ಸಂತಸದ ಕ್ಷಣ ಯಾವುದಾಗಿತ್ತು?
  –ಮದುವೆಗೆ ಮುಂಚೆ ನನ್ನವಳೊಡನೆ ಮಾತನಾಡಿದ್ದು.
- ನೀವು ಮರೆಯಬೇಕೆಂದು ಬಯಸುವ ಕಹಿ ಕ್ಷಣ?
  –ನನ್ನ ತಾಯಿಯ ಮರಣ.
- ಎಂಥ ಸಂದರ್ಭಗಳಲ್ಲಿ ನೀವು ಸುಳ್ಳು ಹೇಳುತ್ತೀರಿ?
  –ಭಾಷಣ ಮಾಡುವಾಗ.
- ನಿಮ್ಮ ಅತ್ಯಂತ ಪ್ರೀತಿಯ ಕನಸು ಯಾವುದು?
  –ಮಾನವೀಯತೆ
- ನಿಮ್ಮ ವಿರಾಮದ ಕ್ಷಣಗಳನ್ನು ನೀವು ಹೇಗೆ ಕಳೆಯುತ್ತೀರಿ?
  –ಓದುವ ಮೂಲಕ
- ನೀವು ಎಂಥ ಸಾವನ್ನು ಬಯಸುತ್ತೀರಿ?
  –ಹೆಂಡತಿಗೂ ತೊಂದರೆ ಕೊಡದಂಥದು.
- ನಿಮ್ಮನ್ನು ಜನರು ಹೇಗೆ ನೆನಪಿಸಿಕೊಳ್ಳಬೇಕು?
  –ಒಳ್ಳೆಯ ಮೇಷ್ಟ್ರು.
- ಸಾಧ್ಯವಿದ್ದರೆ ನೀವು ಜಗತ್ತಿನ ಬೇರೆ ಏನಾಗಲೂ ಬಯಸುತ್ತೀರಿ?
  –ಕಥೆಯಾಗಲು.
- ದೇವರು ನಿಮಗೆ ಮೂರು ವರ ಕೊಟ್ಟರೆ ಮೂರನೆಯ ವರದಲ್ಲಿ ಏನನ್ನು ಕೇಳುತ್ತೀರಿ?
  –ಮನುಷ್ಯನಾಗುವುದನ್ನು ಕಲಿಸು ಎಂದು.
- ನಿಮಗೆ ಅತಿ ಕೋಪ ಬಂದಾಗ ಏನು ಮಾಡುತ್ತೀರಿ?
  –ಆತ್ಮ ನಿಂದನೆ.
- ನಿಮಗೆ ಅತಿ ದುಃಖವಾದಾಗ ಏನು ಮಾಡುತ್ತೀರಿ?
  –ಏಕಾಂತ ಬಯಸುತ್ತೇನೆ.
- ಚಿಕ್ಕವರಾಗಿದ್ದಾಗ ನೀವು ಏನಾಗಲು ಬಯಸಿದ್ದೀರಿ?
  –ಕವಿಯಾಗಲು.
- ನೀವು ಯಾರನ್ನಾದರೂ ಹೊಡೆದಿದ್ದೀರಾ? ಯಾಕೆ?
  –ದನಕ್ಕೆ ಬಡಿದಿದ್ದೇನೆ; ಕದ್ದು ಮೇಯಲು ಹೋದಾಗ.

- ನೀವು ಸಾಯುವ ಮೊದಲು ಮಾಡಬಯಸುವ ಕೆಲಸವೇನು?
  –ನನ್ನ ಹಳ್ಳಿಗರ ಸೇವೆ.
- ನೀವು ನೀವಲ್ಲವಾಗಿದ್ದಿದ್ದರೆ ಬೇರೆ ಏನಾಗಲು ಬಯಸುತ್ತೀದ್ದೀರಿ?
  –ಸಂಗೀತಗಾರ.
- ಯಾವ ಮೌಲ್ಯಕ್ಕಾಗಿ ನೀವು ನಿಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಿದ್ದೀರಿ?
  –ಸತ್ಯಕ್ಕಾಗಿ.
- ನಿಮಗೆ ಒಂದು ಕೋಟಿ ರೂಪಾಯಿ ಸಿಕ್ಕರೆ ಏನು ಮಾಡುವಿರಿ?
  –ಶ್ರೇಷ್ಠ ಕೃತಿ ಪ್ರಕಟಿಸುವೆ.
- ನಿಮ್ಮ ಕುರಿತು ನಿಮಗೇ ನಾಚಿಕೆಯಾದ ಸಂದರ್ಭ ಯಾವುದು?
  –ನಿರಪರಾಧಿಯನ್ನು ಬಯ್ದದ್ದು.

~ * ~

# ಸಾಧನೆಯ ಮೂರು ಸಂವತ್ಸರಗಳು

**ಡಾ॥ ಸಾ.ಶಿ. ಮರುಳಯ್ಯ**

ತಾನು ಮುಂದೆ ಅಯೋಧ್ಯೆಯನ್ನಾಳಬೇಕಾಗುತ್ತದೆಂದು ತಿಳಿದಿದ್ದ ರಾಮ, ಆಡಳಿತ ವಿಚಾರವಾಗಿ ಅನುಭವಿ ರಾವಣನನ್ನು ಕೇಳಿ ತಿಳಿದುಕೊಂಡು ಬರಲು ಲಕ್ಷ್ಮಣನನ್ನು ಕಳುಹಿಸಿದನಂತೆ. ತನ್ನ ಬಳಿಗೆ ಬಂದ ಲಕ್ಷ್ಮಣನಿಗೆ ರಾವಣ ಹೇಳಿದನಂತೆ. "ನೋಡಪ್ಪ, ಅಧಿಕಾರ ಸ್ವೀಕರಿಸಿದ ಕೂಡಲೆ ರಾಜನಾದವನು ಅತ್ಯಗತ್ಯ ಪ್ರಜಾಹಿತ ಕಾರ್ಯಗಳನ್ನು ಮೊದಲು ಮಾಡಿ ಮುಗಿಸಬೇಕು. ಪ್ರಜೆಗಳ ಒಲವು ಗಳಿಸಿ ಕೊಳ್ಳುವ ಕಾರ್ಯ ಮಾಡಬೇಕು. ಅದೇ ಆಡಳಿತದ ಮೊದಲ ಗುಟ್ಟು" ಎಂದು. ನಾನು ಪರಿಷತ್ತಿನ ಅಧ್ಯಕ್ಷನಾಗಿ ಬಂದ ಕೂಡಲೆ ಇಂತಹ ಕೆಲವೊಂದು ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸಿದ್ದೇನೆ. ಅಧ್ಯಕ್ಷ ಸ್ಥಾನದಿಂದ ನಿವೃತ್ತನಾಗುತ್ತಿರುವ ಈ ಹೊತ್ತಿನಲ್ಲಿ ನನ್ನ ಸೋಲು ಗೆಲುವುಗಳನ್ನು ಸಕಲ ಕನ್ನಡಿಗರ ಮುಂದೆ ತೆರೆದಿಡಲು ಇಚ್ಛಿಸುತ್ತೇನೆ.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ದಿನಾಂಕ ೨೨-೬-೧೯೯೫ರಂದು ಅಧಿಕಾರ ಸ್ವೀಕರಿಸಿದೆ. ಪರಿಷತ್ತಿಗಾಗಿ ಅನೇಕ ಕಾರ್ಯಯೋಜನೆಗಳ ಕನಸನ್ನಿಟ್ಟುಕೊಂಡು ಕಾರ್ಯಪ್ರವೃತ್ತನಾದೆ. ಆದರೆ ಆರ್ಥಿಕ ಅನನುಕೂಲತೆಯಿಂದಾಗಿ ಎಣಿಸಿದಷ್ಟು ಕೆಲಸ ಸಾಧ್ಯವಾಗದಿದ್ದರೂ ತೃಪ್ತಿಕರ ಸಾಧನೆ ಮಾಡಿದ್ದೇನೆ ಎಂಬ ಸಮಾಧಾನ ನನಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸಬಹುದು.

### ಶಾಶ್ವತ ಅನುದಾನ

ಪರಿಷತ್ತಿನ ಎಲ್ಲ ಸಿಬ್ಬಂದಿ ವರ್ಗವನ್ನೂ ೧-೬-೧೯೯೬ ರಿಂದ ಶಾಶ್ವತ ಅನುದಾನಕ್ಕೆ ಒಳಪಡಿಸುವ ಮೂಲಕ ಪರಿಷತ್ತಿನ ಬಲವರ್ಧನೆ ಸಾಧ್ಯವಾಗಿದೆ. ಪರಿಷತ್ತು ಹುಟ್ಟಿದಾಗಿನಿಂದ ಆರ್ಥಿಕ ಭದ್ರತೆ ಕಾಣದೆ ನರಳುತ್ತಿತ್ತು. ಸರ್ಕಾರದ ಕೃಪಾನುದಾನದಿಂದ ಪರಿಷತ್ತಿನ ನೌಕರರು, ಬಿ.ಎಂ.ಶ್ರೀ. ಅಚ್ಚುಕೂಟದ ಕಾರ್ಮಿಕರು ಹಾಗೂ ನಿಘಂಟು ವಿಭಾಗದ ಸಿಬ್ಬಂದಿ ಎಲ್ಲ ಸೇರಿ ಸುಮಾರು ಅರವತ್ತೆರಡು ಜನಕ್ಕೆ ಜೀವದಾನ ಮಾಡಿದಂತಾಗದೆ.

ಶ್ರೀ ಹೆಚ್.ಡಿ. ದೇವೇಗೌಡರ ಸರಕಾರ ಶಾಶ್ವತಾನುದಾನ ನೀಡುವ ಮೂಲಕ ಅವರಿಗೆ ಬದುಕು ಕೊಟ್ಟಿದೆ, ಬದುಕಿಗೊಂದು ಬೆಳಕು ನೀಡಿದೆ. ಈ ಉಪಕೃತಿಗಾಗಿ ಶ್ರೀ ಹೆಚ್.ಡಿ. ದೇವೇಗೌಡರನ್ನೂ ಅವರ ಮಂತ್ರಿಮಂಡಲ ಹಾಗೂ ಅಧಿಕಾರ ವರ್ಗವನ್ನೂ ಮುಖ್ಯವಾಗಿ ಶ್ರೀ ಬಿ. ಈಶ್ವರಪ್ಪ, ಶ್ರೀ ಅ.ರಾ. ಚಂದ್ರಹಾಸ ಗುಪ್ತ ಹಾಗೂ ಶ್ರೀ ವೈ.ಕೆ. ಮುದ್ದುಕೃಷ್ಣ ಇವರನ್ನು ಪರಿಷತ್ತು ಹಾರ್ದಿಕವಾಗಿ. ಅಭಿನಂದಿಸುತ್ತದೆ.

## ಕಂಪ್ಯೂಟರೀಕರಣ

ಎರಡನೇಯದಾಗಿ, ನಾಗಾಲೋಟದಲ್ಲಿ ಓಡುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ ಸಮಸ್ಪರ್ಧಿಯಾಗಿ ಭಾಗವಹಿಸುವಂತಾಗಲು ಪರಿಷತ್ತಿಗೆ ಈಗ ಕಂಪ್ಯೂಟರ್ ಒದಗಿಸುವ ಮೂಲಕ ಮುದ್ರಣ ವಿಭಾಗಕ್ಕೊಂದು ಹೊಸ ಆಯಾಮವನ್ನೇ ನಿರ್ಮಿಸಲಾಗಿದೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಂಪ್ಯೂಟರ್, ಲೇಸರ್ ಪ್ರಿಂಟರ್ ಮೊದಲಾದ ಉಪಕರಣಗಳನ್ನು ಅಮೇರಿಕದಲ್ಲಿರುವ ಅನಿವಾಸಿ ಭಾರತೀಯರಾದ, ನನ್ನ ಮಗಳು ಮತ್ತು ಅಳಿಯಂದಿರಾದ ಶ್ರೀಮತಿ ಎಂ.ರಾಗಿಣಿ ಸಂಗಮೇಶ್ವರ್ ಮತ್ತು ಶ್ರೀ ಎಸ್.ಜಿ. ಸಂಗಮೇಶ್ವರ್ 'ರಾಗಿಣಿ ಕಂಪ್ಯೂಟರ್ಸ್' ಎಂಬ ಹೆಸರಿನಲ್ಲಿ ಉದಾರ ಕಾಣಿಕೆಯಾಗಿ ನೀಡಿದ್ದಾರೆ. ಆ ಪುಣ್ಯ ದಂಪತಿಗಳಿಗೆ ಪರಿಷತ್ತು ಆಭಾರಿಯಾಗಿದೆ.

ಪರಿಷತ್ತಿನ ಸದಸ್ಯತ್ವ ಸಂಖ್ಯೆ ಇಪ್ಪತ್ತೈದು ಸಾವಿರಕ್ಕೆ ಹತ್ತಿರವಾಗುತ್ತಿದೆ. ಜಿಲ್ಲಾವಾರು, ತಾಲೂಕುವಾರು ವಿಭಾಗಿಸಿ ಸುವ್ಯವಸ್ಥೆಗೊಳಿಸಲಾಗುತ್ತಿದೆ. ಅದೇ ರೀತಿ ದತ್ತಿ ನಿಧಿ, ಅಮೃತ ನಿಧಿ, ಗ್ರಂಥ ಭಂಡಾರ, ಪರಿಷತ್ ಕಾರ್ಯಾಗಾರ, ಕನ್ನಡ ನುಡಿ, ಮತ್ತು ಪರಿಷತ್ಪತ್ರಿಕೆಗಳ ಪ್ರಕಟಣೆ, ನೂರಾರು ಪುಸ್ತಕಗಳ ಪ್ರಕಟಣೆ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ಪ್ರಕಟಣೆ – ಇವೇ ಮೊದಲಾದ ತಾಂತ್ರಿಕ ಕಾರ್ಯಗಳನ್ನು ಕ್ರಮಬದ್ಧಗೊಳಿಸಲು ಈ ಗಣಕ ಯಂತ್ರವನ್ನು ಬಳಸಿಕೊಳ್ಳಲಾಗುತ್ತಿದೆ.

## ನಿಘಂಟು ಯೋಜನೆ

ಮೂರನೆಯದಾಗಿ ಸುಮಾರು ಅರ್ಧ ಶತಮಾನದಿಂದಲೂ ಸಾಗಿಬಂದ ಎಂಟು ಸಂಪುಟಗಳ ಕನ್ನಡ–ಕನ್ನಡ ನಿಘಂಟು ಯೋಜನೆಯನ್ನು ಪರಿಷತ್ತು ಈ ಅವಧಿಯಲ್ಲಿ ಪೂರ್ಣಗೊಳಿಸಿದೆ. ದಿನಾಂಕ ೨೬–೧೧–೧೯೯೫ರಂದು ತನ್ನ ಎಂಟನೆಯ ಸಂಪುಟವನ್ನು ಬಿಡುಗಡೆ ಮಾಡುವ ಮೂಲಕ ಧನ್ಯತೆ ತಳೆದಿದೆ. ಅಂತೆಯೇ, ನಿಘಂಟು ವರ್ಗವನ್ನು ತನ್ನ ಕಕ್ಷೆಗೆ ತೆಗೆದುಕೊಂಡು ನಿಘಂಟುವಿನ ಪುನರ್ ಪರಿಶೀಲನೆ ಮತ್ತು ಸಂಪಾದನೆಗಾಗಿ ಕನ್ನಡ ಶಬ್ದಗಳಿಗೆ ಲಿಪ್ಯಂತರ, ಭಾಷಾಂತರ ಅರ್ಥ ಕೊಡುವ ಮೂಲಕ ಹೊಸ

ನಿಘಂಟುವಿನ ಪ್ರಥಮ ಸಂಪುಟವನ್ನು ಅಚ್ಚಿಗೆ ಸಿದ್ಧಪಡಿಸಿದೆ. ಇದಲ್ಲದೆ 'ಐ ಟಿ' ನಿಘಂಟು, 'ಅವಳಿ ಪಡೆನುಡಿ ಕೋಶ'ಗಳನ್ನೂ ಸಿದ್ಧಪಡಿಸಿದೆ.

**ಪುಸ್ತಕ ಪ್ರಕಟಣೆ**

ನಾಲ್ಕನೆಯದಾಗಿ, ಈ ಮೂರು ವರ್ಷದ ಅವಧಿಯಲ್ಲಿ ಸುಮಾರು ಎಪ್ಪತ್ತು ಮೌಲಿಕ ಗ್ರಂಥಗಳನ್ನು ಪರಿಷತ್ತು ಹೊರತಂದಿದೆ.

**ನಿರಂತರ ನೀರು**

ಐದನೆಯದಾಗಿ, ಬೆಂಗಳೂರಿನ ಜಲಮಂಡಲಿ ಪೂರೈಸುತ್ತಿದ್ದ ನೀರು ಪರಿಷತ್ತಿಗೆ ಸಾಕಾಗದೆ ಬಹಳ ತೊಂದರೆಯಾಗಿತ್ತು. ಅದರ ನಿವಾರಣಾರ್ಥವಾಗಿ ಆವರಣದಲ್ಲಿ ಕೊಳವೆ ಬಾವಿ ತೆಗೆಸಿ ಜಲಸಮೃದ್ಧಿ ಏರ್ಪಡಿಸಿದ ಅವಧಿ ಇದು. ಸುಮಾರು ಅರವತ್ತು ಸಾವಿರ ರೂಪಾಯಿ ವೆಚ್ಚದ ಈ ಕಾರ್ಯಕ್ಕೆ ಪರಿಷತ್ತು ತನ್ನ ಬೊಕ್ಕಸದಿಂದ ಒಂದು ಚಿಕ್ಕಾಸನ್ನೂ ಖರ್ಚುಮಾಡದೆ, ದಾನಿಗಳಿಂದಲೇ ಪೂರ್ಣಗೊಳಿಸಿದೆ ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸಿದೆ. ಈ ಮಹಾಮಣಿಹದಲ್ಲಿ ನೆರವಾದ ಖ್ಯಾತ ಕೈಗಾರಿಕೋದ್ಯಮಿ ಶ್ರೀ ಎಂ.ಎನ್. ಶಿವಕುಮಾರ್ ಅವರನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ.

**ವಾಹನ ಖರೀದಿ**

ಆರನೆಯದಾಗಿ, ಇಂದು ಪರಿಷದಧ್ಯಕ್ಷರ ಕಾರ್ಯವ್ಯಾಪ್ತಿ ಬಹಳ ದೊಡ್ಡದಾಗಿದೆ. ದಿನನಿತ್ಯವೂ ರಾಜ್ಯಾದ್ಯಂತ ನಡೆಯುವ ಕಾರ್ಯ ಚಟುವಟಿಕೆಗಳಲ್ಲಿ ಅವರು ಭಾಗವಹಿಸಬೇಕಾಗಿದೆ. ಭಾಷಾಭಿಮಾನ, ಸಾಹಿತ್ಯಾಸಕ್ತಿ, ಗಡಿರಕ್ಷಣೆ, ಗಡಿಯಾಚೆಯ ಕನ್ನಡಿಗರಿಗೆ ಸಾಂತ್ವನ ಮೊದಲಾದುವನ್ನು ಒದಗಿಸುವ ಹೊಣೆ ಅಧ್ಯಕ್ಷರದ್ದು. ಅದರ ಸುಗಮತೆಗಾಗಿ ಸುಮಾರು ಮೂರು ಲಕ್ಷ ರೂಪಾಯಿಗಳ ಒಂದು ಅಂಬಾಸಿಡರ್ ಕಾರನ್ನು ಅಮೃತನಿಧಿಯ ಬಡ್ಡಿಯಿಂದ ಕೊಂಡುಕೊಳ್ಳಲಾಗಿದೆ.

**ಇತರೆ ಚಟುವಟಿಕೆಗಳು**

ಏಳನೆಯದಾಗಿ, ಯುವನಾಮ ಸಂವತ್ಸರದ ಆರಂಭದಲ್ಲಿ ಸುಮಾರು ೨೭ ಜನ ಸಂಸತ್ ಸದಸ್ಯರನ್ನು ಪರಿಷತ್ತಿಗೆ ಆಹ್ವಾನಿಸಿ ಅವರಿಗೆ ನಾಡು-ನುಡಿಗಳ ಬಗ್ಗೆ ಕನ್ನಡಿಗರ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ನಡೆಯುತ್ತಿರುವ ಕನ್ನಡೇತರರ ಹೀನ ವಿದ್ಯಮಾನಗಳ ಬಗ್ಗೆ ನಗ್ನ ದರ್ಶನವಿತ್ತು ಕನ್ನಡಮ್ಮನ ಮಕ್ಕಳ ಸಂರಕ್ಷಣೆ, ಸಂವರ್ಧನೆಗಳ ಕಡೆಗೆ ಅವರ ಗಮನ

ಸೆಳೆಯಲಾಯಿತು. ಚಿತ್ರರಂಗದ ಧ್ರುವತಾರೆ ಡಾ॥ ರಾಜ್‌ಕುಮಾರ್‌ರವರ ನೇತೃತ್ವದಲ್ಲಿ ಕನ್ನಡ ಚಲನಚಿತ್ರ ನಿರ್ಮಾಪಕರ, ನಿರ್ದೇಶಕ ಹಾಗೂ ಕಲಾವಿದರನ್ನು ಒಂದೆಡೆ ಸಮಾವೇಶಗೊಳಿಸಿ, ಅವರ ಹಲವು ಹತ್ತೆಂಟು ಸಮಸ್ಯೆಗಳಿಗೆ ಪರಿಷತ್ತು ಪರಿಹಾರ ಸೂಚಿಸುವ ಮೂಲಕ ಅವರಿಗೆ ತನ್ನ ಸರ್ವವಿಧದ ಬೆಂಬಲ ಘೋಷಿಸಿತು. ರಾಜ್ಯದ ದಲಿತ ಉದಯೋನ್ಮುಖ ಲೇಖಕ ಲೇಖಕಿಯರಿಗಾಗಿ ಸಾಹಿತ್ಯ ಕಮ್ಮಟವನ್ನು ಬೆಂಗಳೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ ಏರ್ಪಡಿಸಿ ಆಗಮಿಸಿದ್ದ ೬೦–೭೦ ಪ್ರತಿಭೆಗಳಿಗೆ ವ್ಯುತ್ಪತ್ತಿಯ ಉತ್ತಮ ತರಬೇತಿ ಮತ್ತು ಮಾರ್ಗದರ್ಶನ ಮಾಡಲಾಯಿತು.

ಮೂರು ವರ್ಷಗಳ ಅವಧಿಯಲ್ಲಿ ನೂರಾರು ಜಿಲ್ಲಾ ಹಾಗೂ ತಾಲ್ಲೂಕು ಸಾಹಿತ್ಯ ಸಮ್ಮೇಳನಗಳು, ದತ್ತಿ ಕಾರ್ಯಕ್ರಮಗಳು, ಹತ್ತಾರು ವಿಚಾರ ಸಂಕಿರಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 'ಕಾವ್ಯ ಕಾವೇರಿ' – ಇವೇ ಮೊದಲಾದ ಶ್ರೇಷ್ಠಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪರಿಷತ್ತು ಅತ್ಯಂತ ಅರ್ಥಪೂರ್ಣವಾಗಿ, ಔಚಿತ್ಯಪೂರ್ಣವಾಗಿ ನೆರವೇರಿಸಿದೆ. ಅಖಿಲ ಭಾರತಮಟ್ಟದ ಎರಡು ಸಮ್ಮೇಳನಗಳು, ಸುಮಾರು ಇಪ್ಪತ್ತು ಜಿಲ್ಲಾ ಸಮ್ಮೇಳನಗಳು ಹಾಗೂ ಸುಮಾರು ಎಂಭತ್ತೈದು ತಾಲ್ಲೂಕು ಸಮ್ಮೇಳನಗಳನ್ನು ನಡೆಸಿದ ಹೆಗ್ಗಳಿಕೆ ನಮ್ಮದು.

## ಪರಿಷತ್ತಿನ ಅರ್ಥಕೋಶ ಸಂವರ್ಧನೆ

**೧. ದತ್ತಿ ನಿಧಿ :** ಪರಿಷತ್ತಿನ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ದಿನ, ಅಂದರೆ ದಿನಾಂಕ ೨೨–೬–೯೫ರಿಂದ ಪರಿಷತ್ತಿನಲ್ಲಿದ್ದ ದತ್ತಿ ಹಣದ ಒಟ್ಟು ಮೊತ್ತ ೨೧,೯೧,೧೦೫ ರೂಪಾಯಿಗಳು. ಇದೀಗ ಅಧಿಕಾರ ಬಿಟ್ಟುಹೋಗುತ್ತಿರುವಾಗಿನ ಒಟ್ಟು ದತ್ತಿ ಹಣದ ಮೊತ್ತ ೪೨,೯೦,೦೫೬–೦೦ ರೂಪಾಯಿಗಳು. ಪರಿಷತ್ತು ಸ್ಥಾಪನೆ ಅದಾಗಿನಿಂದ ಸಂಗ್ರಹವಾಗಿದ್ದ ದತ್ತಿ ಹಣದ ಒಟ್ಟು ಮೊತ್ತವನ್ನು ಈ ಮೂರು ವರ್ಷಗಳಲ್ಲಿ ದ್ವಿಗುಣಗೊಳಿಸಲಾಗಿದೆ ಎಂಬುದನ್ನು ವಿನಮ್ರವಾಗಿ ನಿವೇದಿಸಬಯಸುತ್ತೇನೆ. ಈ ಅವಧಿಯಲ್ಲಿ ಪುಸ್ತಕ ಪ್ರಕಟಣೆಗಾಗಿಯೇ ದೊಡ್ಡ ಮೊತ್ತದ ಪ್ರತ್ಯೇಕ ದತ್ತಿಗಳನ್ನು ಸ್ಥಾಪಿಸಲಾಗಿದೆ.

**೨. ಆಜೀವ ಸದದಸ್ಯತ್ವ :** ಆಜೀವ ಸದಸ್ಯತ್ವದ ಶುಲ್ಕ ನಿಶ್ಚಿತ ಠೇವಣಿಯಲ್ಲಿರಬೇಕಾದ್ದು ನಿಯಮ. ಈ ಹಿಂದೆ ಈ ಠೇವಣಿಯಲ್ಲಿ ಸ್ವಲ್ಪ ಭಾಗವನ್ನು ಬಳಸಲಾಗಿತ್ತು. ನನ್ನ ಅಧಿಕಾರಾವಧಿಯಲ್ಲಿ ೯.೦೦ ಲಕ್ಷ ರೂಪಾಯಿಗಳನ್ನು ತುಂಬಿ ಈ ಕೊರತೆಯನ್ನು ಸಾಕಷ್ಟು ಮಟ್ಟಿಗೆ ನೀಗಿಸಲಾಗಿದೆ. ಜೂನ್ ೧೯೯೫ ರಲ್ಲಿ ೧೨,೪೧,೦೮೩–೦೦ ರೂಪಾಯಿಗಳಿದ್ದಂತಹ ಅಜೀವ ಸದಸ್ಯತ್ವ ಶುಲ್ಕ ಇಂದು ೩೧,೧೫,೮೫೪–೦೦ ರೂಪಾಯಿಗಳಿಗೆ ವೃದ್ಧಿಯಾಗಿದೆ ಎಂದು ತಿಳಿಸಲು ಹರ್ಷವುಂಟಾಗುತ್ತದೆ. ಅಮೃತನಿಧಿಯ ಮೊತ್ತ ಇಂದು ೨೮,೭೯,೮೪೪–೦೦ ರೂಪಾಯಿಗಳಾಗಿವೆ.

ಹೀಗೆ ಪರಿಷತ್ತಿನ ಅರ್ಥಕೋಶ ಸಂವರ್ಧನೆಗೆ ಪ್ರಾಂಜಲ ಪ್ರಯತ್ನ ನಡೆಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಹಣೆಗೆ ಅಧ್ಯಕ್ಷನ ಎರಡು ತೋಳು ಎತ್ತಲೂ ಸಾಕಾಗುವುದಿಲ್ಲ. ಆದ್ದರಿಂದ ನನಗೆ ನೂರು ತೋಳಾಗಿರುವ ಸಹ ನಿರ್ವಾಹಕರಾದ ಎಲ್ಲ ಪದಾಧಿಕಾರಿಗಳಿಗೆ, ನನ್ನ ಸಹಸ್ರ ಭುಜಗಳಾಗಿರುವ ಮೂವತ್ತೈದು ಜನ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಐದು ಕೋಟಿ ಕನ್ನಡ ಬಂಧುಭಗಿನಿಯರಿಗೆ ನನ್ನ ಅನಂತಾನಂತ ಪ್ರಣಾಮಗಳು.

## ಪರಿಷತ್ತು ಮತ್ತು ನಾನು

ಕಡೆಯದಾಗಿ, ಜಗಜ್ಜೇತನಾದ ಅಲೆಗ್ಸಾಂಡರ್ ಭಾರತದಿಂದ ತನ್ನ ತಾಯ್ನಾಡಿಗೆ ಹಿಂದಿರುಗುವ ಮೊದಲು ತನ್ನವರಿಗಾಗಿ ಹೀಗೊಂದು ಸಂದೇಶ ನೀಡಿದ : ನನ್ನ ಪ್ರೀತಿಯ ಗ್ರೀಕ್ ಕಡುಗಲಿಗಳೇ, ನಿಮ್ಮೆದುರಿನಲ್ಲಿರುವ ಈ ವ್ಯಕ್ತಿ ಹಿಂದಿನ ಅಲೆಗ್ಸಾಂಡರ್ ಅಲ್ಲ. ಭಾರತಕ್ಕೆ ಕಾಲಿರಿಸಿದ ಮೇಲೆ ನಾನು ಇಲ್ಲಿನ ಅತ್ಯುತ್ಕೃಷ್ಟ ಸಂಸ್ಕೃತಿಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ನಾನಿಲ್ಲಿ ಕಲಿತ ಪಾಠವನ್ನು ನನ್ನ ತವರಿನಲ್ಲಿ ಒಪ್ಪಿಸುತ್ತೇನೆ. ನೀವು ಒಂದು ಸ್ತುತ್ಯ ಕಾರ್ಯ ಮಾಡಬೇಕು. ಅದು ನನ್ನ ಅಂತಿಮ ಸಂಸ್ಕಾರಕ್ಕೆ ಸಂಬಂಧಿಸಿದ್ದು. ನಾನು ನನ್ನೂರಾದ ಮ್ಯಾಸಿಡೋನಿಯಕ್ಕೆ ತಲುಪಲಿ, ಇಲ್ಲವೇ ಹಾದಿ ಮಧ್ಯದಲ್ಲಿ ಮಡಿಯಲಿ ಚಿಂತೆಯಿಲ್ಲ. ಎಲ್ಲಿಯೇ ಸಾಯಲಿ ನನ್ನೆರಡು ಕೈಗಳ ಹೊರತು ಉಳಿದ ದೇಹವನ್ನು ಶವಪೆಟ್ಟಿಗೆಯಲ್ಲಿ ಸಂಪೂರ್ಣ ಮುಚ್ಚಬೇಕು. ತೆರೆದ ಆ ನನ್ನ ಕೈಗಳು ಹೊರಗುಳಿದುದರ ಅರ್ಥ ನಾನು ನನ್ನ ತಾಯ ಗರ್ಭದಿಂದ ಈ ಜಗತ್ತಿಗೆ ಬರಿಗೈಯಲ್ಲಿ ಬಂದೆ, ಈಗ ಬರಿಗೈಯಲ್ಲಿ ಹಿಂತಿರುಗುತ್ತಿದ್ದೇನೆ. ಈ ಪ್ರಪಂಚಕ್ಕೆ ನಾನು ಏನನ್ನೂ ತರಲಿಲ್ಲ, ಈಗ ಏನನ್ನು ಕೊಂಡೊಯ್ಯುತ್ತಿಲ್ಲ. ಈ ಸಾಂಕೇತಿಕ ಸಂದೇಶವನ್ನು ಜಗತ್ತಿಗೆ ಗೊತ್ತುಪಡಿಸುವ ಹೊಣೆ ನಿಮ್ಮದು. ಇಲ್ಲಿ ದುಡಿದಿದ್ದನ್ನು ಇಲ್ಲಿಯೇ ಬಿಟ್ಟು ಹೋಗುತ್ತಿದ್ದೇನೆ. ಎರಡು ಅವ್ಯಕ್ತ ತೀರಗಳ ನಡುವಿನ ನನ್ನ ಜೀವವಾಹಿನಿ ತೀರ್ಥವೋ ಮಲಿನವೋ ನಾನರಿಯೆ. ಅದನ್ನು ಮುಂದಿನ ಇತಿಹಾಸಕಾರನಿಗೆ ಬಿಟ್ಟು ನಾನು ಬಯಲಾಗುತ್ತಿದ್ದೇನೆ.'

ಅಲೆಗ್ಸಾಂಡರಿನಿಂದ ಕಲಿತ ಪಾಠವನ್ನು ನಾನೀಗ ತಮ್ಮ ಮುಂದೆ ಒಪ್ಪಿಸುತ್ತೇನೆ. ಪರಮ ಪಾವನವೂ ಪವಿತ್ರವೂ ಪೂಜ್ಯವೂ ಆದ ಕನ್ನಡ ಕುಲಕೋಟಿಯ ತವರಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂದಿಗೆ ಮೂರು ವರ್ಷಗಳ ಹಿಂದೆ ಅಧ್ಯಕ್ಷನಾಗಿ ಆರಿಸಿಬಂದೆ. ಅವಧಿ ಮುಗಿದ ಇಂದು ಮನೆಗೆ ಹಿಂದಿರುಗುತ್ತಿದ್ದೇನೆ. ಅಂದು ಬಂದದ್ದೂ ಬರಿಗೈಯಲ್ಲಿ, ಇಂದು ಹೋಗುತ್ತಿರುವುದು ಬರಿಗೈಯಲ್ಲಿ. ಬರುವಾಗ ಏನನ್ನೂ ತರಲಿಲ್ಲ, ಹೋಗುವ ಈ ವೇಳೆಯಲ್ಲಿ ಏನನ್ನೂ ಪರಿಷತ್ತಿನಿಂದ ತೆಗೆದುಕೊಂಡು ಹೋಗುತ್ತಿಲ್ಲ. ಈ ಎರಡರ ನಡುವಣ ದಿನದಲ್ಲಿ ನಾಡು ನುಡಿಗಳಿಗಾಗಿ ಮಾತೃಸಂಸ್ಥೆಯಾದ ಕನ್ನಡ ಸಾಹಿತ್ಯ

ಪರಿಷತ್ತಿಗಾಗಿ ತುಸು ಸೇವೆ ಸಲ್ಲಿಸಿದ್ದೇನೆ ಎಂಬ 'ಅಹಂ' ನನ್ನಲ್ಲಿಲ್ಲ. ನನ್ನ ಕರ್ತವ್ಯವನ್ನು ನಿಷ್ಠೆಯಿಂದ, ಪ್ರಾಮಾಣಿಕತನದಿಂದ, ಅನನ್ಯ ಭಾವದಿಂದ ನೆರವೇರಿಸಿದ್ದೇನೆ. ಕನ್ನಡದ ಸೇವೆಯನ್ನು ಕನ್ನಡ ರಾಜರಾಜೇಶ್ವರಿ ಸ್ವರೂಪರಾದ ನಿಮ್ಮೆಲ್ಲರ ಸೇವೆಯನ್ನು ಪೂಜೆ ಎಂದೇ ಭಾವಿಸಿ, ಮನೆ ಮಠ, ಹೆಂಡತಿ, ಮಕ್ಕಳು ಎಲ್ಲರನ್ನೂ ಮರೆತು ನಡೆದುಕೊಂಡಿದ್ದೇನೆ. ನಾನು ಅಧಿಕಾರ ವಹಿಸಿಕೊಂಡಂದಿನಿಂದ ಇಂದಿನವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಒಂದೇ ನನ್ನ ಕಣ್ಣಲ್ಲಿ ಕಣ್ಣಿತ್ತು, ಮನವನ್ನು ತುಂಬಿತ್ತು. ಅದರ ಒಳಿತನ್ನೇ ನಾನು ಹಗಲು ಇರುಳು ಚಿಂತಿಸಿದೆ. ನಾನು ಹೇಳಿಕೊಳ್ಳುವಂತಹ ಕವಿ, ಸಾಹಿತಿ, ವಿಮರ್ಶಕ, ಸಂಶೋಧಕ ಅಲ್ಲದಿರಬಹುದು; ಆದರೆ ನಾನೋರ್ವ ಕನ್ನಡ ಸೇವಕ ಎಂಬುದನ್ನು ಸಾಬೀತುಪಡಿಸಿದ್ದೇನೆ. ಜನ ಮೆಚ್ಚದಿರಬಹುದು, ಆದರೆ ಮನಮೆಚ್ಚುವಂತೆ ನಡೆದುಕೊಂಡಿದ್ದೇನೆ. ನನ್ನ ಪಾಲಿಗೊದಗಿದ ಸಾಧನೆಯ ಸಂವತ್ಸರಗಳಲ್ಲಿ ಬಹು ಮುಖ್ಯವಾದದ್ದು – ಪರಿಷತ್ತಿನ ಸಿಬ್ಬಂದಿ ವರ್ಗವನ್ನು ಸರ್ಕಾರದ ಅನುದಾನ ಸಂಹಿತೆಯಲ್ಲಿ ಸೇರುವಂತೆ ಮಾಡಿದ್ದು. ಪರಿಷತ್ತು ಹುಟ್ಟಿದಂದಿನಿಂದ ಇಂದಿನವರೆಗೆ ಅಲ್ಲಿ ದುಡಿಯುವ ವ್ಯಕ್ತಿಗಳಿಗೆ ಭದ್ರತೆ ಇರಲಿಲ್ಲ. ಅನುದಾನಕ್ಕೊಳಪಡಿಸುವ ಮೂಲಕ, ಅವರ ಮನಸ್ಸಿಗೆ ನೆಮ್ಮದಿ ಉಂಟಾಗುವಂತೆ ಮಾಡಿದ್ದೇನೆ. ಈಗ ನಮ್ಮ ಸಿಬ್ಬಂದಿ ನಿರಾಳವಾಗಿ ಉಸಿರಾಡುತ್ತಿರುವುದು ಆನಂದದ ನೋಟ. ಇಲ್ಲಿನ ಅರವತ್ತೆರಡು ಆತ್ಮಗಳಿಗೆ ಬಾಳ ಭದ್ರತೆ ಒದಗಿಸಿದ್ದು ನನಗೆ ಸಂದ ಪುಣ್ಯವೆಂದು ಭಾವಿಸಿ ಧನ್ಯನಾಗಿದ್ದೇನೆ.

~ * ~

# ತನ್ನ ಕಾವ್ಯಕ್ಕೆ ತಾಂ ಮಹಾಕವಿ ಮಣಿಯುವಂತೆ!

**ಡಾ. ಸಾ.ಶಿ. ಮರುಳಯ್ಯ**

**ಯಾತ್ರೆ ಸಾಗಿತ್ತು!**
**ಅದು ಅಂಥಿಂಥ ಸಾಧಾರಣ ಯಾತ್ರೆಯಾಗಿರಲಿಲ್ಲ!!**
**ಮಹಾಕ್ರಮ ಸಂದರ್ಶನದ ಸುಕೃತ ಯಾತ್ರೆ!!!**

'ನಿಚ್ಚ ಪಚ್ಚೆಯ ಪಸುರ್ ಬನದಿಂದೆಸೆವ ಮಲೆಯ ತೋಳ್ ತೆಕ್ಕೆಯಲ್ಲಿ, ನೀಲಿಯಾಕಾಶವನ್ನೇ ತನ್ನೆದೆಯಲ್ಲಿ ರನ್ನಗನ್ನಡಿಯಂತೆ ತೊಟ್ಟ ವನದೇವತಾ ಹೃದಯ ಲೋಚನಮೆನಲ್ ಮೆರೆವ ವಿಸ್ತಾರದಾ ಸ್ಫಟಿಕ ನಿರ್ಮಲ ಸರೋವರ ಸುಭಗ ತೀರದಲ್ಲಿ ಶೋಭಿಸುವ 'ಕುಶಿಕ' ತನಯನ ನೈಷ್ಠಿಕ ನಿಕೇತನದಿಂದ, ವೈದೇಹ ವಿಷಯದ ವಕ್ಷಸ್ಥಲದಲ್ಲಿ ಸಂಶೋಭಿಸುವ ಮಿಥಿಳೆಯ ರಾಜಾಶ್ರಮಕ್ಕೆ!'

ತೇಜಸ್ವಿ ತರುಣರಿಬ್ಬರನ್ನು ತನ್ನ ಇಕ್ಕೆಲದಲ್ಲೂ ನಡೆಸಿಕೊಂಡು ಬರುತ್ತಿದ್ದಾನೆ ಓರ್ವ ಮಹಾಮುನಿ. ಪ್ರಚಂಡ ತೇಜಸ್ವಿ! ಜಟಾವಲ್ಕಲಧಾರಿಯಾಗಿ, ಕಷಾಯ ವಸ್ತ್ರದುಡೆಯುಟ್ಟು ಪರಿವ ಆ ಮಹಾಪುರುಷ ಶೋಭಿಸುತ್ತಿದ್ದಾನೆ ಜಂಗಮಜ್ವಾಲೆಯಂತೆ! ಹರೆಯದ ಹೊಗರು ಹೊರಸೂಸುವಂತಿರುವ ಮುಖ ಮಂಡಲಗಳುಳ್ಳ ಆ ತೇಜಸ್ವೀಕುಮಾರರು, ಆ ಮಹಾಮುನಿಯ ಅನಂತ ಆಶೀರ್ವಾದ ಅನುಗ್ರಹಗಳಿಂದ ಮತ್ತೂ ಪ್ರಜ್ವಲಿಸುತ್ತಿದ್ದಾರೆ. ಇವರನ್ನು ದರ್ಶಿಸಿದ ಕವಿಹೃದಯ 'ಚಂದ್ರ ಸೂರ್ಯರ್ವೆರಸಿ ಗಗನಮಿರ್ಪಂತೆ' ಎಂದು ನುಡಿಯುತ್ತದೆ. ನಿಜಕ್ಕೂ ಆ ಮುನಿ ವ್ಯೋಮಸದೃಶನೇ; ಆ ಬಾಲರೀರ್ವರೂ ಸೂರ್ಯ ಚಂದ್ರ ಸಮಾನರೇ!

ವಿಶ್ವಾಮಿತ್ರ ಮಹಾಮುನಿಯ ಕಕ್ಷ ಸಂಪುಟಗಳಲ್ಲಿ ಶೋಭಿಸುತ್ತಿದ್ದ ರಾಮ ಲಕ್ಷಣರದ್ದೇ ಆ ಮಾಹಾಯಾತ್ರೆ. ಅದು ಸಾಗುತ್ತಿದ್ದುದು ನಟ್ಟಿರುಳಿನಲ್ಲಿ, 'ಅಟವಿಯ ಕುಟಿಲ ಪಥದಲ್ಲಿ.' ಆಗ 'ತಾರಾಗಣಮೆ ತೋರ್ಬೆರಳ್' ಅವರಿಗೆ. ಹಾದಿಯ ಬೇಸರವನ್ನು ನೀಗಲೆಂದೋ ಏನೋ ಒಂದು ಕಥೆಯೂ ಅವರ ಜೊತೆಯಲ್ಲಿ ಸಾಗಿಬರುತ್ತಿತ್ತು. ಹೇಳುತ್ತಿದ್ದವನು ಆ ಮುನಿಪುಂಗವ.

ಹೇಳುತ್ತಿದ್ದುದು, 'ಜನಕ ರಾಜಗೆ ದಿವಿಜ ಕೃಪೆಯಿಂದ ಲಭಿಸಿರ್ದ ಹರಧನುಸ್ಸಿನ ಕಥಾಚರಿತ' ಕೇಳಬೇಕೆ!

ಅದರಲ್ಲೂ ಕವಿಯಾದ ಋಷಿಯ ರಸನೆಯಿಂದ! ರಸಭರಿತ ಕಥಾ ನಿವೇದನೆಯಲ್ಲಿ ಅದು ಸುಪರಿಚಿತ ನೆಲವಾದರೂ ಅಂದು ಹಾದಿ ತಪ್ಪಬೇಕೇ ಕುಶಿಕಸೂನುವಿಗೆ! 'ಗೌತಮನ ವಾಙ್ಮಹಿಮೆಯೋ ಅಥವಾ ಅಹಲ್ಯೆಯ ತಪೋಬಲವೋ ಅಂತೂ ಅಂದು, 'ಕಣಿವೆಗಳನಿಳಿದು ಅದ್ರಿಗಳನಡರಿ' ಬರುವಾಗ 'ಹಠಾತ್ತನೆ ಭ್ರಷ್ಟಮಾದುದು ಪರಿಚಿತಾಧ್ವಂ!' ಏನು ಮಾಡುವುದು?

'ಸಾಹಸದ ಕಣ್ಣೂಹೆ'ಯಿಂದಲೇ ಮುಂದೆ ಸಾಗಿದರು ಮಿಥಿಳೆಯ ದಿಸೆವಿಡಿದು.

'ಪೂರೈಸಿದುದು ರಾತ್ರಿ, ಕಣ್ದೆರೆದಳುಷೆ ಮೂಡಣಂಬರದಿ' ಆಗ, 'ಪಾಂಥರ್ಗೆ ಗೋಚರಿಸಿತೊಂದು ಋಷಿವನ ಸದೃಶಕಾನನಂ!'

ಆದರೇನು? ಅಲ್ಲಿ ದುಃಖಗರ್ಭಿತ ಮಹಾ ಮೌನ ಮತ್ತೇರಿ ಮಲಗಿರಬೇಕೆ!

**ಹಾಡದಿವೆ ಹಕ್ಕಿ**
**ನಲಿದಾಡಿವೆ ಮಿಗಂ, ಸಂಚರಿಸದಿದೆ ಗಾಳಿ**
**ತಂಪನೀಯದಿವೆ ಮರಗೋಡಿನೊಳ್ ಮಲರ್.**
**ಚಲಿಸವೆಲೆ ಪುಲ್ಲೆಸಳ್. ಆವ ದುಃಖವೋ, ಅಲ್ಲಿ**
**ಕೊನೆಗಾಣುದಂತಮಂ ದಿನಮುಂ ನಿರೀಕ್ಷಿಪೊಲ್**
**ಮೂಗುವಟ್ಟಿರ್ದ ಬನಮೆಸೆದುದಾ ಪಥಿಕರ್ಗೆ**
**ಬರೆದಂತೆ ನೀರವಂ, ಕೊರೆದಂತೆ ನಿಶ್ಚಲಂ**

ಇಂತಹ ಮೌನದ ಮಹಾ ಸಮಾಧಿಯ ವನ್ಯಪ್ರದೇಶ ಮತ್ತೆ ಬೇರಾರದ್ದೂ ಅಲ್ಲ, ಮಹರ್ಷಿ ಗೌತಮನದು. ಆದರೂ ಅಲ್ಲಿ ನಲಿವಿಲ್ಲ, ಚೆಲುವಿಲ್ಲ, ಜೀವಕಳೆಯಿಲ್ಲ, ವಟುವರರ ಕುಚೇಷ್ಟೆ ಕಾಣುತ್ತಿಲ್ಲ. ತಪೋಧರನ ಸಂಚಾರದಿಂಚರ ಕೇಳಿಸುತ್ತಿಲ್ಲ. ಆಧ್ಯಾತ್ಮ ಭೂಮಿಕೆಯಲ್ಲಿ ಅನವರತವೂ ಪುಟಿಯುತ್ತಿದ್ದ ವೇದಘೋಷವಾಗಲೀ. ಹೋಮಧೂಮದ ಸುಗಂಧವಾಗಲೀ, ಅಲ್ಲಿ ಸುಳಿದಂತೆ ತೋರುತ್ತಿಲ್ಲ. ಏಕೆಂದರೆ ಅಲ್ಲಿಯ ಚೇತನ ಸತ್ತು ಶತಮಾನಗಳು ಕಳೆದಿವೆ! ಗೌತಮ ಮಹಾಮುನಿಯ ಪತ್ನಿ ಅಹಲ್ಯೆ ತನ್ನ ಅಲ್ಪ ಅಪರಾಧಕ್ಕಾಗಿ ಘೋರತಮ ಶಿಕ್ಷೆಯನ್ನು ಅನುಭವಿಸುತ್ತಿದ್ದಾಳೆ ಶತ ಶತಮಾನಗಳಂದಿನಿಂದ. ಗೌತಮನ ಶಾಪದಿಂದ ತಾನೊಂದು ಜಡವಾಗಿ.

**ನಿಷ್ಠುರ ಶಿಲಾತಪಸ್ವಿನಿಯಾಗಿ, ಕನಿಕರದ**
**ಕಣ್ಗೆ ಬಾಹಿರೆಯಾಗಿ, ಜಗದ ನಿರ್ದಾಕ್ಷಿಣ್ಯ**
**ವಿಸ್ಮೃತಿಗೆ ತುತ್ತಾಗಿ....**

ಬಿದ್ದಿದ್ದಾಳೆ ಅದೆಷ್ಟೋ ಯುಗ ಯುಗಗಳಿಂದ!

ಆ ಶಿಲಾ ತಪಸ್ವಿನಿಯ ಸುಕ್ಷೇತ್ರವನ್ನು ಪ್ರವೇಶಿಸಿದುದೆ ತಡ, ಅನಿಮಿತ್ತ ಶೋಕದಿಂದ ರಾಮಾತ್ಮ ಮಮ್ಮಲ ಮರಗುತ್ತದೆ. ಅವನೆದೆ ಕರಗಿ ಕಣ್ಣೀರಾಗಿ ಹರಿಯುತ್ತದೆ. ಆಗ,

**ತಾಯಿ ಕೌಸಲ್ಯೆ**
**ಗೋಳಿಡುತೆ ತನ್ನ ಪೆಸರಂ ಪಿಡಿದು ಕರೆವವೊಲ್**
**ಕಲ್ಗಳಿಂ ಪುಲ್ಗಳಿಂ ಮರ ಮರದ ಹೃದಯದಿಂ**
**ಮೂಡಿ ಕೇಳ್ದುದು ಸಂಕಟಂ ರಾಮನೊರ್ವಂಗೆ.**

ಎಷ್ಟೇ ಆಗಲಿ ಅವಳು ಗೌತಮ ಮಹಾಮುನಿಯ ಧರ್ಮಪತ್ನಿ. ಅವಳ ಅವ್ಯಕ್ತ ಕರೆ ಕರುಳ ಕೂಗಾಗಿ ಪರಿಣಮಿಸಿರುವುದರಲ್ಲೇನೂ ಆಶ್ಚರ್ಯವಿಲ್ಲ.

ಈ ಆಗುಂತಕರ ಆಗಮನ ಮಾತ್ರದಿಂದಲೇ ಆ 'ಸ್ತಬ್ಧ ಗಿರಿವನ ಧರಣಿ ಸಪ್ರಾಣಿಸಿತು ಕೂಡೆ ಚೈತ್ರ ಲಕ್ಷ್ಮೀ ಸ್ಪರ್ಶವಾದಂತೆ!'

ಆಗಿನ ಅದ್ಭುತಮೋದವನ್ನು ಏನೆಂದು ಹೇಳಬೇಕು. ಎಷ್ಟೆಂದು ಬಣ್ಣಿಸಬೇಕು!

ಇದ್ದಕ್ಕಿದ್ದಂತೆಯೇ ಶ್ರೀ ರಾಮಚಂದ್ರನ ಮೈ 'ಚಿನ್ಮಯಾವೇಶದಿಂದ' ಸ್ಪಂದಿಸುತ್ತದೆ. ಅವನ ವದನ ಸದನದಿಂದ ಹೊರಸೂಸುತ್ತದೆ ಒಂದು ದಿವ್ಯ ತೇಜೋ ರಾಶಿ!

'ಬಾಹ್ಯ ಸಂಜ್ಞಾ ಶೂನ್ಯನೆಂಬಂತೆ' ನರ್ತಿಸಲಿಕ್ಕಾರಂಭಿಸುತ್ತಾನೆ! ವನರಾಣಿಯೂ ಅವನೊಡನೆ ನಲಿದು ನರ್ತಿಸುತ್ತಾಳೆ. ಎಲ್ಲೆಲ್ಲೂ ಚೇತನದ ಚಿಲುಮೆ ಪುಟಿಯುತ್ತದೆ. ಆಗ ಅಲ್ಲೇ 'ವನಭಿತ್ತಿಗೆದುರಾಗಿ, ಸುತ್ತಹೊರಲೆಯಪುತ್ತ ತಬ್ಬಿರ್ದ ಕಲ್ಪಂಡೆಯೊಂದು' ಗೋಚರಿಸುತ್ತದೆ. ನಾಟ್ಯಲೋಲನಾದ ರಾಮ ಆ ಬಂಡೆಯನ್ನೇರುತ್ತಾನೆ.

**ಒಯ್ಯನೆ ಚರಣ ಚುಂಬನಕೆ**
**ಕಲ್ಲೆ ತಾಂ ಬೆಣ್ಣೆಯಾಯ್ತೆನ ಕಂಪಿಸಿತು ಬಂಡೆ,**

..........................................................................

**ಬೆಂಗದಿರನುರಿಗೆ ಕರ್ಪೂರ ಶಿಲೆಯಂತೆ ವೋಲ್**
**ದ್ರವಿಸಿತಾ ಕರ್ಬಂಡೆ! ದಿವ್ಯ ಮಾಯಾ ಶಿಲ್ಪಿ**
**ಕಲ್ಪನಾ ದೇವಿಯಂ ಕಲ್ಲ ಸೆರೆಯಿಂ ಬಿಡಿಸಿ**
**ಕೃತಿಸಿದನೆನಲ್, ರಘು ತನೂಜನಡಿದಾವರೆಗೆ**
**ಹಣೆಮಣಿದು ನಿಂದುದೊರ್ವ ತಪ್ಪಸ್ವಿನೀ ವಿಗ್ರಹಂ**
**ಪಾಲ್‌ಬಿಳಿಯ ನಾರುಡೆಯ, ಕರ್ಪಿರುಳ ಸೋರ್ಮುಡಿಯ,**
**ಪೊಳೆವ ನೋಂಪಿಯ ಮೊಗದ ಮಂಜು ಮಾಂಗಲ್ಯದಿಂ.**
**ಪೆತ್ತ ತಾಯಂ ಮತ್ತೆ ತಾನೆ ಪಡೆದಂತಾಗೆ**
**ನಮಿಸಿದನೊ ರಘುಜನುಂ ಗೌತಮಸತಿಯ ಪದಕೆ,**
**ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ!**

ಶ್ರೀ ಕುವೆಂಪು ಅವರ ಕಾವ್ಯ ಮಂದಿರದ ದ್ವಾರದಲ್ಲೇ ದರ್ಶಿಸುತ್ತೇವೆ, ಈ ದಿವ್ಯ ದರ್ಶನದ ಮಹಾ ಜ್ಯೋತಿಯನ್ನು.

## ೨

ಸಮಸ್ಯೆ ಉದ್ಭವಿಸುವುದೇ ಇಲ್ಲಿ.

ಹೌದು, ಅಹಲ್ಯೆ ರಘೂದ್ವಹನ ಅಡಿದಾವರೆಗಳಿಗೆ ಹಣೆ ಮಣಿಯುವುದರಲ್ಲೆ ಅರ್ಥವಿದೆ; ಆದರೆ ರಾಮನು ಅವಳಿಗೆ ಮಣಿಯುವುದರಲ್ಲೇನು ಅರ್ಥ?

ಅಹಲ್ಯೆ ಶ್ರೀರಾಮಚಂದ್ರನಿಗೆ ಮಣಿದದ್ದು ಸಹಜವೇ. ಏಕೆಂದರೆ ಶತ ಶತಮಾನಗಳಿಂದಲೂ ಶಿಲೆಯಾಗಿ ಬಿದ್ದಿದ್ದ ತನ್ನ ಮೃಣ್ಮಯದ ಬದುಕಿಗೆ ಚಿನ್ಮಯದ ಚೇತನಾಂಶವನ್ನಿತ್ತಿದ್ದಾನೆ ಆ ಮಹದ್ವಿಭೂತಿ. ತನ್ನ ಶಾಪ ವಿಮೋಚನೆಗೈದುದಷ್ಟೇ ಅಲ್ಲ, ತನಗೆ ಶಾಪವಿತ್ತವನ ಸಂದರ್ಶನವನ್ನೂ ಸಹ ಕರುಣಿಸಿದ್ದಾನೆ; ಅದೂ ವಿಶ್ವಾಸಮಿತ್ರ ಮುನಿವರನ ದಿವ್ಯಸಾನಿಧ್ಯದಲ್ಲಿ. ಅದಕ್ಕಾಗಿ ಅವಳು ಎಷ್ಟು ಕೃತಜ್ಞಳಾಗಿದ್ದರೂ ಸಾಲದು. ಆದರೆ–

ತನ್ನ ಪಾದದ ಸ್ಪರ್ಶಮಾತ್ರದಿಂದಲೇ ಬಹು ದೀರ್ಘ ಕಾಲದ ಜಡತ್ವವನ್ನು ನೀಗಿಕೊಂಡು ಸಚೇತನೆಯಾದವಳಿಗೆ, ಅದರಲ್ಲೂ ಸ್ತ್ರೀಗೆ, ಶ್ರೀರಾಮನಂತಹ ಪುರುಷಪುಂಗವನು ಮಣಿಯುವುದೆಂದರೇನು?

ಅಹಲ್ಯೆ ತನ್ನ ತಾಯಿ ಕೌಸಲ್ಯೆಯಷ್ಟು ವಯಸ್ಕಳು, ತನಗೆ ಹಿರಿಯಳು ಎಂಬ ತಾರ್ಕಿಕ ಅಭಿಪ್ರಾಯದಿಂದಲೇ? ಅಥವಾ ಗೌತಮ ಮಹಾಮುನಿಗಳ ಧರ್ಮ ಪತ್ನಿ ಎಂಬ ಪೂಜ್ಯಭಾವನೆಯಿಂದಲೇ? ಅಥವಾ

ಕೌಶಿಕ ಮಹರ್ಷಿಯ ಆದೇಶದಿಂದಲೇ?

ಇರಬಹುದು!

ಆದರೆ, ಇವೆಲ್ಲಕ್ಕೂ ಮಿಗಿಲಾದ ಒಂದಂಶ ಇಲ್ಲಿ ಅಡಗಿದೆ.

ಅಯೋಧ್ಯಾಧಿಪತಿ ದಶರಥನ ಸುಕುಮಾರ ರಾಮ ಶ್ರೀರಾಮನಾದದ್ದು ಕೇವಲ ಒಂದು ದಿನದಲ್ಲಲ್ಲ; ಅಥವಾ ಒಬ್ಬ ವ್ಯಕ್ತಿಯಿಂದಲೂ ಅಲ್ಲ. ಅನಂತ ಕಾಲದ ವ್ಯಾಪ್ತಿ ಇದೆ ಅದಕ್ಕೆ, ಅಸಂಖ್ಯಾತ ಆತ್ಮಗಳ ಹಂಬಲ ತುಂಬಿದೆ ಅದರಲ್ಲಿ. ಅವೆಷ್ಟೋ ಚೇತನಗಳ ಬಹುದಿನದ ಕನಸೇ ಕೂಸಾಗಿದೆ ಶ್ರೀರಾಮ ರೂಪದಲ್ಲಿ!* ಅಲ್ಲದೆ ರಾಮ ತನಗೆ ತಾನೇ

---

* ಕಲ್ಪಾಂತರಗಳ ಸಂಕ್ಷಿಪ್ತಾಕೃತಿ,
ಜಗಶಿಲ್ಪಿಯ ಯುಗ ಯುಗ ಕರ್ಮದ ಕೃತಿ,
ಶತಮಾನಂಗಳ ಸಂಗ್ರಹ ಸಂಸ್ಕೃತಿ

– ಕೂಸಿನ ಕನಸು (ಕೋಗಿಲೆ ಮತ್ತು ಸೋವಿಯಟ್ ರಷ್ಯಾ – ಕುವೆಂಪು, ಪು.೪೩.)

ಆದ ಸ್ವಯಂಭುವೂ ಅಲ್ಲ. ಅಥವಾ ದಶರಥ ಕೌಸಲ್ಯೆಯರ ಪ್ರೇಮದಾಂಪತ್ಯದ ಫಲ ಎಂದರೆ ಅದು ನಿಮಿತ್ತ ಮಾತ್ರ. ಹಾಗೆ ತಮ್ಮ ಪ್ರೇಮದಿಂದಲೋ, ಕಾಮದಿಂದಲೋ ಅವರಿಗೆ ಮಗು ಹುಟ್ಟುವುದಾಗಿದ್ದರೆ, ಅವರ ವಿವಾಹದ ತರುಣದಲ್ಲೋ ಅಥವಾ ಅನಂತರದಲ್ಲೋ ಹುಟ್ಟಬೇಕಾಗಿತ್ತು. ಆದರೆ ಅದೆಷ್ಟೋ ವರ್ಷಗಳು ದಶರಥ ಪುತ್ರಹೀನನಾಗಿ ಬಾಳಿದ್ದಾನೆ. ಅವನಿಗೀಗ ಮುಪ್ಪಡರಿದೆ. ಪತ್ನಿಯರು ಮೂವರಿದ್ದರೂ ಸಂತಾನವೃದ್ಧಿಗಾಗಿ ಓರ್ವಳೂ ಒಂದು ಶಿಶುವಡೆದಿಲ್ಲ. ಸಾಲದ್ದಕ್ಕೆ, 'ಮಕ್ಕಳಂ ಪಡೆದ ಪಕ್ಕಿಯ ಸಿರಿತನ ಚಕ್ರವರ್ತಿಗೆ ತನ್ನ ಬಡತನವನಾಡಿ ಮೂದಲಿಸಿದೆ!' ಹೀಗಿರುವ ದರಿದ್ರ ಸಾರ್ವಭೌಮ ಸಂತಾನದ ಸಿರಿಯ ಕನಸನ್ನಾದರೂ ಕಾಣುವುದು ಹೇಗೆ?

ಆದರೂ ಅವನ ಈ ದಾರಿದ್ರ್ಯ ನಿವಾರಣೆಗಾಗಿ ಅನೇಕ ಋಷಿಶಕ್ತಿಗಳು ಮೇಳಗೊಳ್ಳುತ್ತವೆ.

ಋಷಿ ಶ್ರೇಷ್ಠರಾದ ವಸಿಷ್ಠ, ವಾಮದೇವ, ಜಾಬಾಲಿ, ಋಷ್ಯಶೃಂಗಾದಿ ಮಹರ್ಷಿ, ದೇವರ್ಷಿ, ಬ್ರಹ್ಮರ್ಷಿಗಳ ಒಲುಮೆ, ಪುತ್ರ ಕಾಮೇಷ್ಟಿ ಎಂಬ ಮಹಾಧ್ವರದ ರಚನೆ, ಮಂತ್ರಪಾಲ, ಸುಮಂತ್ರಾದಿ ಸಚಿವರ ಹಾಗೂ ಕೋಸಲ ಅಯೋಧ್ಯೆಗಳ ಜನತಾ ಜನಾರ್ದನ ಅಭೀಪ್ಸೆ, ಋತಿಜರ ಮಂತ್ರ ಪಠಣಾರೂಪದ ಪ್ರಾರ್ಥನೆ, ಇದರಿಂದ ದಿವೌಕಸರ ತೃಪ್ತಿ, ದಾನಾದಿಗಳಿಂದ ಭೂತತೃಪ್ತಿ ಇವೆಲ್ಲವುಗಳ ಸತ್ಪರಿಣಾಮ, ಹಾಗೂ ಋತುಚಿತ್ತಿನ ಪೂರ್ಣಾನುಗ್ರಹ ಇವೆಲ್ಲವೂ ಸೇರಿವೆ. ದಶರಥನ ಮೇಲೆ ದಯೆ ತೋರಿ ಕರುಣಿಸಿದೆ ಕಾರಣಿಕ ಶಿಶುವನ್ನು!

ಹೀಗೆ ಶ್ರೀರಾಮ ಜನನದ ಹಿನ್ನೆಲೆಯಲ್ಲಿ ಈ ಅನಂತ ಶಕ್ತಿಗಳ ಅದ್ಭುತ ಕೈವಾಡವಿದೆ. ಅಲ್ಲದೆ, ಸೂಕ್ಷ್ಮಗ್ರಾಹಿಗೆ ಇದರಲ್ಲಿ ಗೌತಮ ಮತ್ತು ಅಹಲ್ಯೆಯರ ಘೋರತಮ ತಪಸ್ಸೂ ಬೆರೆತಿರುವುದು ಕಾಣಿಸದಿರದು.

ಸೀತೆಯೊಡನೆ ಶ್ರೀರಾಮನೂ ಅಗ್ನಿಪರೀಕ್ಷೆಗೊಳಗಾದಂತೆ, ಪತ್ನಿಯ ಪಾಪಕೃತ್ಯಕ್ಕಾಗಿ ಶಾಪ ಕೊಟ್ಟ ಗೌತಮ ತಾನೂ ಶಿಕ್ಷೆಯನ್ನನುಭವಿಸಿದ್ದಾನೆ. ತನ್ನಿಂದ ದೂರಳಾದ ಅಹಲ್ಯೆ ಹೇಗೆ ಶಿಲಾ ತಪಸ್ವಿಯಾದಳೋ, ಈತನೂ ಸಹ ಅಂಥದೇ ತಪ್ಸನ್ನಾಚರಿಸಿದ್ದಾನೆ ಅಷ್ಟೊ ಕಾಲ. ಇದೆಲ್ಲಕ್ಕೂ ಪೂರ್ವಭಾವಿಯಾಗಿ ಅಂದು ಶಾಪವಿತ್ತ ಗೌತಮ ಪ್ರಜ್ಞೆಯೇ ವಿಶಾಪವನ್ನು ಸೂಚಿಸುವಾಗ ತನ್ನ ಪೂರ್ಣ ದೃಷ್ಟಿಯಿಂದ ದರ್ಶಿಸಿದೆ ಭವಿತ್ಯದ ಭವ್ಯಗರ್ಭದಲ್ಲಿ ಆವಿರ್ಭವಿಸಲಿರುವ ಮಹಾ ಆತ್ಮವನ್ನು! ಅದಕ್ಕಾಗಿಯೇ ಆ ಮಹಾಮುನಿಯಾತ್ಮ ಅವನ ಅವತಾರವನ್ನೇ ಹಾರೈಸಿ ನುಡಿದಿದ್ದರೂ ಆಶ್ಚರ್ಯವೇನಿಲ್ಲ. ಆ ರೀತಿ ಶಾಪವನ್ನು ಕೊಡುವ, ವಿಮೋಚನೆಯನ್ನು ಸೂಚಿಸುವ ಅರ್ಹತೆ ದಿವ್ಯರ್ಷಿ ಗೌತಮನ ಪೂರ್ಣದೃಷ್ಟಿಗೆ ಮಾತ್ರ ಮೀಸಲು.

ಆದರೆ ಅಹಲ್ಯೆ! ಪಾಪ! ಅವಳಿಗೆಲ್ಲಿ ಬರಬೇಕು ಅಂಥ ಶಕ್ತಿ ಸಾಮರ್ಥ್ಯ?

ಅಹಲ್ಯೆ ಆಕಸ್ಮಾತ್ ಎಡವಿದಳು. ಎಡವಿ ಬಹುಬೇಗ ಎಚ್ಚೆತ್ತುಕೊಂಡಳು. ಆದರೆ ಜಾರಿ ಬಹುದೂರದ ಪ್ರಪಾತಕ್ಕೆ ಬೀಳಲಿಲ್ಲ ಯಶೋಧರನ ಪತ್ನಿ ಅಮೃತಮತಿಯಂತೆ ಅಥವಾ ಅಗಮಮ್ನಾನನ ಪ್ರೇಯಸಿ ಕ್ಲೈಟಮ್ನೆಸ್ಟ್ರಳಂತೆ ಸೇಡು ತೀರಿಸಿಕೊಳ್ಳುವುದಕ್ಕಾಗಿಯೇ ಜನ್ಮ ಜನ್ಮಕ್ಕೂ ಪ್ರೇತವಾಗಿ ಅಲೆಯಲ್ಲಿಲ್ಲ.[೧] ಮಾಡಿದ ತಪ್ಪನ್ನೇ ಸರಿಯೆಂದು ಸಾಧಿಸಿ ಅನಾಹುತಕ್ಕೆ ಎಲ್ಲೂ ಅಡಿಗಲ್ಲು ಹಾಕಲಿಲ್ಲ. ತನ್ನ ತಪ್ಪಿಗೆ ತಕ್ಕ ಶಿಕ್ಷೆಯನ್ನು ಮೌನದಿಂದ ಅನುಭವಿಸಿದಳು. ಅದೂ ಶಿಲಾಮೌನಿಯಾಗಿ, ಶಿಲಾತಪಸ್ವಿಯಾಗಿ. ತನ್ನ ಪಾಪ ಪ್ರಕ್ಷಾಲನಗೊಂಡ ಪಶ್ಚಾತ್ತಾಪದ ಪ್ರವಾಹದಲ್ಲಿ. ಅಂದರೆ ಪಶ್ಚಾತ್ತಾಪಕ್ಕಾಗಿಯೆ ಅವಳಿಗೆ ಪರಿಹಾರ ದೊರಕಿ ವಿಮೋಚನೆಯಾಗಬೇಕೆಂಬ ವಾದವಲ್ಲ. ಅವಳು ಪಶ್ಚಾತ್ತಾಪದ ತಾಪದಲ್ಲಿ ಬೆಂದು, ನೊಂದು ಪುಟಕ್ಕಿಟ್ಟ ಚಿನ್ನವಾಗಿದ್ದಾಳೆ. ಹೇಗೆ ಭಾರ್ಗವನ 'ಕೊಡಲಿ ಕಡಿತದ ಜೊತೆಗೆ'[೨] ರೇಣುಕೆಯ ದೋಷ ಹೊರಟುಹೋಯಿತೊ, ಹಾಗೆಯೆ ಅಹಲ್ಯೆಯ ಅನಂತಕಾಲದ ಶಿಕ್ಷೆಯಲ್ಲಿ ಅವಳ ದೋಷ ಅಳಿದುಹೋಗಿದೆ. ಮುಂದೆ ಅವಳು ಅರ್ಜಿಸಿದ ಪುಣ್ಯವೇ ಅವಳಿಗೆ ಪತಿವ್ರತಾ ಪಟ್ಟವನ್ನು ಕೊಟ್ಟು ಪಂಚ ಮಹಾ ಪತಿವ್ರತೆಯರಲ್ಲಿ ಅಗ್ರಸ್ಥಾನವನ್ನು ಮೀಸಲಿಟ್ಟಿದೆ.[೩]

ಅಹಲ್ಯೆ ತಾನು ಶಿಲೆಯ ಸೆರೆಯಲ್ಲಿ ಸಿಕ್ಕಿ ಅನುಭವಿಸಿದ್ದು ಶಿಕ್ಷೆಯೇನಲ್ಲ. ಅವಳೂ ಹಾಗೆಂದು ಭಾವಿಸಲಿಲ್ಲ. ಆ ಅನಿರ್ದಿಷ್ಟ ಕಾಲವೂ ಆಚರಿಸಿದ್ದು ಕಠೋರತಮ ತಪಸ್ಸು. ತಾನು ಸೆರೆಯಾಳಾಗಿರಲಿಲ್ಲ; ಶಿಲಾತಪಸ್ವಿನಿಯಾಗಿದ್ದಳು! ಮಹಾ ಪುರುಷನೊಬ್ಬನ ಅವತಾರವನ್ನೇ ಸದಾ ಹಂಬಲಿಸಿ ಬೇಡುತ್ತಿದ್ದಳು ತನ್ನ ಶಿಲಾಮೌನ ತಪಸ್ಸಮಾಧಿಯಲ್ಲಿ. ಅದು ಕೇವಲ ತನ್ನೊಬ್ಬಳ ಶಾಪವಿಮೋಚನೆಗಾಗಿ ಅಲ್ಲ ಅಥವಾ ತನ್ನ ಆತ್ಮ ಕಲ್ಯಾಣಕ್ಕಾಗಿಯೇ ಅಲ್ಲ, ಜಗತ್ಕಲ್ಯಾಣಕ್ಕಾಗಿ. ಅದರ ಸಲುವಾಗಿ ಅನವರತವೂ ಘೋರ ತಪಸ್ಸನ್ನಾಚರಿಸಿದ್ದಾಳೆ.

ಹೀಗೆ ಅಹಲ್ಯೆಯ ಅಂತರಂಗದ ಹರಕೆ ಗೌತಮ ಮುನಿಯ ಹಾರೈಕೆ ಇವುಗಳನ್ನು ಪೂರೈಸಬೇಕಾದದ್ದು ಭಗವಂತನ ಇಚ್ಛೆ. ಅಲ್ಲದೆ ಆ ಪರಮಾತ್ಮನಿಗೂ ಆಗೊಂದು ಅವಶ್ಯಕತೆ ಇತ್ತೆಂದು ತೋರುತ್ತದೆ. ಜಗದ್ರಂಗದಲ್ಲಿ ವಿಚಿತ್ರ ಗತಿಯಲ್ಲಿ ನರ್ತನ ಗೈಯುತ್ತಿರುವ ದೈತ್ಯತೆಯನ್ನು ಧ್ವಂಸಮಾಡಿ ತನ್ನನ್ನು ತಾನು ಮೆರೆಯಬೇಕೆಂಬ ಇಚ್ಛೆ ಇತ್ತೆಂದು ಕಾಣುತ್ತದೆ. ಆದ್ದರಿಂದಲೇ ಯಜ್ಞಕುಂಡದಿಂದ ಮೇಲೆದ್ದು ಬಂದ ದಿವ್ಯ ತೇಜೋಮೂರ್ತಿ ಹೇಗೆ ನುಡಿಯುತ್ತದೆ...

---

೧. ಈಸ್ಕೈಲಸ್ಸನ್ ಮುಕ್ಕೂಟ (Trilogy) ನಾಟಕ 'ಒರಿಸ್ಟಿಯ' ನೋಡಿ. (ಅಗಮಮ್ನಾನ್, ಚಿಯೊಫರಿ ಮತ್ತು ಯೂಮಿನೈಡಸ್ ನಾಟಕಗಳು.)

೨. ಗಂಡುಗೊಡಲಿ–ಪು.೧೯, ಜಿ.ಪಿ. ರಾಜರತ್ನಂ.

೩. ಅಹಲ್ಯಾ ದ್ರೌಪದಿ ತಾರಾ ಸೀತಾ ಮಂಡೋದರೀ ತಥಾ ।
ಪಂಚಕನ್ಯಾತ್ ಸ್ಮರೇನ್ನಿತ್ಯಂ ಮಹಾಪಾತಕ ನಾಶನಮ್॥

**....'ಸೃಷ್ಟಿಯ ಶಕ್ತಿ ದೂತನೆಂ, ರಾಜೇಂದ್ರ,**
**ಋತುಚಿನ್ಮಯೀ ಲೀಲೆಗಾಂ ಕವಿಕ್ರತು ಕಣಾ.**
**ಕೊಳ್ಳಿದಂ, ಕಾಮಧೇನುವಿನ ಕೊಡಗೆಚ್ಚಲಂ**
**ಪಾಲ್ಗರೆದು ಗೆಯ್ದ ಪಾಯಸಮಿದಂ. ಮರುಭೂಮಿ**
**ನಗುವ ನಂದನವಪ್ಪುದಿದನೀಂಟೆಂ. ಮೆಚ್ಚಿತಯ್**
**ನಿನ್ನೀ ವ್ರತಕೆ ಋತಂ. ಪಸುಗೆ ನೀಡಂಶಂಗಳಂ**
**ಸತಿಯರ್ಗೆ, ಗೆಲ್ವುದಾ ವಿಧಿ ಲೀಲೆಯುಂ'....**

ಜೊತೆಗೆ ಕೋಟಿ ಕೋಟಿ ಹೃದಯಗಳ ಬಹು ದಿನಗಳ ಬೇಡಿಕೆಯೂ ಸೇರಿತು.[೪] ಈ ಎಲ್ಲ ವ್ಯಕ್ತಿಗಳ ಶಕ್ತಿಗಳ ಬೇಡಿಕೆ, ಆಕಾಂಕ್ಷೆ ಹಾಗೂ ಋತುಚಿತ್ತಿನ ಸ್ವಯೇಚ್ಛೆ ಇವುಗಳ ಸುಂದರ ಸಂಯೋಗವೇ ಶ್ರೀ ರಾಮಾವತಾರ. ಅಂದಮೇಲೆ ರಾಮನದೆಷ್ಟು ಕೃತಜ್ಞನಾಗಿರಬೇಕು ಈ ಎಲ್ಲ ಶಕ್ತಿಗಳಿಗೆ. ಅಂತೆಯೇ ಗೌತಮ ಮತ್ತು ಅಹಲ್ಯೆಯರ ಬಗ್ಗೆ ಅವನ ಕೃತಜ್ಞತೆ ಎಂದಿಗೂ ಕಡಿಮೆಯಾಗಬಾರದು. ಏಕೆಂದರೆ ಅಹಲ್ಯಾಮಾತೆ ಇವನಿಗಾಗಿ ಇವನ ಆಗಮನಕ್ಕಾಗಿ, ಇವನ ಅಭ್ಯುದಯಕ್ಕಾಗಿ ಅನವರತವೂ ನೋಂಪಿಯನ್ನು ಕೈಗೊಂಡಿದ್ದಾಳೆ. ತನ್ನ ತಪಸ್ಸಿನ ಸಮಸ್ತ ಪುಣ್ಯವನ್ನೂ ಅವನಿಗಾಗಿ ಮೀಸಲಿರಿಸಿ ದುಡಿದಿದ್ದಾಳೆ. ಹೆತ್ತ ತಾಯಿಗಿಂತಲೂ ಮಿಗಿಲಾಗಿ ನೋವುಂಡಿದ್ದಾರೆ. ಅವ್ಯಕ್ತ ರೂಪದಲ್ಲಿ ಅವನನ್ನು ಆಡಿಸಿ, ಹಾಲೂಡಿ ಬೆಳೆಸಿದ್ದಾಳೆ. ಅವನ ಅಮೋಘ ತಪಸ್ಸೇ ಇಂದು ಅವನಿಗೆ ಶ್ರೀ ರಾಮತ್ವವನ್ನು ದಯಪಾಲಿಸಿದೆ. ತನ್ನ ಪಾದಸ್ಪರ್ಶ ಮಾತ್ರದಿಂದಲೇ ಪಾವನತೆಯನ್ನು ದೊರಕಿಸಿಕೊಡುವ ಯೋಗ್ಯತೆಯನ್ನೂ ಒದಗಿಸಿಕೊಟ್ಟಿದೆ. ಇದಕ್ಕೆ ಹಿನ್ನೆಲೆಯಾಗಿ ನಿಂತಿದೆ ಗೌತಮ ಮಹಾಮುನಿಯ ಶಾಪರೂಪದ ನಾರದ ಹಸ್ತ. ಆದ್ದರಿಂದಲೇ ರಾಮ ನಮ್ರತೆಯಿಂದ ನಮಿಸಿದ್ದಾನೆ ಗೌತಮ ಸತಿಯ ಪದತಲಕೆ.

**೩**

ಮಹಾಕವಿಗೂ ಮಹಾಕಾವ್ಯಕ್ಕೂ ಇರುವುದು ಇಂಥದೇ ಒಂದು ಸಂಬಂಧ.

ಕಾವ್ಯವೊಂದನ್ನು ನೋಡಿ ನಾವು ಅನ್ನುತ್ತೇವೆ, ಇದು ಇಂಥವನ ಕೃತಿ. ಇದು ಇವನಿಂದ ಹೀಗೆ ರಚಿತವಾಗಿದೆ ಎಂದು. ಆದರೆ ನಮ್ಮ ಜೀವಿತದಲ್ಲಿ ಬಾಳಿ ಬದುಕಿ ಕೃತಿ

---

೪. ಜನಮನಮೆ
ಯುಗಶಕ್ತಿಯಲ್ತೆ? ತಾನಾ ಶಕ್ತಿ ಮೂರ್ತಿ ಗೂಳೆ
ನಾಮದನ್ನವತಾರಮೆಂದು ಪೂಜಿಪೆವಲ್ತೆ ಪೇಳ್
ವೃಷ್ಟಿರೂಪದಿ ನಿಳಿವ ಸೃಷ್ಟಿಯ ಸಮಷ್ಟಿಯಂ?
–ಕವಿಕ್ರತುದರ್ಶನಂ, ಪು.೧೧

ರಚಿಸಿದ ಒಬ್ಬ ಕವಿಯು ತನ್ನಿಂದ ಹೊರಬಂದ ಕಾವ್ಯಕ್ಕೆ ತನ್ನೊಬ್ಬನೇ ಒಡೆಯನಾಗಲಾರ. ಏಕೆಂದರೆ ಆ ಕೃತಿಗೆ ನಾವೆಲ್ಲರೂ ಕವಿಗಳೇ. ಅಥವಾ ಗತಶತಮಾನಗಳ ಹಿಂದೆ ರಚಿತವಾದದ್ದಾದರೆ ಅಂದಿನ ಜನತೆ ಆ ಮಹಾಕೃತಿಯ ಕರ್ತೃಗಳು. ಅಂದಿನ ಸಮಾಜ, ಅದರ ಸಂಸ್ಕೃತಿ, ರಾಜಕೀಯ ಆರ್ಥಿಕ ಸ್ಥಿತಿಗತಿಗಳು ಜನತೆಯ ಜೀವನ ಮಟ್ಟ ಇವೆಲ್ಲವೂ ಆ ಕಾಲದ ಕವಿಯ ಮೂಲಕ ಹೊರಬಂದಿರುತ್ತವೆ, ಅಷ್ಟೇ. ಬಾಳೇ ಅದರ ಬುನಾದಿ.[೫] ಒಂದು ವೇಳೆ ಕವಿ 'ತನ್ನ ಕೃತಿ ಇದು'. 'ನಾನೇ ರಚಿಸಿದ ಮಹಾಕಾವ್ಯ' ಎಂದು ಹೆಮ್ಮೆಯಿಂದ ಹೇಳಿಕೊಂಡರೂ ಸಂಪೂರ್ಣವಾಗಿ ಅದು ಅವನದಲ್ಲ. ಅವನ ಮೂಲಕ ಹಾದು ಬಂದದ್ದು ಎಂದು ಹೇಳಬೇಕಾಗುತ್ತದೆ. ಏಕೆಂದರೆ ಒಂದು ಸಾಮೂಹಿಕ ಶಕ್ತಿಯ ಪ್ರಭಾವಕ್ಕೆ ಕವಿಶಕ್ತಿ ಸಿಕ್ಕಿಕೊಂಡಿರುತ್ತದೆ.[೬] ಒಂದು ಜನಾಂಗದ ಗುಪ್ತವಾದ ಹಾಗೂ ಸುಪ್ತವಾದ ಚೇತನ ಒಬ್ಬ ವ್ಯಕ್ತಿಯ ಮೂಲಕ ಹೊರಹೊಮ್ಮುತ್ತದೆ. ಆದ್ದರಿಂದ ಕಾವ್ಯ ಕವಿಗೆ ಮಾತ್ರ ಸಂಬಂಧಿಸಿದ್ದು ಎಂದು ಹೇಳಿದರೆ ತಪ್ಪಾಗುತ್ತದೆ.

ಕೋಟಿ ಕೋಟಿ ಜನತೆಯ ಅಂತರಂಗದಲ್ಲಿ ಯಾವುದೋ ಒಂದು ಮಹತ್ತರವಾದ ಆಕಾಂಕ್ಷೆ ಅಡಗಿರುತ್ತದೆ. ಆದರೆ ಹೊರಬರುವ ಚೈತನ್ಯ ಅದಕ್ಕಿರುವುದಿಲ್ಲ. ಎಲ್ಲರ ಹೃದಯ ಗಹ್ವರದಲ್ಲೂ ಅದು ಸೇರಿಕೊಂಡು 'ಅದು' ಬೇಕು; ಅದು ಬೇಕು' ಎಂದು ಸುಮ್ಮನೆ ಒರಲುತ್ತಿರುತ್ತದೆ ತನ್ನಲ್ಲಿ ತಾನೇ. ಅದೊಂದು ರೀತಿಯ ಮೂಕ ವೇದನೆಯಾಗಿರುತ್ತದೆ. ಆದರೂ ಯಾರಿಗೂ ಹೇಳಿಕೊಳ್ಳುವ ಶಕ್ತಿ ಅದಕ್ಕಿರುವುದಿಲ್ಲ. ಅಂತಹ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿ ಹುಟ್ಟಿ ಆ ಯುಗದ, ಆ ಜನದ ಆಶಾಗೀತಕ್ಕೆ ತಾನೊಂದು ಕೊಳಲಾಗುತ್ತಾನೆ, ಕಂಠ(mouthpiece of the age)ವಾಗುತ್ತದೆ. ಆತ

---

೫. "A great book grows directly out of life; in reading it, we are brought into large. close and fresh relations with life, and in that fact lies the final explanation of its power. Literature is a vital record of what men have seen in life. What they have experienced of it. What they have thought and felt about those aspects of it which have the most immediate and enduring interest for all of us. It is thus fundamentals an expression of life through the medium of language."

W.H. Hudson, *An Introduction to the Study of Literature, P. 10*

೬. 'Great poetry draws its strength from the life of mankind. and we completely miss its meaning if we to derive it from personal factors. Whenever the collective unconscious becomes a living experience and is brought to bear upon the conscious outlook of an age, this event is a creative act which is of importance to everyone living in that age. A work of art is produced that contains whay may truthfully be called a message to generations of men.'

C.G. Jung, *The Modern Man is Searchof a Soul.* P. 191.

ತನ್ನ ಕಾಲದ ಜನತೆಯ ಮುಖ್ಯವಾಣಿಯಾಗುತ್ತಾನೆ. ಆಶೋತ್ತರಗಳಿಗೆ ನಿಧಿಯೂ, ಬೇಡಿಕೆಯ ಪ್ರತಿನಿಧಿಯೂ ಆಗಿ ನಿಲ್ಲುತ್ತಾನೆ. ತನ್ನ ಕಾಲದ 'ಯುಗವಾಣಿ'ಯೇ ತಾನಾಗುತ್ತಾನೆ. ಅವರ ಅಭಿಪ್ರಾಯ ಅಭಿಲಾಷೆಗಳನ್ನು ನಿವೇದಿಸುವ ನಿವೇದಕನಾಗುತ್ತಾನೆ.

ಶ್ರೀ ಕುವೆಂಪು ಅವರೇ ಒಂದೆಡೆಯಲ್ಲಿ ಹೇಳುವಂತೆ,

**ಕವಿಯ ಹೃದಯವೊಂದು ವೀಣೆ;**
**ಲೋಕವದನು ಮಿಡಿವುದು.**
**ವ್ಯಕ್ತಿತನವೆ ಕವಿಗೆ ಇಲ್ಲ;**
**ಅವನು ಇಲ್ಲ ಅಥವ ಎಲ್ಲ;**
**ಎಂತೊ ನಾಡಿನೊಡಲ ನಾಡಿ**
**ಎಂತುಟಾಸೆಯಿಹುದೊ ನೋಡಿ,**
**ಎಂತೊ ಜನದ ಮೂಕವಾಣಿ,**
**ಅಂತೆ ತಂತಿ ನುಡಿವುದು!**[೭]

ಆದ್ದರಿಂದ ಕಾವ್ಯ ಎನ್ನುವುದು ಕೇವಲ ಒಬ್ಬ ವ್ಯಕ್ತಿಯ ರಚನೆಯಲ್ಲ. ಅದು ಆ ಯುಗದ ಜನಮನ ಶಕ್ತಿ. ಡಿ.ವಿ.ಜಿ. ಯವರೂ ಇದೇ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ. '....ಕವಿ ಹೃದಯದಿಂದ ಲೋಕವು ಹೊರಡಿಸಿದ ಸಂದೇಶವೇ ಕಾವ್ಯ.'[೮]

ನಲ್ಲಿಯ ಬಾಯಲ್ಲಿ ನೀರು ಬಂದಮಾತ್ರಕ್ಕೆ ಅದರ ಹೊಟ್ಟೆಯಲ್ಲೇ ನೀರು ಉದಯವಾಗುವುದಿಲ್ಲ. ಅದಕ್ಕೆ ಹಿನ್ನೆಲೆಯಾಗಿ ಸಾಗರ ನಿಂತಿದೆ, ಸೂರ್ಯನ ಪ್ರೇಮ ಹರಡಿದೆ, ಮೊಡದ ಮೋಡಿ ಸೇರಿದೆ, ಮಿಂಚಿನ ಸಂಚು ಬೆರೆತಿದೆ; ಮಳೆ ನೀರಿನ ಅವತಾರ, ಮಣ್ಣಿನ ಮಮತೆ, ಯಂತ್ರದ ಶ್ರಮ ಎಲ್ಲಾ ಸೇರಿದೆ! ಹನಿ ನೀರಿನ ಸೃಷ್ಟಿಗೆ ವಿಶ್ವದ ಅನೇಕಾನೇಕ ಶಕ್ತಿಗಳ ಕೈವಾಡ ನಡೆದಿರುವುದು ಕಾಣುತ್ತದೆ. ಅಂತೆಯೇ ಕಾವ್ಯಗಂಗೆ ನವತರಂಗೆಯಾಗಿ ಪ್ರವಹಿಸಬೇಕಾಗಿದ್ದರೆ ಅನೇಕ ವ್ಯಕ್ತಿಗಳ, ಅನೇಕ ಶಕ್ತಿಗಳ ಅವಿಶ್ರಾಂತ ದುಡಿಮೆ ಇದೆ.

ಕವಿ, ವಿಶೇಷವಾಗಿ ನಲ್ಲಿಯ ಕೊಳಾಯಿಯಂತೆ ಕಾವ್ಯಗಂಗೆ ಪ್ರವಹಿಸಲು ತಾನೊಂದು ಸಾಧನವೆನಿಸುತ್ತಾನೆ. ಅಂತೆಯೇ, ಜನತೆಯ ಮಧ್ಯದಲ್ಲಿ ತಾನೂ ಬಾಳು ನಡೆಸುತ್ತಿರುವ ಕವಿ, ಜೀವನದ ಸುರವನ್ನು ಹೀರಿಕೊಂಡು ತನ್ನ ಆತ್ಮವನ್ನು ಪುರಿಪುಷ್ಟವನ್ನಾಗಿಸಿ, ಸಂಸ್ಕೃತಿಯಿಂದ ಸಂಸ್ಕಾರ ಹೊಂದಿ, ತನ್ನ ಧರ್ಮ ದೈವಾದಿಗಳಿಂದ ಪೋಷಿತನಾಗಿ,

---

೭. ಕವಿಯ ಹೃದಯವೊಂದು ವೀಣೆ, ಪು.೬೫, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ.

೮. ಜೀವನ ಸೌಂದರ್ಯ ಮತ್ತು ಸಾಹಿತ್ಯ – ಡಿ.ವಿ.ಜಿ.

ಸತತ ಅಭ್ಯಾಸ, ಶ್ರಮ ಇತ್ಯಾದಿಗಳಿಂದ ಹದನಾಗಿ, ಹಸನಾಗಿ, ದೈವದತ್ತ ಪ್ರತಿಭೆಯಿಂದ ದೀಪ್ತನಾಗಿ ಒಂದು ಮಹಾಕೃತಿಗೆ ಜನ್ಮ ಕೊಡುತ್ತಾನೆ. ಶ್ರೀರಾಮ ಚಂದ್ರನಂತಹ ಪುರುಷ ಪುಂಗವನ ಅವತಾರಕ್ಕೆ ಅವೆಷ್ಟು ಶಕ್ತಿಗಳು ಶ್ರಮಿಸಿದುವೋ ಅಷ್ಟೇ ಶಕ್ತಿಗಳು ಮಹಾಕವಿಯ ಅಥವಾ ಮಹಾಕಾವ್ಯದ ಅವತಾರಕ್ಕೆ ದುಡಿಯಬೇಕಾಗುತ್ತದೆ. ಆದ್ದರಿಂದ ಮಹಾಕೃತಿಯ ಅಥವಾ ಮಹಾವ್ಯಕ್ತಿಗಳ ಸೃಷ್ಟಿ ಅವತಾರಗಳಿಗೆ ಸಾಮೂಹಿಕ ಪ್ರಜ್ಞೆ ಬಹುಮಟ್ಟಿಗೆ ಕಾರಣವಾಗುತ್ತದೆ.

ಯೂಂಗ್ ಹೀಗೆ ಹೇಳುತ್ತಾನೆ–

> "The is effected by the collective unconscious in that a poet, a seer or a leader allows himself to the guided by the unexpressed desire of his times and shows the way, by word or deed, to the attainment of that which everyone blindly craves and expects..."[9]

ಈ ಸಾಮೂಹಿಕ ಪ್ರಜ್ಞೆ ಒಂದು ವಿಧವಾದ ಅನಭಿವ್ಯಕ್ತ ಶಕ್ತಿ. ಇದು ಹಲವರ ಮೂಕ ನಿರೀಕ್ಷಣೆ, ಕುರುಡು ಕಾಣಿಕೆ ಆಗಿದ್ದು, ವಾಙ್ಮಯ ರೂಪದಲ್ಲೋ, ಕ್ರಿಯಾರೂಪದಲ್ಲೋ ಅಭಿವ್ಯಕ್ತವಾಗಿ ಜಗತ್ತಿಗೆ ಮಾರ್ಗದರ್ಶಕವಾಗುತ್ತದೆ. ಅದು ಅವತಾರವಾಗಬಹುದು, ಅಥವಾ ಆವಿರ್ಭಾವವಾಗಬಹುದು, ಅಂತೂ ಆ ಯುಗ ಮನಸ್ಸಿನ ಅಭಿವ್ಯಕ್ತಿಯಾಗಿ ನಿಲ್ಲುತ್ತದೆ.

ಈ ರೀತಿಯ ಸಾಮೂಹಿಕ ಮೂಕ ಪ್ರಜ್ಞೆ ಅಥವಾ ಅಭೀಪ್ಸೆ ಇವುಗಳ ಸಿದ್ಧಿಗೆ ವಿಶ್ವ ಶಕ್ತಿಯ ಪೂರ್ಣಾನುಗ್ರಹವೂ ಅತ್ಯವಶ್ಯಕವಾಗಿ ಬೇಕು. ಯುವ ಶಕ್ತಿ ನೀರಿಗೆ ತಂಪನ್ನೂ, ಗಾಳಿಗೆ ವೇಗವನ್ನೂ, ಸೂರ್ಯನಿಗೆ ತೇಜಸ್ಸನ್ನೂ, ಚಂದ್ರನಿಗೆ ಕಾಂತಿಯನ್ನೂ, ನಕ್ಷತ್ರಗಳಿಗೆ ನಗೆಯನ್ನೂ, ಹೂವಿಗೆ ಪರಿಮಳವನ್ನೂ, ಹಕ್ಕಿಗೆ ಹಾಡನ್ನೂ, ಕಡಲಿಗೆ ಘನತ್ವವನ್ನೂ ಕೊಟ್ಟಿತೋ ಅದೇ ಶಕ್ತಿ ಉಳಿಯಲ್ಲಿ ಕುಳಿತು ಶಿಲ್ಪಿಯನ್ನೂ ಮೂಡಿಸಿದೆ, ಲೇಖನಿಯಲ್ಲಿ ಅಡಗಿ ಕವಿಯನ್ನು ಕಾಣಿಸಿದೆ. ವಿಶ್ವದ ಅಣುರೇಣು ತೃಣಕಾಷ್ಟದಲ್ಲಿ ಅಡಗಿರುವ ಋತುಶಕ್ತಿ ಅದು; ನಿಸರ್ಗದ ಗರ್ಭದಲ್ಲಿ ನಿರಂತರವೂ ಪ್ರವಹಿಸುತ್ತಿರುವ ನಿಗೂಢ ಶಕ್ತಿ ಅದು. ಅದೇ ಜಗತ್‌ಶಕ್ತಿ, ಪರಾತ್ಪರ ಶಕ್ತಿ, ಆದಿಶಕ್ತಿ! ಈ ಆದಿಶಕ್ತಿಯ ಪೂರ್ಣ ಕೃಪೆಗೆ ಯಾವನು ಪಾತ್ರನಾಗುತ್ತಾನೋ ಅವನೇ ಮಹಾಪುರುಷ, ಮಹಾಕವಿ, ದಿವ್ಯದರ್ಶಿ, ಮಹರ್ಷಿ, ದೇವರ್ಷಿ, ತತ್ತ್ವವೇತ್ತ, ಲೋಕ ನಾಯಕ. ಆದ್ದರಿಂದ ಮಹಾಕವಿಯ ಅವತಾರಕ್ಕೆ ಅಥವಾ ಮಹಾಕಾವ್ಯದ ಅವಿರ್ಭಾವಕ್ಕೆ ಆ ಆದಿಶಕ್ತಿಯ ಅನುಗ್ರಹ ಅನವರತವೂ ಬೇಕು.

---

9. C.G. Jung, op-cit, PP. 191-2.

ವಿಶ್ವಕವಿ ರವೀಂದ್ರರು ಹೀಗೆ ಹೇಳಿದ್ದಾರೆ– "ಭಗವಂತನ ಆನಂದವನು ಪ್ರಕೃತಿಯಲ್ಲಿಯೂ, ಮಾನವ ಚರಿತ್ರೆಯಲ್ಲಿಯೂ ತನ್ನನ್ನು ತಾನೇ ಸೃಷ್ಟಿಮಾಡಿಕೊಳ್ಳುತ್ತದೆ. ಮನುಷ್ಯನ ಹೃದಯವು ಸಾಹಿತ್ಯದಲ್ಲಿ ತನ್ನನ್ನು ತಾನೇ ಸೃಷ್ಟಿಮಾಡಿಕೊಂಡು ವ್ಯಕ್ತವಾಗಲು ಪ್ರಯತ್ನಿಸುತ್ತಿದೆ. ಈ ಪ್ರಯತ್ನಕ್ಕೆ ಕೊನೆಯಿಲ್ಲದಿರುವುದೊಂದು ವಿಚಿತ್ರ. ಕವಿಗಳು ಮಾನವ ಹೃದಯದ ಈ ಚಿರಂತನ ಪ್ರಯತ್ನದ ಉಪಲಕ್ಷ ಮಾತ್ರ. ಭಗವಂತನ ಆನಂದ ಸೃಷ್ಟಿಯು ತನ್ನೊಳಗಿಂದ ತಾನೇ ಹೊರಹೊಮ್ಮಿದೆ."[೧೦] ಮಾನವ ಹೃದಯದ ಆನಂದ ಸೃಷ್ಟಿಯು ಅದರ ಪ್ರತಿಧ್ವನಿ. ಈ ಜಗತ್ ಸೃಷ್ಟಿಯ ಅನಂತ ಗೀತದ ಝೇಂಕಾರವು, ನಮ್ಮ ಹೃದಯ ವೀಣೆಯ ತಂತಿಯನ್ನು ಸರ್ವತಾ ಮಿಡಿಯುತ್ತಿರುತ್ತದೆ. ಆ ಮಾನಸ ಸಂಗೀತ, ಭಗವಂತನ ಸೃಷ್ಟಿಯ ಪ್ರತಿಘಾತದಿಂದ ನಮ್ಮ ಮನಸ್ಸಿನಲ್ಲಿ ಹುಟ್ಟಿ ಉಂಟಾಗುವ ಸೃಷ್ಟಿಯ ಆವೇಗ ಇವುಗಳ ವಿಕಾಸವೇ ಸಾಹಿತ್ಯ. ವಿಶ್ವದ ಉಸಿರು ನಮ್ಮ ಚಿತ್ತದ ಕೊಳದಲ್ಲಿ ಯಾವ ರಾಗಿಣಿಯನ್ನು ಬಾರಿಸುವುದೋ ಸಾಹಿತ್ಯವೂ ಅದನ್ನೇ ಸ್ಪಷ್ಟವಾಗಿ ಪ್ರಕಾಶಪಡಿಸಲು ಪ್ರಯತ್ನಿಸುತ್ತದೆ. ಸಾಹಿತ್ಯವು ಒಬ್ಬ ವ್ಯಕ್ತಿಯದಲ್ಲ. ರಚಿಸಿದವನದ್ದಲ್ಲ. ಅದು ದೈವವಾಣಿ.[೧೧]

ಷೆಲ್ಲಿಯೂ ಸಹ 'ಕಾವ್ಯ ಅದೊಂದು ರೀತಿಯ ದೈವವಾಣಿ[೧೨] (Poetry is indeed something divine) ಎನ್ನುತ್ತಾನೆ. ಇಂತಹ ದಿವ್ಯಚೇತನವೊಂದು ವ್ಯಕ್ತಿಯೊಬ್ಬನ ಹೃದಯಕ್ಕೆ ಅವತರಿಸಿ ಮತ್ತೆ ಹೊರಬಂದರೆ ಅದಕ್ಕೆ ಮಹತ್ಕೃತಿ ಎಂದು ಪೂಜ್ಯತೆ ದೊರೆಯುತ್ತದೆ; ಅವನಿಗೆ ಮಹಾಕವಿ ಅಥವಾ ಮಹಾತ್ಮ ಎಂಬ ಮಾನ್ಯತೆ ಲಭಿಸುತ್ತದೆ. ಆದ್ದರಿಂದ ಈ ಮಾನ್ಯತೆಯನ್ನೂ, ಮಹಾತ್ಮ್ಯೆಯನ್ನೂ, ಮಹಾಕವಿ ಪಟ್ಟವನ್ನೂ ವ್ಯಕ್ತಿಯೋರ್ವನಿಗೆ ದೊರಕಿಸಿಕೊಟ್ಟದ್ದು ಆ ಅವ್ಯಕ್ತ ಶಕ್ತಿ. ಅದರ ಕೃಪೆಗೆ ಪಾತ್ರನಾದ ವ್ಯಕ್ತಿ 'ವೀರನಾರಾಯಣನೆ ಕವಿ; ಲಿಪಿಕಾರ ಕುಮಾರ ವ್ಯಾಸ'[೧೩] ಎಂದೊ, 'ವೀಣೆಯಿಂಗಾನಮಂ

---

೧೦. The earth is His joy: His joy is the sky;
His joy is the flashing of the sun and the moon;
His joy is the beginning, the middle, and the end;
His joy is eyes, darkness and light.
Oceans and waves are His joy;
His joy the Saraswati, the Jamuna and the Ganges.
The Master is one: and life and death,
Union and separation are all His plays of joy.
- Rabindranat Tagore, *personality,* P.74.

೧೧. 'ಸಾಹಿತ್ಯ' – ಶ್ರೀ ಎ.ಎನ್. ನರಸಿಂಹಯ್ಯ.

೧೨. English Critical Essays (Nineteenth Century). A Defence of Potry-P.31.

೧೩. ಕುಮಾರವ್ಯಾಸ.

ನುಡಿಸುವಂದದೊಳೆಲ್ಲ ವಾಣಿಯಿಂ ಕವಿತೆಯಂ ಪೇಳಿಸಿದನ್'[೧೪] ಎಂದೊ, 'ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸಿನ ಮೇರುಕೃತಿ, ಮೇಣ್ ಜಗದ್ಭವ್ಯ ರಾಮಾಯಣಂ'[೧೫] ಎಂದೊ ಹೇಳಿಕೊಳ್ಳಲೇಬೇಕಾಗುತ್ತದೆ.

ಆದ್ದರಿಂದ ಕೃತಿಯ ಆವಿರ್ಭಾವಕ್ಕೆ ಕವಿ ಒಂದು ಸಾಧನ; ಕವಿಯೇ ಕೃತಿಯ ವಶ. ಒಂದು ವೇಳೆ ಕೃತಿಯೇ ಕವಿಯ ಅಧೀನದಲ್ಲಿರುವುದಾಗಿದ್ದಿದ್ದರೆ ಕೋಲ್‌ರಿಜ್ ನಿಜಕ್ಕೂ 'ಕೂಬ್ಲಾಖಾ' ಕವಿತೆಯನ್ನು ಪೂರ್ಣಗೊಳಿಸುತ್ತಿದ್ದ. ಆದರೆ ಅದು ಸಾಧ್ಯವಾಗಲಿಲ್ಲ. ಆ ಕವಿತೆ ಆರಂಭದ ಅರುವತ್ತು ಎಪ್ಪತ್ತು ಸಾಲುಗಳಲ್ಲೇ ನಿಲ್ಲಬೇಕಾಯಿತು. ಅವನನ್ನು ಆವರಿಸಿದ್ದ ಶಕ್ತಿ ಯಾವನೋ ಗೆಳೆಯ ಬಾಗಿಲು ತಟ್ಟಿದಾಗಲೇ ಮಾಯವಾಗಿತ್ತು. ಆದ್ದರಿಂದಲೇ ಒಂದು ಸುದೀರ್ಘ ಕಾವ್ಯ ತುಂಡು ಕೃತಿಯಗಿ ಉಳಿಯಬೇಕಾಯಿತು.

ಕವಿಯಾದವನು ತಾನೇ ತನ್ನ ಕೃತಿಯ ಸಂಪೂರ್ಣ ಅರ್ಥ ಕೊಡುವವನೆಂದು ಹೇಳಿ ಕೊಂಡರೆ ಅದು ಅರ್ಥಹೀನ. ಏಕೆಂದರೆ ಪ್ರತಿಯೊಂದು ಮಹಾಕೃತಿಯೂ ವೇದಗಳಂತೆ ಅಪೌರುಷೇಯ. ಹಲವು ಕವಿಗಳಿಗೂ ಇದು ಅನುಭವಕ್ಕೆ ಬಂದಿರುವ ವಿಷಯ. ನಿದರ್ಶನಕ್ಕೆ ಗಯಟೆ ಮಹಾಶಯನ ಜೀವನದ ಒಂದು ಘಟನೆಯನ್ನು ನೆನೆಯಬಹುದು. ಒಂದೆಡೆಯಲ್ಲಿ ಆತ ಹೀಗೆ ಹೇಳಿಕೊಳ್ಳುತ್ತಾನೆ – "ಅನೇಕ ವೇಳೆ ನನ್ನ ಕೃತಿಗಳು ನನಗೆ ಹೊಸದಾಗಿ ಕಾಣುತ್ತವೆ. ಇಂದು ನಾನು ಫ್ರೆಂಚ್‌ನಲ್ಲಿ ಒಂದು ಪ್ರಬಂಧವನ್ನು ಓದುತ್ತಾ, 'ಈ ಮನುಷ್ಯ ಪರವಾಗಿಲ್ಲ. ಚೆನ್ನಾಗಿಯೇ ಬರೆದಿದ್ದಾನೆ. ಇದನ್ನು ನಾನು ಹೇಳಿದ್ದರೂ ಬೇರೆ ರೀತಿಯಲ್ಲಿ ಹೇಳುತ್ತಿರಲಿಲ್ಲ' ಎಂದುಕೊಂಡೆನು. ಆಮೇಲೆ ಚೆನ್ನಾಗಿ ನೋಡುವಲ್ಲಿ ನನಗೆ ಹಾಗೆ ತೋರಿದ ವಾಕ್ಯಗಳು ನನ್ನ ಕೃತಿಯಿಂದ ಫ್ರೆಂಚ್ ಭಾಷೆಗೆ ಹಾಕಿದ್ದ ವಾಕ್ಯಗಳೆಂಬುದು ತಿಳಿಯಿತು."

ಈ ವ್ಯತ್ಯಾಸ ಕಾಣುವುದು ಕವಿ ಆ ಶಕ್ತಿಯ ಸೆಲೆಯಿಂದ ದೂರನಾಗಿ ಓದುಗನಂತೆ ಕುಳಿತಾಗ.

೪

'ಮಹಾಕಾವ್ಯದ ಆವಿರ್ಭಾವಕ್ಕೆ ಕವಿ ಸಾಧನ!'

'ವಿಶ್ವಾತ್ಮನ ದಿವ್ಯವಾಣಿಯ ಮಂಜುಳಗಾನಕ್ಕೆ ನಿಮಿತ್ತ ಮಾತ್ರನಾದ ಕೊಳಲು!'

'ನೀರು ನಿಸರ್ಗದತ್ತ; ಮಾನವಸೃಷ್ಟಿಯೇನಲ್ಲ. ಅವನು ಅದರ ಪ್ರಕಾಶನಕ್ಕೆ ತಾನೊಂದು ಕೊಳವೆ ಅಥವಾ ನಲ್ಲಿ. ಅಂತೆಯೇ ಕವಿಯಾದವನು ಕಾವ್ಯದ ಪ್ರಕಾಶನಕ್ಕೆ ತಾನೊಂದು ನಿಮಿತ್ತ ಮಾತ್ರ ಕೊಳಾಯಿ.'

---

೧೪. ಲಕ್ಷ್ಮೀಶ.

೧೫. ಶ್ರೀ ಕುವೆಂಪು.

ಇಂತಹ ಅನೇಕ ಮಾತುಗಳನ್ನು ನಾವು ಕೇಳುತ್ತಲೇ ಇದ್ದೇವೆ; ಹಲವು ವೇಳೆ ನುಡಿಯುತ್ತಲೂ ಇದ್ದೇವೆ. ಆದರೆ ಅಕ್ಷರಶಃ ಕವಿ ಹಾಗೇ ಎಂದು ಭಾವಿಸಿದರೆ ತಪ್ಪಾಗುತ್ತದೆ. ಏಕೆಂದರೆ ಮಹತ್ಕೃತಿಯ ಪ್ರಕಾಶನಕ್ಕೆ ಪಾತ್ರನಾಗುವ ವ್ಯಕ್ತಿ ನಿರ್ಜೀವಿಯೂ ಅಲ್ಲ, ನಿಷ್ಕ್ರಿಯ ವಸ್ತುವೂ ಅಲ್ಲ. ಆತ ಕ್ರಿಯಾಶೀಲ ಶಕ್ತಿ; ಬಹುವೇಳೆ ರಾಷ್ಟ್ರದ ಕುಂಡಲಿನೀ ಶಕ್ತಿಯೇ ತಾನಾಗಿರುತ್ತಾನೆ. ಅನಭಿವ್ಯಕ್ತ ಶಕ್ತಿಯೊಂದು ತನ್ನಲ್ಲಿ ಪ್ರವಹಿಸಬೇಕಾದರೆ ಅದಕ್ಕೆ ತಕ್ಕ ಅರ್ಹತೆಯನ್ನು ಅವನು ಸಂಪಾದಿಸಿಕೊಂಡೇ ಇರಬೇಕು; ಇರುತ್ತಾನೆ.

ಆತನಲ್ಲಿ ಪ್ರಮುಖವಾಗಿ ಎರಡು ಅಂಶಗಳು ತುಂಬಿರುತ್ತವೆ–ಒಂದು ವ್ಯಕ್ತಿ ಅಂಶ, ಮತ್ತೊಂದು ವಿರಾಟ್ ಅಂಶ. ಒಂದು ವ್ಯಷ್ಟಿಚಿತ್, ಮತ್ತೊಂದು ಸಮಷ್ಟಿಚಿತ್ ಎನ್ನುತ್ತಾರೆ. ಅದನ್ನೇ ನಾವು ವ್ಯಕ್ತಿ ಮತ್ತು ವ್ಯಕ್ತಿತ್ವ ಎಂದು ಹೆಸರಿಸಬಹುದು. ಇವೆರಡಕ್ಕೂ ಇರುವ ಬಾಂಧವ್ಯ ಬಹಳ ವೈಶಿಷ್ಟ್ಯಪೂರ್ಣವಾದದ್ದು. "ಒಂದು ಮೃತ್ತಿಕೆಯ ಮೂರ್ತಿ, ಮತ್ತೊಂದು ಚಿನ್ಮಯದ ಚೇತನ; ಒಂದು ವಿಶ್ವಾತ್ಮನ ವ್ಯಕ್ತರೂಪ, ಮತ್ತೊಂದು ಅವ್ಯಕ್ತಶಕ್ತಿ; ಒಂದು ತಂತಿ, ಮತ್ತೊಂದು ವಿದ್ವತ್ತು; ಒಂದು ಭೂತಿ, ಮತ್ತೊಂದು ವಿಭೂತಿ!"[೧೬]

ಈ ದೃಷ್ಟಿಯಲ್ಲಿ ಗಮನಿಸದಾಗ ಕವಿ ಒಂದು ಕಡೆ ಪುರುಷ (Person), ಮತ್ತೊಂದು ಕಡೆ ಪುರುಷಕಾರ (Personality) ಆಗಿ ಕಾಣುತ್ತಾನೆ. ಅಂದರೆ ಒಂದು ರೂಪದಲ್ಲಿ ವ್ಯಕ್ತಿಯಾಗಿಯೂ, ಮತ್ತೊಂದು ರೂಪದಲ್ಲಿ ಶಕ್ತಿಯಾಗಿಯೂ ಗೋಚರಿಸುತ್ತಾನೆ. ಆದ್ದರಿಂದ ಮಹಾಕಾವ್ಯ ಅಥವಾ ಮಹತ್ಕೃತಿಯ ಸೃಷ್ಟಿಗೆ ಈ ವ್ಯಕ್ತಿ ಮತ್ತು ಶಕ್ತಿಗಳ ಸಂಯೋಗವೇ ಕಾರಣ. ಒಂದರದ್ದು ಪ್ರಯತ್ನ, ಮತ್ತೊಂದರದ್ದು ಫಲ!

ಕವಿಕೃತಿಯಲ್ಲಿ ಅಭಿವ್ಯಕ್ತವಾಗುವುದು ವ್ಯಕ್ತಿವಿರಾಟ್! ಅಂದರೆ ವಿರಾಟ್‌ಶಕ್ತಿ ಯಾವಾಗ ವ್ಯಕ್ತಿಯಲ್ಲಿ ಮೈತುಂಬಿ ಬರುತ್ತದೋ ಆಗಲೇ ಕಾವ್ಯ ಸೃಷ್ಟಿಯಾಗುವುದು. ಆಗ ಆ ವ್ಯಕ್ತಿ ನಿಜಕ್ಕೂ ನಾವೆಲ್ಲರೂ ಆಶ್ಚರ್ಯಪಡುವಂತಾಗಿರುತ್ತಾನೆ. ಏಕೆಂದರೆ ಅವನ ವೈಯಕ್ತಿಕ ಬಾಳನ್ನು ನಾವು ಕಂಡಿರುತ್ತೇವೆ, ಅರಿತಿರುತ್ತೇವೆ. ಅವನು ಹಿಂದೆಂದೂ ಹೇಳದ್ದನ್ನು ಆಗ ಹೇಳುತ್ತಾನೆ. ಎಂದೂ ಕಾಣದ್ದನ್ನು ಆಗ ಕಂಡು ನಮಗೆ ಕಾಣಿಸಿಕೊಳ್ಳುತ್ತಾನೆ. ಅಂತಾಗುವುದಕ್ಕೆ ಅವನಲ್ಲಿ ಮೈಯ್ಯಂಡಿರುವ ಆ ವಿರಾಟ್‌ಶಕ್ತಿಯ ಪ್ರಭಾವ. ಸಮಷ್ಟಿಮಾನವ, ವ್ಯಷ್ಟಿಮಾನವನನ್ನು ಪ್ರವೇಶಿಸಿ, ಆವರಿಸಿ, ಆಕ್ರಮಿಸಿ, ಆವಿಷ್ಟವಾಗಿರುತ್ತಾನೆ. ಆಗಲೇ ಕಾವ್ಯಾವತಾರವಾಗುವುದು. ತನಗೆ ಅದರ ಅರಿವಿರಲಿ ಇಲ್ಲದಿರಲಿ ಕವಿ ಅದರ ಪೂರ್ಣ ಪ್ರಭಾವಕ್ಕಂತೂ ಸಿಕ್ಕಿಕೊಂಡಿರುತ್ತಾನೆ.[೧೭]

---

೧೬. ವಿಭೂತಿಪುರುಷರು–(ವಿಭೂತಿ, ಪು.i)– ಸಾ.ಶಿ. ಮರುಳಯ್ಯ.

೧೭. 'The Work of the poet comes to meet the spiritual need of the society in which he lives and for this reason his work means more to him than to his personal fate, whether he is aware of this or not.

- C.G. Jung, op-cit. P.198.

ಇಂತಹ ವಿಶ್ವಶಕ್ತಿಯ ಪೂರ್ಣ ಪ್ರಭಾವಕ್ಕೆ ಅಥವಾ ಪ್ರಕಾಶನಕ್ಕೆ ಸಾಧನವಾದ ಕವಿ ಸಾಕಷ್ಟು ಸಮರ್ಥನಿರುತ್ತಾನೆ. ಏಕೆಂದರೆ ಹೇಡಿಯ ಕೈಯಲ್ಲಿ ವಜ್ರಾಯುದ್ಧವಿದ್ದರೆ ಅದರಿಂದೇನೂ ಪ್ರಯೋಜನವಿಲ್ಲ; ಅಂತೆಯೇ ಶೂರನ ಕೈಯಲ್ಲಿ ಒಂದು ಜೋಳದ ಕಡ್ಡಿಯಿದ್ದರೆ ಅದೂ ಉಪಯೋಗವಿಲ್ಲ. ಆದ್ದರಿಂದ ವ್ಯಕ್ತಿ ಮತ್ತು ಶಕ್ತಿಗಳೆರಡೂ ಸಮರ್ಥವಾಗಿರಬೇಕಾಗುತ್ತದೆ. ಆ ಅಮೂಲ್ಯವಾದ ಪುರುಷಕಾರ ಅಥವಾ ವ್ಯಕ್ತಿತ್ವದ ಅವತಾರಕ್ಕೆ ಕವಿ ಸಾಕಷ್ಟು ಶಕ್ತನಾಗಿರುತ್ತಾನೆ. ಅಲ್ಲದೆ ವ್ಯಕ್ತಿತ್ವ ಎಂಬುದು ಸಾಧಾರಣವಾದದ್ದೇನಲ್ಲ. ಅದು 'ನಿಜಕ್ಕೂ ಒಂದು ಕೊಡುಗೆ, ಪರಮಾತ್ಮನ ಅಮೂಲ್ಯವಾದ ವರ. ಅದು ಲಭಿಸುವುದು ಕೇವಲ ವಿಶಿಷ್ಟ ಮಾನವನಿಗೆ ಮಾತ್ರ.'[೧೮] ಆದ್ದರಿಂದ ಆ ವರವನ್ನು ಪಡೆದಿರುವ ವ್ಯಕ್ತಿ ಅದೆಷ್ಟು ತಪಸ್ಸು ಮಾಡಿರಬೇಕು? ಅದೆಷ್ಟು ಜನ್ಮಗಳಲ್ಲಿ ಸಂಸ್ಕಾರ ಹೊಂದಿ ಸಂಪದ್ಭರಿತನಾಗಿರಬೇಕು? ಅಂದ ಮೇಲೆ ಅವನ ಪಾತ್ರ ಕಡಿಮೆಯೇ ಅಥವಾ ಕೀಳೇ?

ಅಲ್ಲ.

ವಿದ್ಯುತ್ತಿನ ಪ್ರವಾಹಕ್ಕೆ ತಾಮ್ರದ ತಂತಿಯೇ ಆಗಬೇಕು; ಬೇರೆ ಲೋಹವಾದರೆ ಅದರಿಂದ ನಮ್ಮ ಉದ್ದೇಶ ಸಾಧಿತವಾಗುವುದಿಲ್ಲ. ಅಂದರೆ ಅನುಭವ ಪ್ರಕಾಶನಕ್ಕೆ ಸಮರ್ಥನಾದ ವ್ಯಕ್ತಿಯೇ ಆಗಬೇಕು. ಅವನ ಮೂಲಕವೇ, ಅಥವಾ ಅವನ ಮಾಧ್ಯಮದಲ್ಲೇ ಅನುಭವದ ಆಗರವಾದ ಕಾವ್ಯ ಹೊರ ಬರಬೇಕು. ಅಂದಮೇಲೆ ಆ ವಿರಾಟ್ ಅಂಶಕ್ಕೆ ವಾಹನವಾಗುವ ವ್ಯಕ್ತಿ ಅದೆಷ್ಟು ಸಮರ್ಥನಿರಬೇಕು? ನೀರೇನೋ ನಿಸರ್ಗದತ್ತ; ಅಗೆಯುವುದು, ಅಗೆಯದಿರುವುದು ನೀರಿಗೇನೂ ಅಗತ್ಯವಿಲ್ಲ. ಆದರೆ ಅಗೆದರೆ ತಾನೇ ನೀರು ಬರುವುದು. ಹಾಗೆಯೇ ಕವಿಪ್ರಯತ್ನ ಮೊದಲು ಇದ್ದೇ ತೀರಬೇಕು. ಅನಂತರ ಆದಿಶಕ್ತಿಯ ಅವತಾರ, ಮಹಾಕೃತಿಯ ಆವಿರ್ಭಾವ.

ನಲ್ಲಿ ನೀರನ್ನು ಸೃಷ್ಟಿಸುವುದಿಲ್ಲ; ನೀರನ್ನು ಹಾಯಿಸುತ್ತದೆ!

ನಿಜ.

ಆದರೆ ತನ್ನಲ್ಲಿ ನೀರು ಹಾದುಹೋಗುವಷ್ಟು ಸಾಮರ್ಥ್ಯವನ್ನಾದರೂ ಪಡೆದಿರಬೇಕಲ್ಲವೇ? ಅಲ್ಲದೆ ಎಲ್ಲಕ್ಕಿಂತಲೂ ಮೊದಲು ನಲ್ಲಿ ಸ್ವಚ್ಛವೂ ಆಗಿರಬೇಕಲ್ಲವೇ? ಏಕೆಂದರೆ ಅದು ತುಕ್ಕುಹಿಡಿದು ತೂತು ಬಿದ್ದಿದ್ದರೆ ನೀರು ಕೆಟ್ಟು ಬರುತ್ತದೆ. ಕೆಲವು ವಿಷಕ್ರಿಮಿಗಳಿಗೆ ಜನ್ಮಕೊಟ್ಟು, ವೃದ್ಧಿಯಾಗಲು ಆಶ್ರಯ ಕೊಟ್ಟು ಅನೇಕ ಸಾಂಕ್ರಾಮಿಕ ರೋಗಗಳಿಗೆ ತಾನೇ ಕಾರಣವಾಗುತ್ತದೆ. ಆದ್ದರಿಂದ ಕಾವ್ಯಗಂಗೆಯು ಹರಿದು ಬರಲು ಆಶ್ರಯವಿತ್ತ ಕೊಳಾಯಿಯೂ ಸಾಕಷ್ಟು ಬಲಯುತವಾಗಿರಬೇಕು, ಪರಿಶುದ್ಧವೂ ಆಗಿರಬೇಕು.

---

೧೮. ಪೂರ್ವೋಕ್ತ–ಸಾಶಿಮ.

ಎಷ್ಟರಮಟ್ಟಿಗೆ ಕನ್ನಡಿ ಶುದ್ಧವಾಗಿರುತ್ತದೆಯೋ ಅಷ್ಟರ ಮಟ್ಟಿಗೆ ಅದು ವಸ್ತುಸ್ವರೂಪವನ್ನೂ ಮತ್ತು ತನ್ನ ಸ್ವರೂಪವನ್ನೂ ವ್ಯಕ್ತಪಡಿಸುತ್ತದೆ. ಅಂತೆಯೇ ವ್ಯಕ್ತಿಯ ಪಾತ್ರವೂ ಮುಖ್ಯ ಎಂಬುದು ಇದರಿಂದ ವೇದ್ಯವಾಗುತ್ತದೆ.

ಆದರೆ ನಾವು ಹಿಂದೆಯೇ ಗಮನಿಸಿದಂತೆ ವ್ಯಕ್ತಿ ಸಂಪೂರ್ಣವಾಗಿ ಆ ವಿಶಿಷ್ಟ ವಿಶ್ವಶಕ್ತಿಯ ಪ್ರಭಾವಕ್ಕೆ ಸಿಕ್ಕಿ, ಸಂಪೂರ್ಣವಾಗಿ ತನ್ನನ್ನು ತಾನು ಇಲ್ಲಗೈದುಕೊಂಡಿರುತ್ತಾನೆ. ವಿದ್ಯುತ್ ಮುಟ್ಟಿದ ಕಬ್ಬಿಣ, ಆದ್ಯಂತ ಅಯಸ್ಕಾಂತವಾಗುವಂತೆ, 'ಅವನು ಇಲ್ಲ, ಅಥವಾ ಎಲ್ಲ!' ಆಗಿರುತ್ತಾನೆ. ಅಂತಹ ವಿರಾಟ್ ಅಂಶಕ್ಕೆ ವ್ಯಕ್ತಿ ತಲೆಬಾಗಲೇಬೇಕಾಗುತ್ತದೆ. ತಲೆ ಬಾಗುತ್ತಾನೆ. ಆಗ ಮಹಾಕವಿ ತನ್ನ ಕಾವ್ಯಕ್ಕೆ ತಾನು ಮಣಿಯುವುದು ಅನಿವಾರ್ಯವಾಗುತ್ತದೆ. ಅಂದರೆ ಮಹಾಕವಿ ಕಾವ್ಯಕ್ಕೆ ಮಣಿದರೆ ಅದರ ಸೃಷ್ಟಿಗೆ ಕಾರಣಕರ್ತೃಗಳಾದ ಸಮಸ್ತ ವಿಶ್ವಚೇತನಗಳಿಗೂ ಮಣಿದಂತೆ ಅಲ್ಲವೇ!.

'ವ್ಯಕ್ತಿತ್ವ' (Personality) ಎನ್ನುವುದು ವಿಶ್ವದ ಕಾವ್ಯಮೀಮಾಂಸಾ ಕ್ಷೇತ್ರದಲ್ಲಿ ಇಂದಿಗೂ ಒಂದು ಬಿಡಿಸಲಾಗದ ಒಗಟೆ. ಇದರ ಬಗ್ಗೆ ಅನೇಕಾನೇಕ ವಿರೋಧಾಭಿಪ್ರಾಯ ಗಳು ಮೂಡಿ ಮೇಲೆದ್ದಿವೆ. ಅದಕ್ಕಿನ್ನೂ ಒಂದು ನಿರ್ದಿಷ್ಟ ನಿಲುವು ದೊರೆತಿಲ್ಲ. ಆದ್ದರಿಂದ ಈ ಹಿಂದಿನ ವಿಚಾರವಿಶ್ಲೇಷಣೆಯಲ್ಲಿ ಬಳಸಲಾಗಿರುವ 'ವ್ಯಕ್ತಿತ್ವ'ದ ವ್ಯಾಪ್ತಿಗೆ ಅಥವಾ ಅದಕ್ಕೆ ಕೊಟ್ಟಿರುವ ಆ ವಿಶಿಷ್ಟಾರ್ಥಕ್ಕೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. 'ವ್ಯಕ್ತಿತ್ವ' ಎಂಬ ಶಬ್ದದ ಅರ್ಥಕೋಶ ಅಷ್ಟು ವಿಶಾಲವಾದದ್ದೆಂದರೆ ತಪ್ಪೂ ಅಲ್ಲ.

ಇರಲಿ.

ಈ ವ್ಯಕ್ತಿತ್ವ ಕಾವ್ಯದಲ್ಲಿ ಇದೆಯೇ ಇಲ್ಲವೇ? ಇದ್ದರೆ ಅದರ ಸ್ವರೂಪವೆಂಥದು? ಅದರ ಸ್ಥಾನಮಾನಗಳೇನು? ಅದಿಲ್ಲದೆ ಕಾವ್ಯವಿಲ್ವೇ ಇತ್ಯಾದಿಯಾಗಿ ಭಾರೀ ಗೊಂದಲವೆದ್ದಿದೆ ಈ ಕ್ಷೇತ್ರದಲ್ಲಿ.

'ಕಾವ್ಯವೆನ್ನುವುದು ವ್ಯಕ್ತಿತ್ವದ ಅಭಿವ್ಯಕ್ತಿ (Expression of Personality)' ಎನ್ನುವುದು ಹಡ್ಸನ್ ಮೊದಲಾದವರ ವಾದ.[೧೯] ಆದರೆ ಟಿ.ಎಸ್. ಎಲಿಯಟ್ ಮೊದಲಾದವರದ್ದು ಅದಕ್ಕೆ ವಿರುದ್ಧವಾದ ವಾದ. 'ಕಾವ್ಯದಲ್ಲಿ ವ್ಯಕ್ತಿತ್ವ ಅಭಿವ್ಯಕ್ತಗೊಳ್ಳುವುದಕ್ಕಿಂತ ಹೆಚ್ಚಾಗಿ ಲಯವಾಗುತ್ತದೆ' (Extinction of Personality)[೨೦] ಎಂತಲೂ, 'ಅದು ವ್ಯಕ್ತಿತ್ವದ ಅಭಿವ್ಯಕ್ತಿ ಅಲ್ಲ, ಅದು ವ್ಯಕ್ತಿತ್ವದ ವಿಮೋಚನೆ (Escape from Personality)'[೨೧] ಎಂತಲೂ ವಾದವಿವಾದವಿದೆ.

---

೧೯. 'A great book owes its greatness in the first instance to the greatness of the personality which gave it life.' —W.H. Hudson, op-cit.-P.15.

೨೦. 'The progress of an artists is a continual self-sacrifice, a continual extinction of Personality.' —T.S. Eliot- *Selected Essays.*

೨೧. 'Poetry is not a turning loose of emotion, but an escape from emotion; it is not the expression of personality, but an escape from personality.' —Ibid

ಆದರೆ ಕಾವ್ಯ ಎಂದೆಂದಿಗೂ ವ್ಯಕ್ತಿತ್ವದ ಅಭಿವ್ಯಕ್ತಿ. 'ವ್ಯಕ್ತಿತ್ವವು ಉಸಿರೂದಿದಾಗಲೆ ಕಾವ್ಯದ ಹಸಿರು ಎಲ್ಲೆಡೆಗೆ ಕಾಣುವುದು: ಇಲ್ಲದಿದ್ದರೆ ಎಲ್ಲವೂ ಬಟ್ಟಬಯಲು, ನೀರಸವಾದ ಪ್ರದೇಶ.[೨೨]

ಒಂದು ವೇಳೆ ಭಾವವಿಮೋಚನೆ ಎಂದೋ ಅಥವಾ ಭಾವವಿರೇಚನವೆಂದೋ ಹೇಳಿಕೊಂಡರೂ ಸ್ವಲ್ಪ ತಡೆಯುತ್ತದೆ. ಆದರೆ ವ್ಯಕ್ತಿತ್ವ ವಿಮೋಚನೆ ಎನ್ನುವುದು ಅರ್ಥವಿಲ್ಲದ್ದು. ಎಲಿಯಟ್‌ನ ದೃಷ್ಟಿಯಲ್ಲಿ escape ಎನ್ನುವುದು ಪಲಾಯನ ಎಂಬ ಅರ್ಥವನ್ನು ಕೊಡುತ್ತದೆ. ವ್ಯಕ್ತಿತ್ವದ ಪಲಾಯನವಾದರೆ ಅಥವಾ ಲಯಗೊಂಡರೆ ವ್ಯಕ್ತಿ ಒಬ್ಬ ಏನುಮಾಡಲು ಸಾಧ್ಯ? ವಿದ್ಯುತ್ತಿಲ್ಲದ ತಂತಿ ತಾನಾಗುತ್ತಾನೆ. ಜ್ಯೋತಿ ಬೇಕಿದ್ದರೆ ವಿದ್ಯುತ್ ಬೇಕು; ವ್ಯಕ್ತಿತ್ವ ಬೇಕು; ಅದು ಪೂರ್ಣ ಪ್ರಕಾಶನಕ್ಕೆ ಬರಬೇಕು; ಅದು ತಾನೇತಾನಾಗಿ ಅಭಿವ್ಯಕ್ತವಾಗಬೇಕು. ಬಹುಶಃ ಆತ 'Extinction of Personality' ಅನ್ನುವಾಗ Personality ಎಂಬುದನ್ನು 'ಅಹಂ' ಎಂಬ ಅರ್ಥದಲ್ಲಿ ಗ್ರಹಿಸಿದ್ದಿರಬೇಕು. ಆದರೆ personality ಅಥವಾ ವ್ಯಕ್ತಿತ್ವ, ಮೊದಲೇ ತಿಳಿಸಿದಂತೆ, ಪರಮಾತ್ಮನ ವಿಶಿಷ್ಟವಾದ ಕೊಡುಗೆ. ಅದು ಸಮಷ್ಟಿಚಿತ್! ಈ ವಿಶಿಷ್ಟಾರ್ಥ ಗ್ರಹಣ ಮಾಡಿದವರಿಗೆ ಸಂದೇಹ ಉದ್ಭವಿಸಲಾರದು.

ಇಂಥ ವಿಚಾರಗಳಲ್ಲಿ ನಾವು ನಮ್ಮ ಧರ್ಮ, ಸಂಸ್ಕೃತಿ, ಸಂಸ್ಕಾರ ಇತ್ಯಾದಿಗಳನ್ನು ನೋಡಬೇಕಾಗುತ್ತದೆ. ನಾವು ಆತ್ಮ ಅವಿನಾಶಿ ಎಂದು ತಿಳಿದವರು. 'ನೈನಂ ಛಂದತಿಶಸ್ತ್ರಾಣಿ, ನೈನಂ ದಹತಿ ಪಾವಕಃ' ಎಂದು ನುಡಿದವರು, ಜನ್ಮಾಂತರಗಳಲ್ಲಿ ನಂಬಿಕೆ ಉಳ್ಳವರು. ಪಾಶ್ಚಾತ್ಯರಂತೆ ಕ್ಷಣಿಕ ತೃಪ್ತರಲ್ಲ. ನಾವು ಮೊದಲೇ ತಿಳಿದಂತೆ ಮಹಾ ವ್ಯಕ್ತಿ ಅಥವಾ ಮಹಾಕೃತಿ ಮೊದಲಾದವುಗಳ ಅವತಾರಕ್ಕೆ ವಿಶ್ವದ ಅದೆಷ್ಟೋ ಶಕ್ತಿಗಳು ಶ್ರಮಿಸುತ್ತವೆ; ಶ್ರಮಿಸುತ್ತಿವೆ. ಒಬ್ಬ ಕವಿಯಾಗಲು ಅವನ ಸುತ್ತಮುತ್ತಣ ವಾತಾವರಣ ಪ್ರೇರೇಪಿಸಿದೆ. ಪ್ರಕೃತಿ ಘೋಷಿಸಿದೆ, ಸಂಸ್ಕಾರ ಪಾಲಿಸಿದೆ, ಸಂಸ್ಕೃತಿ ಹಾಲೂಡಿದೆ, ಧರ್ಮ ಹೆಜ್ಜೆ ಇಡಿಸಿ ನಡೆಸಿದೆ. 'ಶ್ರೀ ಕುವೆಂಪು' ಆಗಬೇಕಿದ್ದರೆ ಅದಕ್ಕೆ ಹಿನ್ನೆಲೆಯಾಗಿ ಅನೇಕ ಗಮನೀಯ ಶಕ್ತ್ಯಂಶಗಳಿವೆ. 'ಮಾನ್ಯ ಕುಪ್ಪಳ್ಳಿಯ ವೇಂಕಟಾರ್ಯಂಗ ಮೇಣ್ ಪೂಜ್ಯೆ ಸೀತಮ್ಮನೆಂಬಭಿಧಾನದ ಮಾತೃ ದೇವತೆಗೆ ಸಂಭವಿಸಿ'ದ ಪುಣ್ಯವಂತ ಪುಟ್ಟಪ್ಪನೆಂಬ ಹೆಸರಿನ ವ್ಯಕ್ತಿಯೆಂದರೆ

---

೨೨. ಕವಿ ಕಾವ್ಯ ಮಹೋನ್ನತಿ–ವಿ.ಕೃ. ಗೋಕಾಕ್.

೨೩. ಇದಕ್ಕೆ ಒಂದು ನಿದರ್ಶನ ನನ್ನಲ್ಲಿದೆ. ಶ್ರೀಮಾನ್ ಜಿ. ಬ್ರಹ್ಮಪ್ಪನವರು ನನಗೆ 'ಮಲೆನಾಡ ಒಕ್ಕಲಿಗರು ಜೈನರೆ?' ಎಂಬ ಲೇಖನವೊಂದನ್ನು ಕಳುಹಿಸಿದ್ದರು. ಅದರಲ್ಲಿ ಬಹು ಸ್ವಾರಸ್ಯವಾಗಿ ಈ ವಿಷಯದ ಬಗ್ಗೆ ವಿಚಾರ ಮಾಡಿದ್ದಾರೆ. ಈಗಲೂ ಶಿವಮೊಗ್ಗ ಜಿಲ್ಲೆಯ ಒಕ್ಕಲಿಗರು ಮದುವೆ ಮುಂಜಿಗಳಲ್ಲಿ 'ಜೈನೆಡೆ' ಇಡುವುದು ರೂಢಿ. ಆದರೆ ಮಲೆನಾಡ ಒಕ್ಕಲಿಗರು ಜೈನರೋ, ಅಲ್ಲವೋ ಅದು ಅಪ್ರಕೃತ. ನಮಗೆ ಇಷ್ಟು ಸಾಕು, ಜೈನ ಸಂಪರ್ಕ ಪ್ರಾಚೀನ ದಿನಗಳಿಂದಲೂ ಈ ಬನವಾಸಿ ಪ್ರಾಂತಕ್ಕಿದೆ. ಆ ಪ್ರಾಂತದಲ್ಲಿ ಹುಟ್ಟಿ ಬೆಳೆದ ಶ್ರೀ ಕುವೆಂಪು ಅವರಲ್ಲಿ ಸುಮಾರು ಹತ್ತು ಶತಮಾನಗಳ ಅನಂತರದಲ್ಲಿ ತಲೆದೋರಿದೆ ಎಂಬುದು ಮಾತ್ರ.

ಸಾಲದು. ಅದಕ್ಕೆ ಮಲೆನಾಡಿನ ಪ್ರಕೃತಿ, ಪೂರ್ವಜನ್ಮದ ಸಂಸ್ಕಾರ ಮತ್ತು ಪಂಪನ ಕಾಲದಿಂದಲೂ ನಿಗೂಢವಾಗಿ ನಿರಂತರವಾಗಿ ಹರಿದು ಬರುತ್ತಿರುವ ಜೈನ ಕಾವ್ಯಶಕ್ತಿ[೨೩] ಇವೆಲ್ಲವೂ ಇರಬಹುದು.

ಪಾಶ್ಚಾತ್ಯರು, ಅದರಲ್ಲೂ ಆಧುನಿಕ ಮನಶ್ಶಾಸ್ತ್ರಜ್ಞರು 'ವ್ಯಕ್ತಿತ್ವ' ಎಂಬುದನ್ನು ಇಷ್ಟು ವಿಶಿಷ್ಟಾರ್ಥದಲ್ಲಿ ಗ್ರಹಿಸಿಲ್ಲ. ಅವರು ಕವಿಯ ಆತ್ಮಶ್ರೀಗಿಂತ ಹೆಚ್ಚಾಗಿ ದೇಹಶ್ರೀಯನ್ನೇ ಬಣ್ಣಿಸಿರುವಂತೆ ತೋರುತ್ತದೆ. ಅಲ್ಲದೆ ಅವರಲ್ಲಿ Personality ಎಂಬ ಪದ ಹುಟ್ಟಿದ್ದೂ ಬಹಿರಂಗ ಭೂಷಣ ಎಂಬರ್ಥದಲ್ಲೇ,[೨೪] ಅಂತ ರಂಗ ಕಾಂತಿ ಅಥವಾ ಸತ್ವ ಎಂದು ಬರಲಿಲ್ಲ.

ಆಧುನಿಕ ಮನಶ್ಶಾಸ್ತ್ರದ ಪಿತಾಮಹ ಮಿಯರ್ಸನು ಮೊಟ್ಟಮೊದಲು ಈ Personality ಯನ್ನು ಗುರುತಿಸಿ ತಿಳಿಸಿದ.[೨೫] ಅವನ ಅನಂತರದ ಮನಶ್ಶಾಸ್ತ್ರಜ್ಞರೂ, ಹಲವು ಕಾವ್ಯ ಮೀಮಾಂಸಕರೂ ಅದರ ಬಗ್ಗೆ ವಿಶೇಷ ಜಿಜ್ಞಾಸೆ ನಡೆಸಿದ್ದಾರೆ. ಆದರೆ ಎಲ್ಲರೂ ಕಂಡಿರುವುದು ಅದು ವ್ಯಕ್ತಿಯ ಹೊರವೇಷವೆಂದೇ! ಅಥವಾ ವ್ಯಕ್ತಿಯ ಶೀಲ ಎಂದೇ. ಯಾರೂ ಅದನ್ನು ಪರಮಾತ್ಮನ ಕೊಡುಗೆ ಅಥವಾ ಆತ್ಮಶ್ರೀ ಪರವಾದ ಆಂತರಿಕ ಶೋಭೆಯೆಂದು ತಿಳಿಸಿಲ್ಲ. ಆದರೆ ಟೆರ್ರಲ್ ಮೊದಲಾದವರು ಇದರ ವೈಶಿಷ್ಟ್ಯದ ಬಗ್ಗೆ ಹಲವು ಅಂಶಗಳನ್ನು ಸ್ಪಷ್ಟಪಡಿಸಿದ್ದಾರೆ. ವ್ಯಕ್ತಿತ್ವ, (Personality) ಕೇವಲ ಬುದ್ಧಿಜನ್ಯವಲ್ಲವೆಂತಲೂ, ಅದು ಮಾನವ ದುಡಿದು ಸಂಪಾದಿಸುವ ವಸ್ತುವಲ್ಲವೆಂತಲೂ ಟೆರ್ರಿಲ್ ಒಪ್ಪಿಕೊಳ್ಳುತ್ತಾನೆ.[೨೬]

ಈ ವ್ಯಕ್ತಿತ್ವದ ಅಸ್ತಿತ್ವವನ್ನು ಕುರಿತು ಸವಿಸ್ತಾರವಾಗಿ ತಿಳಿಸಿದ್ದಾರೆ. ಶ್ರೀ ಉದಯಶಂಕರ. "The two elements of selfhood, uniqueness (eachness) and universality (allness) grow and go together"- ಎಂಬ ಡಾ॥ ಸರ್ವೆಪಲ್ಲಿ ರಾಧಾಕೃಷ್ಣರವರ ಅಭಿಪ್ರಾಯವನ್ನು ಮಂಡಿಸುತ್ತಾ ಶ್ರೀ ಉದಯಶಂಕರ್, ಈ ರೀತಿ ಹೇಳಿದ್ದಾರೆ–

---

೨೪. The term is derived from the PERSONA. which originally denoted the theatrical mask used by the actors in Greek drama and later adopted by Classical Roman Players to denote their specific roles on the stage.
—G.W. Allport (Quoted in *Development of Personality*- P. 8-Uday Shankar).

೨೫. *Human Personality* —F.W.H. Myers.

೨೬. It is a highly significant, thought generally neglected fact that those creations of the human mind, which have borne pre-eminently the stamp of originally and greatness, have not come from within the region of Consciousness. They have come from beyond Consciousness. knocking at its door for admittance; they have flowed into it, sometimes slowly as if by seepage, but often with a burst of overwhelming power.' —G.N.M. Tyrrell (The Personality of Man)

'Personality is more than individuality since it includes those relationships through which it functions as a participant in Superindividual units of family and other social groups.'[27]

ಮನಶ್ಶಾಸ್ತ್ರ ಎಷ್ಟೇ ಬೆಳೆದರೂ ಆಧ್ಯಾತ್ಮಿಕ ಭೂಮಿಕೆಯನ್ನು ದಾಟಿ ಹೋಗಲಾರದು.

ವ್ಯಕ್ತಿಗೆ ಮೀರಿದ್ದು ವ್ಯಕ್ತಿತ್ವ. ಕವಿಗಿಂತ ದೊಡ್ಡದು ಕಾವ್ಯ. ಆದ್ದರಿಂದಲೇ ಮಹಾ ಕವಿ ತನ್ನ ಕಾವ್ಯಕ್ಕೆ ತಾನು ಮಣಿಯುವುದು. ವಿಶ್ವಾತ್ಮನ ನಿತ್ಯಗೀತೆ ಕವಿಯ ಮೂಲಕವೇ ಹಾಯ್ದು ಬರಬೇಕು.[೨೮] ಅದಕ್ಕೆ ಆತ ಯೋಗ್ಯ ಪಾತ್ರನಾಗಬೇಕು. ಆ ಕವಿಯೇ ನಿಜಕ್ಕೂ ಧನ್ಯ! ಮೊದ ಮೊದಲು ಸಾಧಕನಾದ ಈತ ಅಂತ್ಯದಲ್ಲಿ ಸಿದ್ಧನೆನಿಸುತ್ತಾನೆ. ಷಟ್‌ಸ್ಥಲದ 'ಶರಣ'ನ ಸ್ಥಿತಿಯನ್ನು ಪಡೆಯುತ್ತಾನೆ. ಆ ಸಿದ್ಧಿ ದೊರೆತಾಗ ಮಾತ್ರ ಅವನೇ ತಾನಾಗುತ್ತಾನೆ. 'ಸಹಸ್ರಶೀರ್ಷ ಸಹಸ್ರ ಬಾಹುವೂ, ಅತ್ಯತ್ತಿಷ್ಠ ದಶಾಂಗುಲನೂ' ಆಗಿ ನಿಲ್ಲುತ್ತಾನೆ.

**ಪೂಷನ್ನೇ ಕರ್ಷೇಯಮ ಸೂರ್ಯ ಪ್ರಾಜಾಪತ್ಯ**
**ವ್ಯೂಹ ರಶ್ಮೀನ್ ಸಮೂಹ ತೇಜೋ ।**
**ಯತ್ತೇ ರೂಪಂ ಕಲ್ಯಾಣ ತಮಂ ತತ್ತೇ**
**ಪಶ್ಯಾಮಿಯೋಽ ಸಾವಸೌ ಪುರುಷಃ ಸೋಽಹಮಸ್ಮಿ ॥**[೨೯]

**॥ಓಂ ತತ್‌ಸತ್॥**

---

27. *Development of Personality* - P. 15- Uday Shankar.

28. "The Great Master plays; the breath is his own, but the instrument is our mind through which he brings out his songs of creation, and therefore I know that I am not a mere stranger resting in the wayside inn of this earth on my voyage of existence, but I live in the world; whole life is bound up with mine."-Tagore, *Personality,* P.74.

೨೯. **"**ಹೇ ಸರ್ವಪೋಷಕನೇ, ಸೂರ್ಯನೇ, ಪ್ರಜಾಪತಿಪುತ್ರನೇ, ನಿನ್ನ ಕಿರಣಗಳ ವ್ಯೂಹ ಕಟ್ಟಿ ಅವುಗಳನ್ನು ಏಕೀಕರಿಸು. ಅತ್ಯಂತ ಕಲ್ಯಾಣ ತಮವಾದ ನಿನ್ನ ತೇಜೋರೂಪವು ನನ್ನ ಮುಂದೆ ಕಂಗೋಳಿಸುತ್ತಿರುವುದು. ಅಲ್ಲಿ ಗೋಚರನಾಗುವ, ಅಗೋ ಆ ಪುರುಷನು, ಅವನೇ ನಾನು.**"**– ಈಶಾವಾಸ್ಯೋಪನಿಷತ್–೧೬.

# ಸಾಶಿಮ ಸಾಹಿತ್ಯ ಸಂಪದ

**I. ಕವಿತೆ**

- ಶಿವ ತಾಂಡವ
- ಕೆಂಗನಕಲ್ಲು (ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದ ಕೃತಿ)
- ವಿಪರ್ಯಾಸ
- ಘೋಷವತಿ
- ರಾಸಲೀಲೆ
- ರೂಪಸಿ
- ಸುರಭಿ
- ನನ್ನ ಕವನಗಳು

**II. ಸಂಶೋಧನೆ**

- ಶೂನ್ಯ ಸಂಪಾದನೆಗೊಂದು ಮುನ್ನುಡಿ
- ಮನೀಷ
- ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ (ಪಿಎಚ್.ಡಿ. ಮಹಾಪ್ರಬಂಧ)

**III. ವಿಮರ್ಶೆ**

- ಅಭಿವ್ಯಕ್ತಿ
- ಭಾಸನ ಮಕ್ಕಳು (ದೇವರಾಜ ಬಹದ್ದೂರ್ ಬಹುಮಾನಿತ ಕೃತಿ)
- ಮಾಸ್ತಿಯವರ ಕಾವ್ಯ ಸಮೀಕ್ಷೆ
- ಅನುಶೀಲನ

**IV. ಶಾಸ್ತ್ರಸಾಹಿತ್ಯ**

- ಭಾಷೆ : ಕನ್ನಡ ಭಾಷೆಯ ಚರಿತ್ರೆ
- ವ್ಯಾಕರಣ : ಕೇಶಿ ರಾಜನ ಗರಡಿಯಲ್ಲಿ (ಸಹಯೋಗ ಡಾ। ಶಾಲಿನಿ ವಿ. ಪ್ರಭು)
- ಛಂದಸ್ಸು : ಛಂದೋ ಪ್ರಬಂಧಗಳು (ಸಹಯೋಗ ಶ್ರೀಮತಿ ತ್ರಿವೇಣಿ ಶಿವಕುಮಾರ್)
- ಕಲೆ : ಕಲಾ ಸಮೀಕ್ಷೆ
- ಕಾವ್ಯ ಮೀಮಾಂಸೆ : ಅನ್ವಯಿಕ ಕಾವ್ಯ ಮೀಮಾಂಸೆ

**V. ನಾಟಕ**

- ಮರೀಬೇಡಿ (ಪ್ರಹಸನ)
- ವಿಜಯ ವಾತಾಪಿ (ರಂಗನಾಟಕ)
- ಸ್ವಪ್ನ ನಾಟಕ (ಅನುವಾದ)

- ಎರಡು ನಾಟಕಗಳು (ರೂಪಾಂತರಗಳು)
- ಶಿಶುಪಾಲ
- ಜಗದಣ್ಣ ಬಸವಣ್ಣ
- ಕೆಲವು ಹಿಂದಿ ಭಾಷಾಂತರಗಳು.

**VI. ಕಥೆ, ಕಾದಂಬರಿ**

- ನೆಲದ ಸೊಗಡು
- ಪುರುಷ ಸಿಂಹ
- ಹೇಮಕೂಟ,
- ಸಾಮರಸ್ಯದ ಶಿಲ್ಪಿ
- ಜನದಪ ಕತೆಗಳು

**VII. ಜೀವನ ಚರಿತ್ರೆ**

- ವಿಭೂತಿ ಪುರುಷರು
- ಭಾರತರತ್ನ
- ಶಿವಮೂರ್ತಿ ಶಾಸ್ತ್ರೀ
- ಕೇಳೂ ಅನಿತಾ
- ಹೂವ ತಂದವರು
- ಅಪರೂಪದವರು
- ಮಹಾ ಪ್ರಸಾದಿ
- ಮುದ್ದಣ ದೇವರು
- ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು
- ಬಲ್ಲವರ ಒಡನಾಟ

**VIII. ಚಿಂತನ ಸಾಹಿತ್ಯ**

- ವಚನ ಚಿಂತನ
- ಮಳ್ಳಿಗೊಂದು ಒಳ್ಳೆ ಮಾತು
- ಬದುಕು ಕ್ರೀಡಾರಂಗ

**IX. ಮುನ್ನುಡಿಗಳು**

- ಸ್ಪಂದನ
- ಅವಲೋಕನ
- ಪ್ರತಿಸ್ಪಂದನ

**X. ಸಂಪಾದಿತ**

- ಕೆಳದಿ ರಾಜಾಭ್ಯುದಯಂ
- ಶ್ರೀ ಮರುಳಸಿದ್ಧೇಶ್ವರ ಮಹಾಪುರಾಣಂ
- ಶ್ರೀ ಚನ್ನಬಸವ ಶಿವಯೋಗಿಗಳ ಚರಿತ್ರೆ
- ಹರಿಹರನ ಹತ್ತು ರಗಳೆಗಳು
- ಕಾವ್ಯಾನಂದ
- ವೀರಶೈವ ವಿಚಾರ ಸಂಕಿರಣ
- ಸಾಹಿತ್ಯೋಪಾಸಕ
- ಶೂನ್ಯ ಸಂಪಾದನೆ : ಒಂದು ಅಧ್ಯಯನ
- ತೋಂಟದಾರ್ಯ ವಚನ ವ್ಯಾಖ್ಯೆ
- ಶ್ರೀ ಸಿದ್ಧಲಿಂಗೇಶ್ವರ ಶತಕಂ
- ಅರುವಿನಾಗರದಲ್ಲಿ
- ಕನಕ ಸಂಪುಟ – ಭಾಗ ೨
- ಅಕ್ಕಗಳ ವಚನಗಳು
- ನೀಲಮ್ಮನ ವಚನಗಳು

**XI. ನೃತ್ಯ ರೂಪಕಗಳು**

- ಸಾಶಿಮ. ನೃತ್ಯರೂಪಕಗಳು (೨೫ ರೂಪಕಗಳು)
- ಸ್ನೋವೈಟ್ ಮತ್ತು..... (೧೦ ರೂಪಕಗಳು)
- ಹೋರಾಟದ ಹೆಜ್ಜೆಗಳು (೮ ನೃತ್ಯ ರೂಪಕಗಳು)

  ಒಟ್ಟು ೪೩ ನೃತ್ಯ ರೂಪಕಗಳು.

**XII. ಇತರೆ**

- ಸಿದ್ಧಗಿರಿ (ಕ್ಷೇತ್ರ ಪರಿಚಯ)
- ಕನ್ನಡ ಪಡೆನುಡಿಗಳು (ಕೋಶ)

**XIII. ಧ್ವನಿ ಸುರಳಿಗಳು :**

- ಬಾರೊ ಮೈಲಾರಕೆ
- ಸ್ನೋವೈಟ್
- ಭಾವ ಸಂಗಮ
- ಮದುವೆ, ಮದುವೆ, ಮದುವೆ
- ಭಾವ ದೀಪ್ತಿ
- ಗೀತ ಭಾರತಿ
- ಎಡೆಯೂರು ಸಿದ್ಧಲಿಂಗೇಶ್ವರ ಭಕ್ತಿ ಗೀತೆಗಳು